ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


ಆಗಸ್ಟ್ 18, 2010 ರೂ. 12/-

ದೇಶಕಾಲ
ಮುಂದುವರಿದ
ಚರ್ಚೆ

...ಳ್ಳಾರಿ ಪ್ರವೇಶ!

...ಸ್
...ಸಿತಿಯೋ
...ರೆಡ್ಡಿ?





ಆನಂದ ಸಾಹುಕಾರನ ಕೊಲೆ ಹಿಂದೆ ಶಾಸಕ ರಾಜೂಗೌಡ?



ಕೊಳ್ಳೇಗಾಲ: ಕುರುಬನಕಟ್ಟೆ ಮಠದಲ್ಲೊಬ್ಬ ಕಳ್ಳ ರೇಚಣ್ಣ!



ನಿರಾಣಿ, ಕಾರಜೋಳ ಸಾಮ್ರಾಜ್ಯದಲ್ಲಿ ದಲಿತರು ಕಾಲಕಸ

...ಂಡ್ಯ-ಹಾಸನ: ಅಂಡರ್‌ವರ್ಲ್ಡ್ ಲಿಂಕ್
...ಪಿಗಳ ಕದನಕ್ಕೆ ಪಾಪದ ಹುಡುಗ ಬಲಿ

ಪಾದಯಾತ್ರೆಯ ಧೂಳು ಪ್ರಜ್ಞಾವಂತರ ಕಣ್ಣಿಗೆ ಬೀಳದಿರಲಿ!

ಕಾಂಗ್ರೆಸ್ಸಿನ ಪಾದಯಾತ್ರೆ ಇದೀಗ ಕಾಂಗ್ರೆಸ್ ಬೆಲ್ಟ್ ಅನ್ನು ದಾಟಿ "ಬಳ್ಳಾರಿ ವಲಯ"ವನ್ನು ಪ್ರವೇಶಿಸಿದೆ. ಕುಂಭಕರ್ಣ ನಿದ್ರೆ ಮಾಡುತ್ತಿದ್ದ ಕಾಂಗ್ರೆಸ್ ನಾಯಕರು ಪೊರೆ ಕಳಚಿಕೊಂಡು ಹೊಸ ಪ್ರಾಯ ಪಡೆದವರಂತೆ ನಡೆಯುತ್ತಿರುವುದನ್ನು ನೋಡಿ ಜನರು ಆಶ್ಚರ್ಯಚಕಿತರಾಗಿದ್ದಾರೆ. ಜನರು ಕುತೂಹಲಕ್ಕೋ, ಆಸಕ್ತಿಗೋ, ಅನುಕಂಪದಿಂದಲೋ ಒಟ್ಟಿನಲ್ಲಿ ದೊಡ್ಡ ಸಂಖ್ಯೆಯಲ್ಲಿ ಸ್ಪಂದಿಸುತ್ತಿರುವುದನ್ನು ನೋಡಿದ ಕಾಂಗ್ರೆಸ್ಸಿಗರಂತೂ ದಿಗ್ಭ್ರಾಂತರಾಗಿದ್ದಾರೆ. ಕೆಲವು ನಾಯಕರಂತೂ ಇದು ಕಾಂಗ್ರೆಸ್ಸಿನ ಪಾದಯಾತ್ರೆಯಲ್ಲ, ಜನಾಂದೋಲನ ಎಂದು ನಂಬಿಕೊಳ್ಳುತ್ತಿದ್ದಾರೆ.

ಅದೇನೇ ಇದ್ದರೂ ಕಾಂಗ್ರೆಸ್ಸಿನ ಈ ಪಾದಯಾತ್ರೆ ಕರ್ನಾಟಕದ ರಾಜಕಾರಣದ ಮಟ್ಟಿಗೆ ಒಂದು ಹೊಸ ವಿದ್ಯಮಾನ. ಹೆಲಿಕಾಪ್ಟರ್ ಯಾತ್ರೆ, ರೆಸಾರ್ಟ್ ಯಾತ್ರೆಗಳನ್ನೂ ನೋಡಿದ್ದ ಜನತೆ ತಮ್ಮ ನಾಯಕರು ತಮ್ಮಂತೆ ಬೀದಿಯಲ್ಲಿ ನಡೆಯುತ್ತಿರುವುದನ್ನು ನೋಡಿ ರೋಮಾಂಚನಗೊಂಡಿದ್ದಾರೆ. ಹೀಗಾಗಿ ಕುತೂಹಲಕ್ಕಾಗಿ ನೆರೆಯುತ್ತಿದ್ದ ಜನತೆ ಅಲ್ಲಲ್ಲಿ ಮಜ್ಜಿಗೆ, ಕಾಫಿಗಳನ್ನು ಕೊಟ್ಟು ಮಾನವೀಯ ಅನುಕಂಪ ತೋರಿಸುತ್ತಿದ್ದಾರೆ. ಅದನ್ನೇ ಕೆಲವು ಕಾಂಗ್ರೆಸ್ ನಾಯಕರು ರಾಜಕೀಯ ಅನುಕಂಪ ಮತ್ತು ರಾಜಕೀಯ ಬೆಂಬಲ ಎಂದು ಅನುವಾದ ಮಾಡಿಕೊಳ್ಳುತ್ತಿರುವುದು ಸಹ ಮತ್ತಷ್ಟು ಅನುಕಂಪ ಹುಟ್ಟಿಸುತ್ತಿದೆ. ಕೆಲವು ಯುವ ಕಾಂಗ್ರೆಸ್ ನಾಯಕಮಣಿಗಳಂತೂ ಗಾಂಧಿ ಮಾಡಿದ ಪಾದಯಾತ್ರೆ ಬಿಟ್ಟರೆ ಈ ಪಾದಯಾತ್ರೆಯೇ ದೇಶದ ಮಟ್ಟಿಗೆ ಬೃಹತ್ ಪಾದಯಾತ್ರೆಯೆಂತಲೂ ಹೇಳಿಕೊಳ್ಳುತ್ತಿದ್ದಾರೆ!

ಈ ಪಾದಯಾತ್ರೆಯಿಂದ "ನಾಡಿನ ರಕ್ಷಣೆ" ಎಷ್ಟರಮಟ್ಟಿಗೆ ಆಗುತ್ತದೆ ಎಂಬುದನ್ನು ನಂತರ ನೋಡೋಣ. ಆದರೆ ಇದರಿಂದ ಕಾಂಗ್ರೆಸ್‌ನಲ್ಲೂ ನಾಡಿನ ರಾಜಕಾರಣದಲ್ಲೂ ಒಂದಷ್ಟು ಹೊಸ ಗಾಳಿ ಬೀಸುತ್ತಿದೆ ಎಂಬುದಂತೂ ನಿಜ. ದಶಕಗಳ ಕಾಲ ಆಡಳಿತ ಅನುಭವಿಸಿದ್ದ ಕಾಂಗ್ರೆಸ್ ಪಕ್ಷ ತಾನೀಗ ಜವಾಬ್ದಾರಿಯುತ ವಿರೋಧ ಪಕ್ಷ ಎಂಬುದನ್ನೇ ಮರೆತು ನಿದ್ದೆ ಮಾಡುತ್ತಿತ್ತು. ಈ ನಾಡು ಕಂಡರಿಯದಂತಹ ದುಷ್ಟ ಮತ್ತು ಭ್ರಷ್ಟ ಸರ್ಕಾರ ಬ್ರಹ್ಮಾಂಡದಷ್ಟು ಭ್ರಷ್ಟಾಚಾರ ಮತ್ತು ದುರಾಡಳಿತ ನಡೆಸುತ್ತಿದ್ದರೂ ಕಾಂಗ್ರೆಸ್ ಪಕ್ಷ ಜನರ ಪರವಾಗಿ ವಿಧಾನ ಸೌಧದಲ್ಲಾಗಲೀ, ಹೊರಗಡೆಯಲ್ಲಾಗಲೀ ಪರಿಣಾಮಕಾರಿಯಾದ ಪ್ರತಿಭಟನೆಯನ್ನೇ ಮಾಡಿರಲಿಲ್ಲ. ಆ ರೀತಿ ಪ್ರತಿರೋಧ ತೋರುವಂತ ನೈತಿಕತೆಯನ್ನು ಕಾಂಗ್ರೆಸ್ ಉಳಿಸಿಕೊಂಡಿಲ್ಲ, ಆದ್ದರಿಂದಲೇ ಬಿಜೆಪಿ ತನ್ನೆಲ್ಲಾ ಹುಳುಕುಗಳನ್ನು ಮುಚ್ಚಿಕೊಳ್ಳಲು ಮಾತೆತ್ತಿದರೆ ಕಾಂಗ್ರೆಸ್ ಇಷ್ಟು ವರ್ಷ ಮಾಡಿದ್ದೇನು ಎಂದು ಕೇಳುತ್ತಾ ಕಾಂಗ್ರೆಸ್‌ನ ಬಾಯಿಬಡಿಯುತ್ತಾ ಬಂದಿದೆ.

ಇದಲ್ಲದೆ ಕಾಂಗ್ರೆಸ್ಸಿನೊಳಗಿನ ಒಳಜಗಳವೂ ಬಿಜೆಪಿಗೆ ಎದುರಾಳಿಯೇ ಇಲ್ಲದಂತೆ ಮಾಡಿತ್ತು. ಹಾಗೆ ನೋಡಿದರೆ ಬಿಜೆಪಿಯೊಳಗಿನ ಒಡಕಿನಿಂದಾಗಿ ಸರ್ಕಾರ ಆಗಾಗ ಬಿಕ್ಕಟ್ಟಿಗೆ ಬೀಳುತ್ತಿರುವುದನ್ನು ಬಿಟ್ಟರೆ ಅದರ ಜನವಿರೋಧಿ ನೀತಿಗಳಿಂದಲ್ಲ, ಅದರ ವಿರುದ್ಧದ ಪ್ರತಿರೋಧದಿಂದಲ್ಲ. ಹೀಗಾಗಿ ತನ್ನ ದುಷ್ಟ ಯೋಜನೆಗಳ ವಿರುದ್ಧದ ಪ್ರತಿರೋಧದ ಬಗ್ಗೆ ಬಿಜೆಪಿ ಸರ್ಕಾರ ಯಾವತ್ತಿಗೂ ತಲೆಯನ್ನೇ ಕೆಡಿಸಿಕೊಂಡಿರಲಿಲ್ಲ. ಇನ್ನು ಕೆಲವು ನಿರ್ದಿಷ್ಟ ಅಪವಾದಗಳನ್ನು ಬಿಟ್ಟರೆ ಪ್ರಾಮಾಣಿಕ ಜನಾಂದೋಲನಗಳು ಸಹ ಈ ಅವಧಿಯಲ್ಲಿ ವಿದುಬ್ಬಸ ಬೀಳುತ್ತಿವೆ. ಕೆಲವು ಅಪರೂಪದ ಅಪವಾದಗಳನ್ನು ಬಿಟ್ಟರೆ ಬಹುಪಾಲು ಮಾಧ್ಯಮಗಳು ಬಿಜೆಪಿಯೊಂದಿಗೆ "ಎಂಬೆಡೆಡ್ ಜರ್ನಲಿಸಂ" ("ಸಹಧರ್ಮಿಣಿ" ಪತ್ರಿಕೋದ್ಯಮ!)ವನ್ನೇ ನಡೆಸುತ್ತಿರುವುದು ಸಹ ಬಿಜೆಪಿಯ ಕೋಮುವಾದ, ಭ್ರಷ್ಟಾಚಾರ, ಸಂಪತ್ತು ಲೂಟಿಗಳನ್ನು ಸರಾಗವಾಗಿ ನಡೆಸಿಕೊಂಡು ಹೋಗಲು ಅನುಕೂಲಕಾರಿಯಾಗಿತ್ತು. ಇದರೊಡನೆ ಹಲವಾರು ಬುದ್ಧಿಜೀವಿಗಳು ಬಿಜೆಪಿ ಅಧಿಕಾರಕ್ಕೆ ಬಂದೊಡನೆ ಅವರ ಕಡೆ "ಮತಾಂತರ" ಮಾಡಿದ್ದು ಸಹ ಬಿಜೆಪಿಯ ದುಷ್ಟತನಕ್ಕೆ ಮುಖವಾಡ ಒದಗಿಸಿತ್ತು. ಹೀಗಾಗಿ ಕೆಲವು ಉದಾಹರಣೆಗಳನ್ನು ಬಿಟ್ಟರೆ ಸಾರಾಂಶದಲ್ಲಿ ಕರ್ನಾಟಕದ ಪ್ರತಿರೋಧೀ ರಾಜಕಾರಣ ಒಂದರ್ಥದಲ್ಲಿ ಕೋಮಾದಲ್ಲಿತ್ತು. ಇಂಥ ಸಂದರ್ಭದಲ್ಲಿ ತನ್ನದೇ ಕಾರಣಗಳಿಗಾಗಿ ಕಾಂಗ್ರೆಸ್ ರೂಪಿಸಿದ ಈ ಪಾದಯಾತ್ರೆ ಅನುದ್ದೇಶಪೂರ್ವಕವಾಗಿಯಾದರೂ ಇತರ ವಲಯದಲ್ಲೂ ಸ್ವಲ್ಪ ಚಲನೆ ತಂದಿರುವುದಂತೂ ನಿಜ. ಆದ್ದರಿಂದಲೇ ಈ ಪಾದಯಾತ್ರೆಯ ಇತಿ ಮತ್ತು ಮಿತಿಗಳ ಬಗ್ಗೆ ಪ್ರಾಮಾಣಿಕವಾಗಿ ಚರ್ಚಿಸಬೇಕಾದ ಅಗತ್ಯವಿದೆ.

ಮೊದಲಿಗೆ ಈ ಪಾದಯಾತ್ರೆ ಇವೆಲ್ಲವನ್ನು ಬದಲಿಸುವಂತ ಪರಿಣಾಮವನ್ನೇನೂ ಬೀರುವುದಿಲ್ಲ ಎಂಬುದು ಗೊತ್ತಿರುವ ಸಂಗತಿ. ಆದರೂ ಅದನ್ನು ಸದ್ಯದ ರಣೋತ್ಸಾಹ ಹಲವರನ್ನು ಒಪ್ಪಿಕೊಳ್ಳಲು ಬಿಡುತ್ತಿಲ್ಲ. ಇದರ ಬಗ್ಗೆ ನಂತರ ಚರ್ಚಿಸೋಣ. ಅದೇನೇ ಇದ್ದರೂ ಒಂದು ವಿರೋಧ ಪಕ್ಷವಾಗಿ ಮಾಡಬೇಕಾದ ಕೆಲಸವನ್ನು ಈಗಲಾದರೂ ಕಾಂಗ್ರೆಸ್ ಪಕ್ಷ ಮಾಡುತ್ತಿರುವುದರಿಂದ ಜನರಿಗೆ "ಕಳೆದುಹೋಗಿದ್ದ" ಒಂದು ವಿರೋಧ ಪಕ್ಷ "ತಾತ್ಕಾಲಿಕವಾಗಿಯಾದರೂ" ಸಿಕ್ಕಂತಾಗಿದೆ. ಅದೇರೀತಿ ಈವರೆಗೆ ಬರೀ ವಿಧಾನಸೌಧದ ಕಡೆಗೆ ಮಾತ್ರ ನಡೆಯುತ್ತಿದ್ದ ರಾಜಕಾರಣಿಗಳು ಈಗ ಅನಿವಾರ್ಯತೆಗೊಳಪಟ್ಟಾದರೂ ಜನರೆಡೆಗೆ ಮತ್ತು ಹಳ್ಳಿಯೆಡೆಗೆ ನಡೆಯುತ್ತಿರುವುದು ಪ್ರಜಾತಂತ್ರಕ್ಕೆ ಒಳ್ಳೆಯದು. 320 ಕಿಮೀ ಉದ್ದದ 15 ದಿನಗಳ ಕಾಲ್ನಡಿಗೆ ಏನಿಲ್ಲವೆಂದರೂ ಕಾಂಗ್ರೆಸ್ಸಿಗರ ದೈಹಿಕ "ಕೊಬ್ಬ"ನ್ನಂತೂ ಇಳಿಸುತ್ತದೆ. ಇದೂ ಸಹ ಕಾಂಗ್ರೆಸ್ ಪಕ್ಷದ ದೈಹಿಕ ಆರೋಗ್ಯಕ್ಕೆ ಒಳ್ಳೆಯದನ್ನು ಮಾಡಬಹುದು.


ಆದರೆ ಈ ರಾಜಕೀಯ ಪಕ್ಷಗಳ ನಿಜವಾದ ಕೊಬ್ಬನ್ನು ಈ ಪಾದಯಾತ್ರೆಗಳು ಕರಗಿಸುವುದೇ? ಕಾಂಗ್ರೆಸ್ ಪಕ್ಷಕ್ಕೆ ಆಗುವ ಒಳಿತನ್ನು ಜನತೆಗೆ ಆಗುವ ಒಳಿತೆಂದು ನಿರೀಕ್ಷಿಸಬಹುದೇ? "ತಾತ್ಕಾಲಿಕ ವಿರೋಧ ಪಕ್ಷ"ವಾಗಿ ಕೆಲಸ ಮಾಡುತ್ತಿರುವ ಕಾಂಗ್ರೆಸ್ ಈ ಪಾದಯಾತ್ರೆಯಿಂದ ನಿಜವಾಗಿ ಜನರ ಪಕ್ಷವಾಗಿ ಬದಲಾಗಿ ಬಿಡುತ್ತದೆಯೇ?


ಸಾಮಾನ್ಯ ಜನರಲ್ಲಿ ಈ ಬಗೆಯ ಅತಿ ನಿರೀಕ್ಷೆ ಅಥವಾ ಉತ್ಸಾಹಗಳು ಇಲ್ಲವಾದರೂ ಈ ನಾಡಿನ ಹಲವು ಪ್ರಜ್ಞಾವಂತರು ಆ ಬಗೆಯ ಪವಾಡಗಳನ್ನು ನಿರೀಕ್ಷಿಸುತ್ತಿದ್ದಾರೆ. ಕೆಲವು ಪ್ರಗತಿಪರ ಬುದ್ಧಿಜೀವಿಗಳು ಈ ಪಾದಯಾತ್ರೆ ಕಾಂಗ್ರೆಸ್ಸನ್ನು "ಪರಿಶುದ್ಧಗೊಳಿಸುತ್ತದೆ", ಏಕೆಂದರೆ "ತನ್ನನ್ನು ತಾನು ಕಷ್ಟಗಳಿಗೆ ಒಡ್ಡಿಕೊಳ್ಳುವುದರ ಮೂಲಕ ವ್ಯಕ್ತಿ ಹಾಗೂ ಪಕ್ಷ ಪರಿಪಕ್ವಗೊಳ್ಳುತ್ತದೆ" ಎಂಬೆಲ್ಲಾ ಆಶಯವನ್ನು ಈ ಪಾದಯಾತ್ರೆಯ ಸುತ್ತಾ ಹುಟ್ಟುಹಾಕುತ್ತಿದ್ದಾರೆ. ಇಂಥವರಲ್ಲಿ ಹಲವರು ಆಗಸ್ಟ್ 9ರಂದು ಕಾಂಗ್ರೆಸ್‌ನ ಬಳ್ಳಾರಿ ರ‍್ಯಾಲಿಯಲ್ಲಿ ಭಾಗವಹಿಸಲೂ ಬಹುದು. ಇಂಥವರು ಈ ನಾಡಿನ ಲೂಟಿ ಸಂಭವಿಸುತ್ತಿರುವುದು ಕೆಲವು ದುಷ್ಟ ವ್ಯಕ್ತಿಗಳಿಂದ ಮತ್ತು ಅವರಿಗೆ ಕುಮ್ಮಕ್ಕಾಗಿರುವ ಕೆಲವು ಶಕ್ತಿಗಳಿಂದ ಎಂದು ಮಾತ್ರ ಭಾವಿಸುತ್ತಾರೆ. ಹೀಗಾಗಿ ಅದಕ್ಕೆ ಎದುರಾಗಿ ಸಜ್ಜನ ವ್ಯಕ್ತಿಗಳು ಸಾತ್ವಿಕ ಪ್ರತಿರೋಧ ತೋರಿದರೆ ವ್ಯವಸ್ಥೆ ಬದಲಾಗುತ್ತದೆ ಎಂಬ ನಂಬಿಕೆ ಇಟ್ಟುಕೊಂಡಿದ್ದಾರೆ. ಇದಕ್ಕೆ ನಮ್ಮ ಹಿರಿಯ ಬುದ್ಧಿಜೀವಿಗಳಾದ ಯು.ಆರ್. ಅನಂತಮೂರ್ತಿಯವರೇ ಒಂದು ದೊಡ್ಡ ಉದಾಹರಣೆ. ಈ ಪಾದಯಾತ್ರೆಯ ಪರಿಣಾಮದ ಕುರಿತು ಅವರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇದೇ ಬಗೆಯ ರಾಜಕೀಯ ಭೋಳೇತನವನ್ನೇ ವ್ಯಕ್ತಪಡಿಸುತ್ತದೆ. ಆದ್ದರಿಂದಲೇ ತುಂಗಭದ್ರ ತೀರದ ಲಕ್ಷಾಂತರ ಜನರೆಲ್ಲಾ ಬೃಹತ್ ಜನಾಂದೋಲನ ಕಟ್ಟಿದ್ದರಿಂದ ಅನಿವಾರ್ಯವಾಗಿ ಸರ್ಕಾರ ಕುದುರೆಮುಖ ಅರಣ್ಯದ ಪ್ರದೇಶದಲ್ಲಿ ಗಣಿಗಾರಿಕೆಯನ್ನು ಕೈಬಿಡಬೇಕಾಗಿ ಬಂದದ್ದು ಕಣ್ಣೆದುರಿಗಿದ್ದರೂ, ತಮ್ಮ ನೇತೃತ್ವದಲ್ಲಿ



ಕೆಲವು ಬುದ್ಧಿಜೀವಿಗಳು ಆಗಿನ ಮುಖ್ಯಮಂತ್ರಿ ಎಸ್. ಎಂ. ಕೃಷ್ಣರನ್ನು ಕಂಡು ಮಾತನಾಡಿದ್ದರಿಂದಲೇ ಗಣಿಗಾರಿಕೆ ನಿಂತಿತೆಂದು ಅನಂತಮೂರ್ತಿ ಅವರು ನಂಬಿಕೊಂಡಿದ್ದಾರೆ.

ಇನ್ನು ಕೆಲವು ಬುದ್ಧಿಜೀವಿಗಳು ಮತ್ತು ಪ್ರಜ್ಞಾವಂತರು ಹೇಗಾದರೂ ಸರಿ ಈ ಪಾದಯಾತ್ರೆಯಿಂದ ಬಿಜೆಪಿಯ ಕೋಮುವಾದೀ ಆಡಳಿತ ಮತ್ತು ರೆಡ್ಡಿಗಳ ಆಟಾಟೋಪಕ್ಕೆ ಕಡಿವಾಣ ಬೀಳುವುದಾದರೆ ಏಕೆ ಬೆಂಬಲಿಸಬಾರದೆಂಬ ತರ್ಕದಲ್ಲಿ ಕಾಂಗ್ರೆಸ್‌ನ ಬಾರಾ ಖೂನ್ ಮಾಫ್ ಮಾಡಿ ಅದರ ಜೊತೆ ಗಟ್ಟಿಯಾಗಿ ನಿಲ್ಲಲು ಹೊರಟಿದ್ದಾರೆ. ಬರಗೂರು ರಾಮಚಂದ್ರಪ್ಪನವರಂಥ ಕೆಲವು ಪ್ರಜ್ಞಾವಂತರಿಗೆ ಈ ಪಾದಯಾತ್ರೆ ಕೇವಲ ರೆಡ್ಡಿ ವರ್ಸಸ್ ಕಾಂಗ್ರೆಸ್ ಆಗುತ್ತಿದೆಯೆಂಬ ಎಚ್ಚರವಿದ್ದರೂ ಅವರು ಅದನ್ನು ಪಾದಯಾತ್ರೆಯ ಪರಿಭಾಷೆಯ ಪ್ರಶ್ನೆಯನ್ನಾಗಿ, ಪಾದಯಾತ್ರೆಯಲ್ಲಿ ಅನುಸರಿಸಬೇಕಾದ ನೈತಿಕ ಸಂಹಿತೆಯ ಪ್ರಶ್ನೆಯನ್ನಾಗಿ ಮಾತ್ರ ನೋಡುತ್ತಿದ್ದಾರೆ. ಅದರಾಚೆಗೆ ಗಣಿಗಾರಿಕೆಯ ಬಗ್ಗೆ ಕಾಂಗ್ರೆಸ್‌ನ ನೀತಿಗಳು ಮತ್ತು ಈ ಪಾದಯಾತ್ರೆಯ ಹಿಂದಿನ ಅವರ ಅಜೆಂಡಾ ಮತ್ತು ಈ ಪಾದಯಾತ್ರಾ ಪ್ರತಿರೋಧ ಸಾರಾಂಶ ನಿಜಕ್ಕೂ "ನಾಡ ರಕ್ಷಣೆ"ಯನ್ನು ಮಾಡುವುದೇ ಎಂಬ ಪ್ರಶ್ನೆಯನ್ನು ಹಾಕಿಕೊಳ್ಳಲು ತಯಾರಿರುವಂತೆ ಕಾಣುತ್ತಿಲ್ಲ.





ಇದು ವಾಸ್ತವವಾಗಿ ನಿತ್ರಾಣಗೊಂಡಿರುವ ಜನಪರ ಜನಾಂದೋಲನಗಳ ನಿಸ್ಸಹಾಯಕ ತಂತ್ರವೆಂದು ನನಗನಿಸುತ್ತದೆ. ಜನಾಂದೋಲನ ಮತ್ತು ಜನಶಕ್ತಿ ಗಟ್ಟಿಯಾಗಿದ್ದಾಗ ಕಾಂಗ್ರೆಸ್‌ನಂಥ ಪಕ್ಷಗಳ ಪ್ರತಿರೋಧವನ್ನೂ ಜನತೆ ತನ್ನ ಒಳಿತಿನ ಅಜೆಂಡಾಗೆ ಪೂರಕವಾಗಿ ಬಳಸಿಕೊಳ್ಳಬಹುದು. ಆದರೆ ಈಗ ಪರಿಸ್ಥಿತಿ ಹಾಗಿಲ್ಲ. ಬದಲಿಗೆ ಅದಕ್ಕೆ ತದ್ವಿರುದ್ಧವಾಗಿ ನಿತ್ರಾಣಗೊಂಡಿರುವ ನಿಸ್ಸಹಾಯಕವಾಗಿರುವ ಜನಪರ ಶಕ್ತಿಗಳ ಹತಾಶೆಯ ಕ್ರಮಗಳು ಪ್ರಜ್ಞಾಪೂರ್ವಕವಾಗಿಯೇ ಕಾಂಗ್ರೆಸ್ಸಿನ ಅಜೆಂಡಾಗಳಿಗೆ ಬಳಕೆಯಾಗುತ್ತಿದೆ.

ಇಷ್ಟಾಗಿ ಸೀಮಿತವಾಗಿ ನೋಡುವುದಾದರೂ ಕಾಂಗ್ರೆಸ್ ಅಜೆಂಡಾ ಜನಪರವಾದದ್ದೇ? ಅಕ್ರಮ ಗಣಿಗಾರಿಕೆಯ ವಿರುದ್ಧ ಕಾಂಗ್ರೆಸ್ ಧ್ವನಿ ಎತ್ತಿದೆ ಸರಿ. ಆದರೆ ನಾಡ ಲೂಟಿಯಾಗುತ್ತಿರುವುದು ಅಕ್ರಮ ಗಣಿಗಾರಿಕೆಯಿಂದಲೋ? ಸಕ್ರಮ ಗಣಿಗಾರಿಕೆಯಿಂದಲೋ? ಬಿಜೆಪಿ ಈ ದೇಶದ ಸಂಪತ್ತನ್ನು ಲೂಟಿ ಮಾಡಲು ಅನುವು ಮಾಡಿಕೊಟ್ಟ ದೇಶದ್ರೋಹಿ ಪಕ್ಷ. ಇದರಲ್ಲಿ ಎರಡು ಮಾತಿಲ್ಲ. ಆದರೆ ಈ ನೀತಿಯಲ್ಲಿ ಬಿಜೆಪಿಗೆ ಮಾರ್ಗದರ್ಶಿ ಸ್ಥಾನದಲ್ಲಿರುವುದು ಕಾಂಗ್ರೆಸ್ಸೇ! ಕೋಮುವಾದವನ್ನು ಜಾರಿಗೆ ತಂದು ಜನರಲ್ಲೇ ಒಡಕನ್ನು ತರುವ ಫ್ಯಾಸಿಸ್ಟ್ ಪಕ್ಷವಾದ ಬಿಜೆಪಿಗಿಂತ ಕಾಂಗ್ರೆಸ್ ಕಡಿಮೆ ಅಪಾಯಕಾರಿ ಎಂಬುದು ನಿಜ. ಆದರೆ ಜಾಗತೀಕರಣ ನೀತಿಯ ಮೂಲಕ ಬಿಜೆಪಿಯ ಫ್ಯಾಸಿಸಮ್ಮಿಗೆ ಬೇಕಾದ ಸಾಮಾಜಿಕ ತಳಹದಿ ಒದಗಿಸಿ ಕೊಟ್ಟು ಆರ್ಥಿಕ ಫ್ಯಾಸಿಸಮ್ಮಿಗೆ ಚಾಲನೆ ಕೊಟ್ಟಿದ್ದು ಕಾಂಗ್ರೆಸ್ಸೇ ಎಂಬುದನ್ನು ಮರೆಯಲು ಸಾಧ್ಯವೇ? ಕೋಮುವಾದದ ವಿಷಯದಲ್ಲಿ ಅಲ್ಲದಿದ್ದರೂ ಗಣಿಗಾರಿಕೆಯಂಥ ಆರ್ಥಿ[ಕ] ವಿಷಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಏನೂ ವ್ಯತ್ಯಾಸವಿಲ್ಲ ಎಂಬುದ[ನ್ನು] ಹೇಗೆ ಮರೆಯಲು ಸಾಧ್ಯ?

ಜಾಗತೀಕರಣದ ನೀತಿಯನ್ನು ಅಪ್ಪಿಕೊಂಡಿರುವ ಬಡದೇಶಗಳಲ್ಲಿ ಗಣಿಗಾ[ರಿಕೆ]ಯಿರಲಿ ದೇಶದ ಸಂಪತ್ತಿನ ಲೂಟಿಯಾಗುತ್ತಿರುವ ಎಲ್ಲಾ ಕ್ಷೇತ್ರಗಳಲ್ಲೂ ಬ[ಡ] ದೇಶಗಳ ಸರ್ಕಾರಗಳೇ ದಲ್ಲಾಳಿಗಳಾಗಿ ನಿಂತು ಆ ದೇಶವನ್ನು ಹರಾಜಾಕುತ್ತಿ[ವೆ]. ಅದಕ್ಕೆ ಎಲ್ಲಾ ಪಕ್ಷಗಳ-ವ್ಯಕ್ತಿಗಳದ್ದಲ್ಲ- ಸಕಲ ಸಮ್ಮತಿಯೂ ಇದೆ. ನಾಡ ರಕ್ಷಣೆಗೆ ಹೊರಟಿರುವ ಕಾಂಗ್ರೆಸ್ ಹಾಗೂ ಜನಪರ ಆಡಳಿತ ಎಂ[ದು] ಕೊಚ್ಚಿಕೊಳ್ಳುವ ಬಿಜೆಪಿ ಇವರಿಬ್ಬರದ್ದೂ ಈ ದಲ್ಲಾಳಿತನದಲ್ಲಿ ಅತಿದೊ[ಡ್ಡ] ಪಾಲಿದೆ. ಇಂದು ಎರಡು ಪಕ್ಷಗಳು ಅಕ್ರಮ ಗಣಿಗಾರಿಕೆಯ ಬಗ್ಗೆ ಮಾತನಾಡುತ್ತಿ[ವೆ] ನಿಜ, ಆದರೆ ಅವರ ಜಾಣತನವನ್ನು ನೋಡಿ. ಈ ದೇಶದ ಸಂಪ[ತ್ತು] ಶಾಸನಬದ್ಧವಾಗಿಯೇ ಲೂಟಿಯಾಗುತ್ತಿರುವ ಸಕ್ರಮ ಗಣಿಗಾರಿಕೆಯಿಂದ. ಅದ[ರ] ಬಗ್ಗೆ ಸಾಧನಾ ಸಮಾವೇಶಗಳಲ್ಲಿ ಬಿಜೆಪಿಗಳು ಮಾತನಾಡುವುದಿ[ಲ್ಲ]. ಪಾದಯಾತ್ರೆಯಲ್ಲಿ ಕಾಂಗ್ರೆಸ್ಸಿಗರೂ ಮಾತನಾಡುವುದಿಲ್ಲ!

ಅಕ್ರಮ ಗಣಿಗಾರಿಕೆಯಿಂದ ಬಳ್ಳಾರಿಯ ಶೇ.10ರಷ್ಟು ಭಾ[ಗ] ಬರಿದಾಗುತ್ತಿದ್ದರೆ, ಶೇ.90ರಷ್ಟು ಭಾಗ ಬರಿದಾಗುತ್ತಿರುವುದು ಸಕ್ರ[ಮ] ಗಣಿಗಾರಿಕೆಯಿಂದ. 1991ಕ್ಕೆ ಮುಂಚೆ ಈ ಸಂಪತ್ತು ಸರ್ಕಾರ[ದ] ಸುಪರ್ದಿಯಲ್ಲೇ ಇರುತ್ತಿತ್ತು. ಆದರೆ ಕಾಂಗ್ರೆಸ್-ಬಿಜೆಪಿ ಎರಡ[ರ] ಸಮ್ಮತಿಯ ಮೇರೆಗೆ 1993ರ ನಂತರ ಬಂದ ನವ ಗಣಿಗಾರಿ[ಕೆ] ನೀತಿಗಳು ಶಾಸನಬದ್ಧವಾಗಿಯೇ ಅದಿರು ರಫ್ತಿಗೆ ಅವಕಾಶ ಮಾ[ಡಿ] ಕೊಟ್ಟಿದೆ. ಇದರಲ್ಲಿ ಸ್ಟೀಲ್ ಉದ್ಯಮಿಗಳ ಲಾಬಿಗೂ, ಅದಿರು ರ[ಫ್ತು] ಲಾಬಿಗೂ ವೈರುಧ್ಯವಿದ್ದದ್ದು ನಿಜವಾದರೂ 2006ರಲ್ಲಿ ಕೇಂ[ದ್ರ] ಸರ್ಕಾರ ರಚಿಸಿದ ಹೂಡಾ ಕಮಿಟಿಯ ಮೂಲಕ ರಿಯೋ ಟಿಂಟೊ[,] ಬಿಹೆಚ್‌ಪಿ ಬಿಲ್ಲಿಟನ್, ಇನ್ನಿತ್ಯಾದಿ ಬೃಹತ್ ಗಣಿ ಬಹುರಾಷ್ಟ್ರೀಯ ಕಂಪನಿಗಳು ಸ್ಟೀಲ್ ಲಾಬಿಯ ವಿರುದ್ಧ ವಿಜಯ ಸಾಧಿಸಿವೆ. ಹೂಡ[ಾ] ಸಮಿತಿಯು ಈ ದೇಶದಲ್ಲಿ ಉತ್ಪಾದನೆಯಾಗುತ್ತಿರುವಷ್ಟು ಅದಿರ[ನ್ನು] ಬಳಸಿಕೊಳ್ಳುವಷ್ಟು ಶಕ್ತಿ ಸಾಮರ್ಥ್ಯ ಈ ದೇಶದ ಸ್ಟೀಲ್ ಕಂಪನಿಗಳಿ[ಗಿಲ್ಲ]ವಾದ್ದರಿಂದ ಶೇ.65ಆರಷ್ಟು ಅದಿರನ್ನು ರಫ್ತು ಮಾಡಿದರೆ ಏನ[ೂ] ನಷ್ಟವಿಲ್ಲವೆಂದು ವರದಿ ನೀಡಿದೆ. ಅದನ್ನು ಕಾಂಗ್ರೆಸ್-ಬಿಜೆಪಿ ಇಬ್ಬರ[ೂ] ಒಪ್ಪಿಕೊಂಡಿದ್ದಾರೆ. ಈ ಬಹುರಾಷ್ಟ್ರೀಯ ಕಂಪನಿಗಳು ಎಂಥ ದೈತ್ಯರೆಂದ[ರೆ] ಬಿಜೆಪಿಯ ರೆಡ್ಡಿಗಳು ಮತ್ತು ಕಾಂಗ್ರೆಸ್‌ನ ಲಾಡ್‌ಗಳು ಮತ್ತು ಘೋರ್ಪಡೆಗ[ಳು] ಇವರ ಮುಂದೆ ಬಚ್ಚಾಗಳು. ಇಂಥಾ ದೇಶದ್ರೋಹಿ ನೀತಿ ಜಾರಿಗೆ ಬರಲ[ು] ಕಾಂಗ್ರೆಸ್- ಬಿಜೆಪಿ ಇಬ್ಬರೂ ಕಾರಣಕರ್ತರೇ! 1993ರಲ್ಲಿ ಕಾಂಗ್ರೆಸ್ ಸರ್ಕಾ[ರ] ಗಣಿಗಾರಿಕೆಯಲ್ಲಿ ಶೇ.50ರಷ್ಟು ವಿದೇಶಿ ಬಂಡವಾಳಕ್ಕೆ ತೆರವು ಮಾಡಿತ[ು]. 2000ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಶೇ.75ರಷ್ಟು ವಿದೇ[ಶಿ] ಬಂಡವಾಳಕ್ಕೆ ಅವಕಾಶ ಮಾಡಿಕೊಟ್ಟಿತು. 2006ರಲ್ಲಿ ಕಾಂಗ್ರೆಸ್ ನೇತೃತ್ವ[ದ] ಯುಪಿಎ ಸರ್ಕಾರ ಅದನ್ನು ಶೇ.100ಕ್ಕೇರಿಸಿತು! ಇದು ಈ ಪಕ್ಷಗಳ ದ್ರೋಹ[ದ] ಇತಿಹಾಸ. ಈ ನಿರ್ಧಾರಗಳ ಹಿಂದೆ ಬೃಹತ್ ಬಹುರಾಷ್ಟ್ರೀಯ ಕಂಪನಿಗ[ಳು] ಅವುಗಳ ಮೂಲಸ್ಥಾನವಾದ ಅಮೆರಿಕ, ಯೂರೋಪ್ ಸಾಮ್ರಾಜ್ಯಶಾ[ಹಿ] ದೇಶಗಳ ಆಕ್ರಮಣಶೀಲ ಆದೇಶವಿದೆ. ಈ ದೇಶವನ್ನು ಈ ನ[ವ] ಸಾಮ್ರಾಜ್ಯಶಾಹಿಗಳ ದಾಳಿಯಿಂದ ತಡೆಯುವ ಬದಲಿಗೆ ಅವರ ಜೊ[ತೆ] ಕೈಗೂಡಿಸಿ ದೇಶವನ್ನು ಹರಾಜು ಹಾಕುತ್ತಿದ್ದವರೇ ಈಗ ರಾಜ್ಯಾದ್ಯಂತ ಸಾಧನ[ಾ] ಸಮಾವೇಶವನ್ನು ಮಾಡುತ್ತಿದ್ದಾರೆ. ಪಾದಯಾತ್ರೆಯನ್ನೂ ಮಾಡುತ್ತಿದ್ದಾರೆ.

ಇದು ನಮ್ಮ ಮುಂದಿರುವ ಅಸಲಿ ಸವಾಲು. ಈ ದೇಶದ ಸಂಪತ್ತಿ[ನ] ಲೂಟಿ ಅಕ್ರಮವಾಗಿ ಆಗುತ್ತಿಲ್ಲ. ಸಕ್ರಮವಾಗಿಯೇ ಆಗುತ್ತಿದೆ. ಏಕೆಂದ[ರೆ] ಜಾಗತೀಕರಣದ ನೀತಿಗಳು ಸಂವಿಧಾನದ ಆಶಯಗಳ ದೃಷ್ಟಿಯಿಂ[ದ] ಅಕ್ರಮವಾದದ್ದನ್ನೆಲ್ಲಾ ಸಕ್ರಮಗೊಳಿಸಿದೆ. ಸಂವಿಧಾನದ ವಿರುದ್ಧವೇ ನಡೆದಿರು[ವ] ಈ ಷಡ್ಯಂತ್ರವನ್ನು ಸಂವಿಧಾನಬದ್ಧವಾಗಿ ಆಯ್ಕೆಗೊಂಡ ಕಾಂಗ್ರೆಸ್ ಮತ್ತ[ು] ಬಿಜೆಪಿ ಸರ್ಕಾರಗಳೇ ಮಾಡುತ್ತಿವೆ. ಅದರ ವಿಕೃತ ಸ್ವರೂಪವೇ ರೆಡ್ಡಿ ದರ್ಬಾರ[್]. ಇದು ಕೆಲವು ವ್ಯಕ್ತಿಗಳು ಮಾಡುತ್ತಿರುವ ಅನಾಚಾರವಲ್ಲ. ಅದು ಅಂತರರಾಷ್ಟ್ರೀಯ ದೈತ್ಯ ಕಂಪನಿಗಳು, ಸಾಮ್ರಾಜ್ಯಶಾಹಿ ಸರ್ಕಾರಗಳು ನಮ್ಮ ದೇಶದ ದಲ್ಲಾಳಿಗ[ಳ] ಜೊತೆ ಸೇರಿಕೊಂಡು ಮಾಡುತ್ತಿರುವ ಲೂಟಿ. ಇದಕ್ಕೆ ತಕ್ಕ ಹಾಗೆ ನಮ[್ಮ] ಇಡೀ ಪ್ರಭುತ್ವ-ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು-ಈ ಲೂಟಿಗೆ ಪೂರಕ ವಾತಾವರಣ ರೂಪಿಸಿಕೊಡುವ ದಲ್ಲಾಳಿಗಳಾಗಿ ಪರಿವರ್ತ[ನೆ] ಗೊಂಡಿವೆ. ಹೀಗಾಗಿ ಸಮಸ್ಯೆಯ ಮೂಲವನ್ನು ಕೇವಲ ಕೆಲವು ವ್ಯಕ್ತಿಗ[ಳ] ದುಷ್ಟತನದಲ್ಲಿ ಹುಡುಕುವುದು ರಾಜಕೀಯ ಮುಗ್ಧತೆಯಾದೀತು. ಆದರೆ [ಆ] ಮುಗ್ಧತೆಯ ಪರಿಣಾಮ ತುಂಬಾ ಭೀಕರವಾಗಿರುತ್ತದೆ. ಅದೇರೀತಿ ಕೇವ[ಲ] ಕಾಂಗ್ರೆಸ್ ಪಕ್ಷ ಪಾದಯಾತ್ರೆಯನ್ನು ಮಾಡುವುದರಿಂದಲಾಗಲೀ, ತನ[್ನ] ಪರಿಭಾಷೆಯನ್ನು ಬದಲಿಸುವುದರಿಂದಲಾಗಲೀ ದೇಶದ ಸಂಪತ್ತಿನ ಲೂಟ[ಿ] ನಿಲ್ಲುವುದಿಲ್ಲ.

ದೇಶದ ಸಂಪತ್ತಿನ ಲೂಟಿಯನ್ನು ತಡೆಯಲು ನಿಜವಾದ ಪ್ರಜಾತಂ[ತ್ರ] ಉಳ್ಳ ರಾಜಕಾರಣವನ್ನು ತರಲು ಮತ್ತೊಂದು ಸ್ವಾತಂತ್ರ್ಯ ಹೋರಾಟವ[ೇ] ಪ್ರಾರಂಭವಾಗಬೇಕಿದೆ. ಎಲ್ಲೆಲ್ಲಿ ಅಂಥಾ ಹೋರಾಟ ತೀವ್ರವಾಗಿದೆಯೋ ಅಲ್ಲೆಲ[್ಲ] ಸಂಪತ್ತಿನ ಲೂಟಿಯಾಗುತ್ತಿಲ್ಲ ಎಂಬುದನ್ನೂ ಇಲ್ಲಿ ಕಾಣಿಸಲೇ ಬೇಕು. ಆದ[ರೆ] ಸಿದ್ಧವಿಲ್ಲದಾಗ ಮಾತ್ರ ನಾವು ಆಳುವ ವರ್ಗ ನೀಡುವ ಅಥವಾ ನಮ್ಮ ನಿಸ್[ಸಹಾಯಕತೆ] ಹಾಗೂ ಹತಾಶೆ ತೋರುವ ಆಯ್ಕೆಗಳಲ್ಲೇ ಸಮಾಧಾನ ಪಟ್ಟುಕೊಳ್ಳುತ್ತಿರುತ್ತೇವ[ೆ] ಹಾಗೂ ಆ ಮೂಲಕ ಕಾಂಗ್ರೆಸ್ಸಿನ ಅಜೆಂಡಾದ ಅಥವಾ ಜನತಾದಳದ ಅಜೆಂಡಾದ ಭಾಗವಾಗುತ್ತಾ ಜನತೆಯ ಅಜೆಂಡಾವನ್ನು ಕೈಬಿಡುತ್ತಿರುತ್ತೇವೆ.

ಈಗ ಮತ್ತೆ ಹಾಗಾಗದಿರಲಿ. ಈ ದೇಶ ಮತ್ತೊಮ್ಮೆ ಮೋಸ ಹೋಗದಿರಲಿ. ಪ್ರಜ್ಞಾವಂತರ ಕಣ್ಣಿಗೆ ಪಾದಯಾತ್ರೆಯ ಧೂಳು ಬೀಳದಿರಲಿ.

ನಾಡ ರಕ್ಷಣೆ ನಡಿಗೆ- ಕಾಂಗ್ರೆಸ್ ಅರಿಯಬೇಕಾದ್ದು



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಕಳೆದ ಸಂಚಿಕೆಯಲ್ಲಿ ಕಾಂಗ್ರೆಸ್‌ನವರ 'ನಾಡ ರಕ್ಷಣೆಗೆ ...'ಗೆ 'ಲಂಕೇಶ್' ಬಳಗ ಬೆಂಬಲವನ್ನು ಸೂಚಿಸುವ ...ನ್ನ ಇದಕ್ಕೆ ಸಂಬಂಧಿಸಿದಂತೆ ಪತ್ರಿಕೆಯ ಹಿರಿಯರೊಂದಿಗೆ ...ಸಿದೆವು. ಮೊದಲು ಅಪ್ಪನ ಆಪ್ತ ಸ್ನೇಹಿತರಾದ ...ಎಲ್. ಕೇಶವಮೂರ್ತಿ ಅವರನ್ನು ಕೇಳಿದಾಗ ...ಂಕೇಶ್ ಕೂಡ ಇಂತಹ ಹಲವು ನಿರ್ದಿಷ್ಟ ...ರ್ಯಕ್ರಮಗಳಿಗೆ ಬೆಂಬಲ ನೀಡುತ್ತಿದ್ದರು" ಎಂದು ತಮ್ಮ ...ಗೆಯನ್ನು ಸೂಚಿಸಿದರು. ಆನಂತರ ಪತ್ರಿಕೆಯ ಹಿರಿಯ ...ಹಗಾರರಾದ ಮತ್ತು ರಾಜ್ಯದ ಸಾಕ್ಷಿಪ್ರಜ್ಞೆಯಂತಿರುವ ... ರಾಜಶೇಖರ ಅವರನ್ನು ಕೇಳಿದೆವು. ಅವರು ...ಡಿತವಾಗಿಯೂ ಬೆಂಬಲಿಸಬಹುದು. ಅಷ್ಟೇ ಅಲ್ಲ ... ಪಾದಯಾತ್ರೆಯನ್ನು ಕಾಂಗ್ರೆಸ್‌ನವರು ಎಷ್ಟು ...ಮಾಣಿಕವಾಗಿ ನಡೆಸುತ್ತಿದ್ದಾರೆ ಎಂದು ಅಲ್ಲಿಗೆ ಹೋಗಿ ...ಡುವುದೂ ಸೂಕ್ತ" ಎಂದರು.

...ಇದೆಲ್ಲ ಆದ ನಂತರವೇ ಈ ಪಾದಯಾತ್ರೆಗೆ 'ಲಂಕೇಶ್' ...ಲವನ್ನು ವ್ಯಕ್ತಪಡಿಸಿದ್ದು ಮತ್ತು ನಾವು ಹಲವರು ...ಶೈ 31 ರಂದು ಕೆಲ ಕಿ.ಮೀ. ದೂರ ...ಗ್ರೆಸ್ಸಿಗರೊಂದಿಗೆ ಹೆಜ್ಜೆ ಹಾಕಿ ಬಂದದ್ದು. ಪಿ. ಲಂಕೇಶರ ...ಹಗಳನ್ನಾಗಲಿ, ನಮ್ಮ 'ಲಂಕೇಶ್' ವಾರ ಪತ್ರಿಕೆಯ ...ವುಗಳನ್ನಾಗಲಿ ಬಲ್ಲವರಿಗೆ ನಾವು ಎಂದೂ ಯಾರಿಗೂ ...ವರತ್ ಬೆಂಬಲ ನೀಡುವುದಿಲ್ಲ ಎಂಬುದು ಗೊತ್ತಿದೆ. ...ರಿಂದ ಕಾಂಗ್ರೆಸ್‌ನ ಈ ಪಾದಯಾತ್ರೆಯ ...ಷ್ಟ ಗುರಿಯಾದ ಬಳ್ಳಾರಿಯ ರೆಡ್ಡಿ ...ಗಿನ ಅಪ್ರಜಾತಾಂತ್ರಿಕ ಧೋರಣೆಯನ್ನು ...ಭಟಿಸುವುದು ಮತ್ತು ರಾಜ್ಯ ಸಂಪತ್ತಿನ ...ಟಿಯನ್ನು ತಡೆಯುವ ಯೋಜನೆಗೆ ಮಾತ್ರ ... ಬೆಂಬಲ ಎಂಬುದು ಅಂತಹವರಿಗೆ ...ಗಿ ಗೊತ್ತು.

...ಆದರೂ ಕೆಲವೇ ಕೆಲವರು ಕಾಂಗ್ರೆಸ್ ..., 'ಲಂಕೇಶ್' ಬಳಗದ ಬೇಷರತ್ ...ಲ ಇದು ಎಂದು ತಪ್ಪಾಗಿ ತಿಳಿದಿದ್ದಾರೆ ...ು ಯಾರೋ ಹೇಳಿದರು. ಅಂತಹವರಿಗೆ ...ಹಲವು ವಿಷಯಗಳನ್ನು ಸ್ಪಷ್ಟಪಡಿಸುತ್ತೇನೆ. ...ದ ಅದಿರು ಸೇರಿದಂತೆ ನಮ್ಮ ದೇಶದ ...ತ್ತೆಲ್ಲ ರಾಷ್ಟ್ರೀಕರಣಗೊಳ್ಳಬೇಕೆಂಬುದು; ...ಹ ಸಂಪತ್ತಿನಿಂದ ಬಂದ ಆದಾಯವೆಲ್ಲ ...ರ ಕೈಗೆ ಸೇರುವ ಬದಲಾಗಿ ಸರ್ಕಾರಕ್ಕೆ ...ವಂತಾಗಿ ಆ ಆದಾಯವನ್ನು ಈ ದೇಶದ ...ಶ ದಲಿತರ ಉದ್ಧಾರಕ್ಕಾಗಿ ...ಯೋಗಿಸಬೇಕೆಂಬುದು ನಮ್ಮ ದೃಢ ನಿಲುವು. ಅಷ್ಟೇ ... ಇವತ್ತು ರೆಡ್ಡಿಗಳ ಅಕ್ರಮ ಗಣಿಗಾರಿಕೆ ವಿರುದ್ಧ ...ರಾಡುತ್ತಿರುವ ಕಾಂಗ್ರೆಸ್ಸಿಗರು, ಈ ರಾಜ್ಯದಲ್ಲಿ ಅಕ್ರಮಕ್ಕಿಂತ ...ೆ ಪ್ರಮಾಣದಲ್ಲಿ ಸಕ್ರಮವಾಗಿಯೇ ಲೂಟಿ ಆಗುತ್ತಿರುವ ...ತ್ತನ್ನೂ ತಡೆಯುವತ್ತ ಗಮನ ಹರಿಸಬೇಕು. ಜೊತೆಗೆ ...ಟಕ ಮಾತ್ರವಲ್ಲ ಓಡಿಶಾ, ಛತ್ತೀಸಗಢ ಮತ್ತು ...ಂಡ್‌ದಂತಹ ರಾಜ್ಯಗಳಲ್ಲೂ ಹೇರಳವಾಗಿರುವ ಗಣಿ ...ತ್ತನ್ನು ವೇದಾಂತ ಮತ್ತು ಮಿಟಲ್‌ನಂತಹ ವಿದೇಶಿ ...ಗಳೂ ಲೂಟಿ ಮಾಡದಂತೆ ನೋಡಿಕೊಳ್ಳುವುದೂ ...ತ್ಯವಾಗಿದೆ. ಹಾಗೆ ಮಾಡುವುದನ್ನು ಬಿಟ್ಟು ಆ ರಾಜ್ಯಗಳ ...ದಲ್ಲಿರುವ ಆದಿವಾಸಿಗಳ ವಿರುದ್ಧ ಆಪರೇಷನ್ ಗ್ರೀನ್ ...' ಅನ್ನು ನಡೆಸಿ, ಆದಿವಾಸಿಗಳನ್ನು ಕೊಂದು ಅಲ್ಲಿ ...ಶಿ ಕಂಪನಿಗಳು ಲೂಟಿ ಮಾಡಲು ಅನುವು ...ಕೊಡುವುದೂ ಅಕ್ಷಮ್ಯ ಅಪರಾಧವಾಗುತ್ತದೆ. ಇಂತಹ ...ಗಳಿಗೆ 'ಲಂಕೇಶ್' ಎಂದೂ ಕಾಂಗ್ರೆಸ್‌ಗೆ ಬೇಷರತ್ ...ಲ ನೀಡಲು ಸಾಧ್ಯವಿಲ್ಲ.

...ನ್ನು 'ಅದಿರು ರಫ್ತನ್ನು ನಿಷೇಧಿಸಿದ್ದೇನೆ' ಎಂದು ಬಾಯಿ ಬಡಿದುಕೊಳ್ಳುತ್ತಿರುವ ಯಡಿಯೂರಪ್ಪ ರಾಜ್ಯದ ವ್ಯಾಪ್ತಿಗೆ ಬಾರದ ರಫ್ತು ವಿಚಾರವನ್ನು ಬದಿಗಿಟ್ಟು ಅಕ್ರಮ ಅದಿರು ಲೂಟಿಕೋರರ ವಿರುದ್ಧ ಕಾನೂನುಕ್ರಮ ಜರುಗಿಸಬೇಕಿದೆ. ಹಾಗೆಯೇ ಬಿಜೆಪಿಯ ರಾಷ್ಟ್ರನಾಯಕರಿಗೆ ಯಡ್ಡಿಯ ಅದಿರು ರಫ್ತು ನಿಷೇಧ ನೀತಿಯು ಸರಿಯಾದದ್ದು ಅನ್ನಿಸಿದರೆ ಅವರ ಪಕ್ಷ ಅಧಿಕಾರದಲ್ಲಿರುವ ಛತ್ತೀಸ್‌ಗಢ್‌ದಲ್ಲೂ ಅದಿರು ಗಣಿಗಾರಿಕೆಯನ್ನೂ ಮತ್ತು ಅದಿರು ರಫ್ತನ್ನು ನಿಷೇಧಿಸಲಿ ನೋಡೋಣ!

ಅದೆಲ್ಲ ಇರಲಿ, ಅಂದು ಪಾದಯಾತ್ರೆಗೆ ನಾವು ಹೋಗಿದ್ದಾಗ ಅಲ್ಲಿ ಕಂಡದ್ದನ್ನು ಪಾರ್ವತೀಶ ಈ ಸಂಚಿಕೆಯಲ್ಲಿ ದಾಖಲಿಸಿದ್ದಾರೆ. ಪಾದಯಾತ್ರೆಯಲ್ಲಿ ಭಾಗವಹಿಸಿರುವ ಕಾಂಗ್ರೆಸ್ಸಿಗರು-ನಾಯಕರೂ, ಕಾರ್ಯಕರ್ತರೂ, ಎಲ್ಲರೂ ಸಾಮಾನ್ಯ ಜನರ ಸ್ಪಂದನದಿಂದ ಉತ್ಸುಕಗೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಅಂದು ನಾವು ಬೆಂಗಳೂರಿಗೆ ಬೇಗನೆ ವಾಪಸ್ ಬರಬೇಕಿದ್ದರಿಂದ ಒಂದೆರಡು ಕಿ.ಮೀ. ಮಾತ್ರ ಅವರೊಂದಿಗೆ ನಡೆಯುವುದೆಂದು ಮುಂಚಿತವಾಗಿಯೇ ನಿರ್ಧರಿಸಿದ್ದೆವು. ಆದರೆ ಹಲವಾರು ಕಾಂಗ್ರೆಸ್ ನಾಯಕರೊಂದಿಗೆ ಮತ್ತು ಕಾರ್ಯಕರ್ತರೊಂದಿಗೆ ಮಾತನಾಡುತ್ತಾ ಅವರಷ್ಟೇ ವೇಗವಾಗಿ ನಾವೂ ನಮ್ಮ ಹೆಜ್ಜೆ ಹಾಕಿದ್ದರಿಂದ ನಮಗೆ ಗೊತ್ತಾಗದಂತೆ ಹತ್ತಿರತ್ತಿರ ನಾಲ್ಕು ಕಿ.ಮೀ. ದೂರ ನಡೆದಿದ್ದೆವು. ಆನಂತರ ನಮ್ಮ ಕಾರನ್ನು ನಿಲ್ಲಿಸಿದ್ದಲ್ಲಿಗೆ ವಾಪಸ್ ನಡೆದುಕೊಂಡು ಬರುವಾಗಲೇ ನಾವೆಷ್ಟು ದೂರ ನಡೆದಿದ್ದೆವು ಎಂಬ ಅರಿವು ನಮಗಾಗಿದ್ದು!



ಒಟ್ಟಿನಲ್ಲಿ ಕಾಂಗ್ರೆಸ್‌ನೊಂದಿಗೆ ನಮ್ಮ ಎಲ್ಲ ಭಿನ್ನಾಭಿಪ್ರಾಯಗಳನ್ನು ಇಟ್ಟುಕೊಂಡೂ ಇಲ್ಲಿ ಹೇಳಲೇಬೇಕಾದ್ದು ಏನೆಂದರೆ ಕಾಂಗ್ರೆಸ್ ಪಾದಯಾತ್ರಿಗಳ ಉತ್ಸಾಹ ಮತ್ತು ದಿಟ್ಟತನ ಒಂದು ಸಾಮೂಹಿಕ ಕ್ರಿಯೆಯಂತಿತ್ತು. ಎಷ್ಟರಮಟ್ಟಿಗೆ ಅಂದರೆ ಅವರ ಪಾದಯಾತ್ರೆ ಮುಗಿಯುವ ಮುನ್ನ ಮತ್ತೊಮ್ಮೆ ಅವರೊಂದಿಗೆ ಹೆಜ್ಜೆ ಹಾಕಬೇಕೆನಿಸುವಷ್ಟು.

ಕಾಂಗ್ರೆಸ್ ಪಕ್ಷದವರು ತಮ್ಮ ಮೈ ಚಳಿ ಮತ್ತು ಸೋಂಭೇರಿತನವನ್ನು ಬಿಟ್ಟು ಬೀದಿಗೆ ಇಳಿದು ಜನಸಾಮಾನ್ಯರೊಂದಿಗೆ ಸ್ಪಂದಿಸುವಂತೆ ಕಾರ್ಯನಿರ್ವಹಿಸಬೇಕಿದ್ದು ಸದ್ಯ ರಾಜಕೀಯ ಪರಿಸ್ಥಿತಿಯಲ್ಲಿ ಅತ್ಯಗತ್ಯವಾಗಿತ್ತು. ಅದನ್ನು ಅವರು ಈ ಪಾದಯಾತ್ರೆಯ ಮೂಲಕ ನಿಜಕ್ಕೂ ಪ್ರಾರಂಭಿಸಿದ್ದಾರೆ ಎಂಬ ಸಮಾಧಾನವಂತೂ ಇದೆ....

****

ಮೊನ್ನೆ ಇದ್ದಕ್ಕಿದ್ದಂತೆ ರಾಜ್ಯದ ಉನ್ನತ ಪೊಲೀಸ್ ಅಧಿಕಾರಿಯಾದ ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಅಜಯ್ ಕುಮಾರ್ ಸಿಂಗ್ ಅವರ ಕಚೇರಿಯಿಂದ ನನಗೆ ಒಂದು ಪತ್ರ ಬಂತು. 'ಗೋಹತ್ಯೆ ನಿಷೇಧ ಕಾಯ್ದೆ ಬಗೆಗಿನ ವಿಮರ್ಶಣಾ ಸಭೆ'ಯಲ್ಲಿ ಭಾಗವಹಿಸಬೇಕೆಂದು ಆ ಪತ್ರದಲ್ಲಿ ಕೋರಲಾಗಿತ್ತು.

ರೈತರು, ದಲಿತರು, ಅಲ್ಪಸಂಖ್ಯಾತರು ಮತ್ತು ಇತರರೂ ಸೇರಿದಂತೆ ಈ ರಾಜ್ಯದ ಬಹುಸಂಖ್ಯೆಯ ಜನರ ಆರ್ಥಿಕ, ಸಾಂಸ್ಕೃತಿಕ ಮತ್ತು ಜೀವನೋಪಾಯಕ್ಕೆ ಕೊಡಲಿ ಏಟನ್ನು ನೀಡುವ 'ಕರ್ನಾಟಕ ಜಾನುವಾರು ಹತ್ಯೆ ನಿಷೇಧ ಮತ್ತು ಸಂರಕ್ಷಣಾ ಮಸೂದೆ 2010' ಎಂಬ ಮಸೂದೆಯನ್ನು ಜನವಿರೋಧಿ ಬಿಜೆಪಿಗಳು ವಿಧಾನಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ಅಂಗೀಕರಿಸಿದ್ದಾಗಿದೆ. ಆದರೆ ಅದೃಷ್ಟವಶಾತ್ ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಅವರು "ಬಹುಸಂಖ್ಯೆಯ ಜನರ ಮೇಲೆ ಈ ಮಸೂದೆ ಪರಿಣಾಮ ಬೀರುವುದರಿಂದ'' ಅದನ್ನು ರಾಷ್ಟ್ರಪತಿಗಳಿಗೆ ಕಳುಹಿಸಿಕೊಟ್ಟಿರುವುದೂ ಈಗ ಎಲ್ಲ ಮಾಧ್ಯಮಗಳು ಪ್ರಕಟಿಸಿವೆ. ಅಂದರೆ ಈ ಮಸೂದೆ ದೆಹಲಿಯಲ್ಲೇ ಧೂಳು ಹಿಡಿಯುತ್ತಾ ಕೂತಿದ್ದು ಸದ್ಯದಲ್ಲೇ ಕಾನೂನಾಗಿ ಜಾರಿಗೆ ಬರುವ ಸಾಧ್ಯತೆ ತುಂಬಾ ಕಡಿಮೆ. ಹಾಗಿದ್ದರೂ ಇಂತಹ ಚರ್ಚಾ ಸಭೆ ಏಕೆ ಎಂದೆನಿಸಿತು. ಕೆಲವರನ್ನು ವಿಚಾರಿಸಿದಾಗ ಈ ಕಾಯಿದೆಯನ್ನು ವಿರೋಧಿಸುತ್ತಿದ್ದ ಎಲ್ಲ ಪ್ರಮುಖ ಸಂಘಟನೆಗಳಿಗೆ ಮತ್ತು ವ್ಯಕ್ತಿಗಳಿಗೆ ಇಂತಹದ್ದೇ ಪತ್ರ ಹೋಗಿದ್ದು ಗೊತ್ತಾಯಿತು.

ಆ ಸಭೆಗೆಂದು ನಾನು ಮತ್ತು ಪಾರ್ವತೀಶ ನಿನ್ನೆ ಬುಧವಾರ ಡಿಜಿಪಿ ಕಚೇರಿಗೆ ಹೋದಾಗ ಅಲ್ಲಾಗಲೇ 'ಜಾನುವಾರು ಹತ್ಯೆ ನಿಷೇಧ ಕಾಯಿದೆ ವಿರೋಧಿ ಜನಾಂದೋಲನ'ದ ಅಧ್ಯಕ್ಷ ಎ.ಕೆ. ಸುಬ್ಬಯ್ಯ ಮತ್ತು ಕೆ.ಎಲ್. ಅಶೋಕ್, ಸಮತಾ ಸೈನಿಕ ದಳದ ವೆಂಕಟಸ್ವಾಮಿ, ಸಿಪಿಎಂನ ಗುರುಶಾಂತ್, ರೈತಸಂಘದ ವೀರಸಂಗಯ್ಯ, ಬೀಫ್ ಮರ್ಚೆಂಟ್ ಅಸೋಸಿಯೇಷನ್‌ನ ಇಜಾಸ್ ಅಹ್ಮದ್ ಖುರೇಷಿ, ನಮ್ಮ ಬಾಬಯ್ಯ ಮತ್ತು ಶಿವರಾಮಯ್ಯ ಸೇರಿದಂತೆ ಹಲವಾರು ಜನ ಸೇರಿದ್ದರು. ಈಗಾಗಲೇ ಈ ಕಾಯಿದೆ ವಿರೋಧಿ ಹೋರಾಟಕ್ಕೆ ಸಂಬಂಧಿಸಿದಂತೆ ಇವರಲ್ಲಿ ಹಲವಾರು ಜನರ ವಿರುದ್ಧ ಪೊಲೀಸರು ರಾಜ್ಯದ ವಿವಿಧೆಡೆ ಕೇಸ್‌ಗಳನ್ನು ಜಡಿದಿರುವುದರಿಂದ ನಾನು "ನಮ್ಮೆಲ್ಲರನ್ನು ಇಲ್ಲಿಗೆ ಕರೆದು ಎಲ್ಲರನ್ನೂ ಸಾಮೂಹಿಕವಾಗಿ ಬಂಧಿಸುವ ಯೋಜನೆ ಇದಾಗಿರಬಹುದೇ?" ಎಂದು ಜೋಕ್ ಮಾಡಿದೆ. ಅದನ್ನು ಕೇಳಿ ಅಲ್ಲೇ ಇದ್ದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ನಗಲಾರಂಭಿಸಿದರು.

ಸಭೆ ಪ್ರಾರಂಭವಾಯಿತು. ನಮ್ಮೆಲ್ಲರೊಂದಿಗೆ ಚರ್ಚಿಸಲು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಎ.ಆರ್. ಇನ್ಫೆಂಟ್ ಮತ್ತು ಇಂಟೆಲಿಜೆನ್ಸ್ ವಿಭಾಗದ ಎಡಿಜಿಪಿ ಜ್ಯೋತಿಪ್ರಕಾಶ್ ಮಿರ್ಜಿ ಹಾಜರಾದರು.

ಇವರಿಬ್ಬರೊಂದಿಗಿನ ಚರ್ಚೆಯಲ್ಲಿ ನಾವೆಲ್ಲ ಒತ್ತಿ ಹೇಳಿದ್ದು ಬಿಜೆಪಿ ಸರ್ಕಾರ ತರಲೆತ್ನಿಸಿದ 2010 ನೇ ಮಸೂದೆ ಇನ್ನೂ ಕಾನೂನು ಆಗಿಲ್ಲದಿರುವುದರಿಂದ ಈಗ ಜಾನುವಾರು ಕುರಿತಂತೆ ಅಸ್ತಿತ್ವದಲ್ಲಿರುವುದು 1964 ರ ಕಾಯಿದೆ. ಆದ್ದರಿಂದ ಆ ಕಾಯಿದೆಯ ನಿಯಮಗಳನ್ನು ಎಲ್ಲರೂ ಪಾಲಿಸಬೇಕು. ಹಾಗೆಯೇ 2010 ರ ಮಸೂದೆ ಜಾರಿಯಾಗಿದೆ ಎಂದು ಸುಳ್ಳು ಪ್ರಚಾರ ಮಾಡುತ್ತಿರುವ ಹಿಂದೂತ್ವವಾದಿಗಳು ಬೇರೆ ಕೋಮಿನವರಿಗೆ ಯಾವುದೇ ರೀತಿಯ ತೊಂದರೆ ಕೊಟ್ಟರೂ ಅಂತಹವರ ವಿರುದ್ಧ ಸೂಕ್ತ ರೀತಿಯ ಕಾನೂನು ಕ್ರಮ ಜರುಗಿಸಬೇಕೆಂದು.

ಚರ್ಚೆ ನಡೆಯುತ್ತಿದ್ದಾಗ ಅದೇ ದಿನ ಬೆಳಗ್ಗೆ ಹಿಂದೂತ್ವವಾದಿ ಸಂಘಟನೆಗಳೊಂದಿಗೂ ಪೊಲೀಸ್ ಇಲಾಖೆ ಚರ್ಚಿಸಿರುವುದಾಗಿಯೂ, ಅವರಿಗೆ 1964 ರ ಕಾನೂನು ಮಾತ್ರ ಈಗ ಜಾರಿಯಲ್ಲಿದೆ ಎಂದು ಹೇಳಿರುವುದಾಗಿಯೂ ಪೊಲೀಸ್ ಅಧಿಕಾರಿಗಳು ಹೇಳಿದರು.


ನನ್ನ ಸರದಿ ಬಂದಾಗ "ಇವತ್ತು ಪೊಲೀಸ್ ವ್ಯವಸ್ಥೆ ಕೂಡ ಕೋಮುವಾದಿಗೊಂಡಿರುವುದರಿಂದ ಮತ್ತು ಜಾನುವಾರು ರಕ್ಷಣೆ ಹೆಸರಲ್ಲಿ ಹಿಂದೂತ್ವವಾದಿಗಳ ದುಷ್ಕೃತ್ಯಗಳಲ್ಲಿ ಪೊಲೀಸ್ ಇಲಾಖೆಯ ಕೆಲ ಸಿಬ್ಬಂದಿಗಳೂ ಕೈಜೋಡಿಸುತ್ತಿರುವುದರಿಂದ ಪೊಲೀಸ್ ಇಲಾಖೆಯ ಕಟ್ಟೆ ಕಡೆಯಲ್ಲಿರುವ ಪೇದೆಗಳ ತನಕ 1964 ರ ಕಾನೂನಿನ ಬಗ್ಗೆ ಮನದಟ್ಟು ಮಾಡಿಕೊಡುವ ಅವಶ್ಯಕತೆ ಇದೆ. ಜೊತೆಗೆ ಈಗಾಗಲೇ ಹಿಂದೂತ್ವವಾದಿಗಳು 2010 ರ ಹೊಸ ಕಾನೂನು ಜಾರಿಗೆ ಬಂದಿರುವುದಾಗಿ ಎಲ್ಲೆಡೆ ಸುಳ್ಳು ಪ್ರಚಾರ ಶುರು ಮಾಡಿರುವುದರಿಂದ ಜನಸಾಮಾನ್ಯರಿಗೂ ವಸ್ತುಸ್ಥಿತಿಯ ಬಗ್ಗೆ ತಿಳಿಸಲು ಮಾಧ್ಯಮಗಳ ಮೂಲಕ ಅರಿವು ಮೂಡಿಸಲು ಪೊಲೀಸ್ ಇಲಾಖೆ ಪ್ರಯತ್ನಿಸಬೇಕು" ಎಂಬ ಸಲಹೆ ನೀಡಿದೆ.

ನಮ್ಮ ಪಾರ್ವತೀಶ ಅವರು "ಪೊಲೀಸರು ಹಿಂದೂತ್ವವಾದಿಗಳಂತೆ ವರ್ತಿಸುವುದನ್ನೂ, ಹಿಂದೂತ್ವವಾದಿಗಳು ಪೊಲೀಸರಂತೆ ವರ್ತಿಸುವುದನ್ನೂ ತಡೆದರೆ ಸಾಕು ಮುಕ್ಕಾಲು ಪಾಲು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿದಂತಾಗುತ್ತದೆ" ಎಂದು ಹೇಳಿದ್ದನ್ನೂ ಆ ಇಬ್ಬರು ಪೊಲೀಸ್ ಅಧಿಕಾರಿಗಳು ಸಕಾರಾತ್ಮಕವಾಗಿಯೇ ಒಪ್ಪಿಕೊಂಡರು.

ಸಾಮಾನ್ಯವಾಗಿ ನಮ್ಮಂತಹ ಜನಪರ ಹೋರಾಟಗಾರರೆಂದರೆ ಪೊಲೀಸ್ ಇಲಾಖೆಗೆ ಸಿಟ್ಟು. ಆದ್ದರಿಂದ ಧಮಕಿ ಹಾಕುವುದು, ಕೇಸ್‌ಗಳನ್ನು ಜಡಿಯುವುದು ಮಾಮೂಲಿ. ಆದರೆ ನಾನು ಬಲ್ಲಂತೆ ಡಿಜಿಪಿ ಅಜಯ್‌ಕುಮಾರ್ ಸಿಂಗ್ ಅವರು ಅತ್ಯಂತ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿ. ಹಾಗೆಯೇ ಇನ್ಫೆಂಟ್ ಮತ್ತು ಮಿರ್ಜಿಯವರು ಕೂಡ ಜನಪರ ಕಾಳಜಿಗಳನ್ನು ಮುಖ್ಯವಾಗಿಸಿಕೊಂಡಿರುವ ಅಧಿಕಾರಿಗಳು. ಆದ್ದರಿಂದಲೇ ಅವರು ನಮ್ಮಂಥವರೊಂದಿಗೆ ಇಂತಹ ಒಂದು ಚರ್ಚೆ ನಡೆಸುವುದು ಮತ್ತು ನಾವು ಹೇಳಿದ ಹಲವು ಅಂಶಗಳನ್ನಾದರೂ ಗಂಭೀರವಾಗಿ ಪರಿಶೀಲಿಸುವುದಾಗಿ ಭರವಸೆಯನ್ನು ನೀಡಲು ಸಾಧ್ಯವಾಗಿದ್ದು ಎನಿಸುತ್ತದೆ. ●



ಗ್ಯಾರಳ್ಳಿ ತಮ್ಮಯ್ಯ ಹತ್ಯೆ ತೀರ್ಪು ಗೆದ್ದಿತು ನ್ಯಾಯ; ಅನ್ಯಾಯವೂ!


ಗ್ಯಾರಳ್ಳಿ ತಮ್ಮಯ್ಯ

ಹಾಸನದ ಕುಖ್ಯಾತ ಬಡ್ಡಿ ಕುಳ ಗ್ಯಾರಳ್ಳಿ ತಮ್ಮಯ್ಯನ ಹತ್ಯೆ ಪ್ರಕರಣದ ತೀರ್ಪು ಹೊರಬಿದ್ದಿದೆ. ಕೊಲೆ ಮಾಡಿದ ಒಂಭತ್ತು ಮಂದಿಗೆ ಶಿಕ್ಷೆ ಪ್ರಕಟವಾಗಿದೆ. ಈ ಮೂಲಕ ಹಾಸನಕ್ಕೆ ತುರ್ತಾಗಿ ಆಗಬೇಕಿದ್ದ 'ಕೊಲೆ ಮಾಡಿ ದಕ್ಕಿಸಿಕೊಳ್ಳಲಾಗುವುದಿಲ್ಲ' ಎಂಬ ಸಂದೇಶವೂ ರವಾನೆಯಾಗಿದೆ. ಆದರೆ... ಹಾಸನದ ಕೆಲ ಮಂದಿ ಹಾ.ರಾ.ನಾಗರಾಜ್ ಹಾಗೂ ಗ್ಯಾರಳ್ಳಿ ತಮ್ಮಯ್ಯನ ಕೊಲೆಗಳ ನಡುವೆ ತಳುಕು ಹಾಕಿ ಅದೆಂತಹುದೋ ಅಸಹನೆಗೊಳಗಾದಂತಿದೆ.

ಮೊನ್ನೆ ಜುಲೈ 31 ರಂದು ತೀರ್ಪು ಪ್ರಕಟಿಸುತ್ತಿದ್ದಂತೆಯೇ ಹಾ.ರಾ. ನಾಗರಾಜ್ ಕಡೆಯವರು ವಕೀಲ ಸುರೇಶ್ ಮೇಲೆ ಚಪ್ಪಲಿ ಎಸೆಯುವ ಮೂಲಕ ಈ ಅಸಹನೆ ಸ್ಫೋಟಗೊಂಡಿತ್ತು. ಯಾಕೆಂದರೆ, ಇದೇ ಗ್ಯಾರಳ್ಳಿ ತಮ್ಮಯ್ಯ ಹಾ.ರಾ. ನಾಗರಾಜ್‌ನನ್ನು ಹತ್ಯೆ ಮಾಡಿದ ಸಂದರ್ಭದಲ್ಲಿ ಏನೇನೋ ನಡೆದುಹೋಗಿತ್ತು. ಈ ಪ್ರಕರಣದಲ್ಲೂ ಅಂತಹುದೇ 'ಪವಾಡ' ಸಂಭವಿಸಬಹುದೆಂಬ ಭರವಸೆ ತಮ್ಮಯ್ಯ ಹಂತಕರ ಮುಖದಲ್ಲಿ ನಿಚ್ಚಳವಾಗಿತ್ತು.

ಆದರೆ ಸರ್ಕಲ್ ಇನ್ಸ್‌ಪೆಕ್ಟರ್ ಗಿರಿಜೇಶ್ ಈ ಪ್ರಕರಣ ಕೈಗೆತ್ತಿಕೊಂಡು ಮಾಹಿತಿ ಕಲೆ ಹಾಕಿದರೆ, ವಕೀಲ ಸುರೇಶ್ ಗ್ಯಾರಳ್ಳಿ ಪರ ವಾದಕ್ಕೆ ನಿಂತರು. ಆರಂಭದಲ್ಲಿ ಹೇಳಿಕೊಳ್ಳುವಂಥ ಸಾಕ್ಷಿಗಳಿರಲಿಲ್ಲ ಮತ್ತು ಸಾಕ್ಷಿ ಹೇಳಲು ಬಂದವರೂ ಉಲ್ಟಾ ಹೊಡೆದಿದ್ದರಿಂದ ಗ್ಯಾರಳ್ಳಿ ಕೊಲೆಯ ಆರೋಪಿಗಳಾದ ಹಾ.ರಾ. ನಾಗರಾಜ್ ಮಕ್ಕಳು ಕೂಲ್ ಆಗಿದ್ದರೂ ನ್ಯಾಯಾಧೀಶ ಪಾಲಾಕ್ಷಯ್ಯನವರು ನೀಡಿದ ತೀರ್ಪು ಬೆದರುವಂತೆ ಮಾಡಿತ್ತು. ಈ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಹದಿಮೂರು ಮಂದಿಯಲ್ಲಿ ಸತೀಶ್, ಶಂಕರ್, ನಂದೀಶ್‌ನನ್ನು ಆರೋಪ ಮುಕ್ತಗೊಳಿಸಿದ ನ್ಯಾಯಾಧೀಶರು ಹಾ.ರಾ. ನಾಗರಾಜ್ ಮಕ್ಕಳು ಸೇರಿದಂತೆ ಒಂಭತ್ತು ಮಂದಿಯನ್ನು ಅಪರಾಧಿಗಳೆಂದು ಪರಿಗಣಿಸಿ ತೀರ್ಪಿತ್ತರು.

ನಿಜ, ಈ ಪ್ರಕರಣದ ತೀರ್ಪು ಕೊಲೆ ಮಾಡಿದವರು ತಪ್ಪಿಸಿಕೊಳ್ಳಲಾಗುವುದಿಲ್ಲ ಎಂಬಂಥ ಸಕಾರಾತ್ಮಕ ಸಂದೇಶ ರವಾನಿಸಿದೆ. ಇದು ಸಂಭಾವ್ಯ ಪಾತಕಗಳಿಗೆ ಎಚ್ಚರಿಕೆಯ ಗಂಟೆಯೂ ಹೌದು. ಆದರೂ ಸಹ ಈ ತೀರ್ಪಿನ ಬಗೆಗೊಂದು ಅಸಹನೆ ಮೂಡಿದ್ದು ತೀರ್ಪು ಹೊರಬಿದ್ದ ಕ್ಷಣದಿಂದಲೇ ಕೆಲ ಅಂಗಡಿ ಮುಂಗಟ್ಟುಗಳು ಬಂದ್ ಆದದ್ದೆಲ್ಲಾ ಯಾಕೆ ಅಂತೊಂದು ಪ್ರಶ್ನೆ ಉದಯಿಸುತ್ತದೆ. ಅದಕ್ಕೆ ಕಾರಣ ಕೆದಕುತ್ತಾ ಹೋದರೆ ಹಾ.ರಾ. ನಾಗರಾಜ್‌ನನ್ನು ಕೊಂದ ಸಂದರ್ಭದಲ್ಲಿ ಆರೋಪಿ ಗ್ಯಾರಳ್ಳಿ ತಮ್ಮಯ್ಯ ಮೆರೆದಾಡಿದ ರೀತಿಯೇ ಇದಕ್ಕೆಲ್ಲ ಕಾರಣವೆಂಬ ಅಂಶ ಮನದಟ್ಟಾಗುತ್ತದೆ.

ಅದು 2005 ರ ಸೆಪ್ಟೆಂಬರ್ ತಿಂಗಳು. ಅದಾಗಲೇ ಹಾಸನದಲ್ಲಿ ಸಂಘಟನೆ ಅಂತೆಲ್ಲಾ ಕಟ್ಟುತ್ತಾ ಬೆಳೆದ ಹಾ.ರಾ. ನಾಗರಾಜ್‌ಗೂ, ಬಡ್ಡಿ ದಂಧೆಯ ಮೂಲಕ ರಕ್ತ ಹೀರುತ್ತಾ ಕೆಲ ಜೀವಗಳನ್ನೂ ಬಲಿ ಪಡೆದು ಮೆರೆಯುತ್ತಿದ್ದ ಗ್ಯಾರಳ್ಳಿ ತಮ್ಮಯ್ಯನಿಗೂ ಕಿರಿಕ್ಕು ಹತ್ತಿಕೊಂಡಿತ್ತು. ಪಕ್ಕಾ ರೌಡಿಗಿರಿಯ ತಮ್ಮಯ್ಯ ಹಾಸನದ ಹೆರಿಟೇಜ್ ಕ್ಲಬ್ ಸಮೀಪ ಹಾ.ರಾ. ನಾಗರಾಜ್‌ನನ್ನು ಬರ್ಬರವಾಗಿ ಕೊಂದು ಹಾಕಿ ಅನಾಹುತಕಾರಿ ಅಂತ್ಯ ಕಾಣಿಸಿದ್ದ. ಅದೂ ಸಹ ಹಾ.ರಾ. ಪುತ್ರರಾದ ಪ್ರಶಾಂತ, ಮಯೂರ್, ಪಚ್ಚಿ ಗೋವಾ, ಅನಿಲ ಹಾಗೂ ಆನಂದನ ಕಣ್ಣೆದುರಲ್ಲೇ!


ಗಿರಿಜೇಶ್

ಇದಾದನಂತರ ವಿಪರ್ಯಾಸಕರ ಘಟನೆಗಳು ಸಂಭವಿಸುತ್ತಲೇ ಹೋದವು. ಇವತ್ತು ಗ್ಯಾರಳ್ಳಿ ತಮ್ಮಯ್ಯನ ಕೊಲೆ ಪ್ರಕರಣದಲ್ಲಿ ಆರೋಪಿಗಳಿಗೆ ಶಿಕ್ಷೆಯಾಗುವಂತೆ ಮಾಡಿದ ವಕೀಲ ಸುರೇಶ್, ಅಂದು ಹಾ.ರಾ. ನಾಗರಾಜ್‌ನನ್ನು ಕೊಂದ ಗ್ಯಾರಳ್ಳಿ ಟೀಂ ಅನ್ನ ಸೇಫ್ ಮಾಡಿದ್ದರು! ಹಾ.ರಾ. ನಾಗರಾಜ್‌ನನ್ನು ಕೊಂದ ತಮ್ಮಯ್ಯ ಅರೆಸ್ಟಾದದ್ದೇ ಒಂದು ತಿಂಗಳನಂತರ. ಆ ಬಳಿಕವೂ ಈತನನ್ನು ರಾತ್ರೋರಾತ್ರಿ ಜೈಲಿಗೆ ಕಳಿಸಿ ಮೂರುತಿಂಗಳ ಕಾಲ ಹಾಸನದ ಆಸ್ಪತ್ರೆಯಲ್ಲಿರಿಸಿ ಆತಿಥ್ಯ ನೀಡಲಾಗಿತ್ತು. ತಮ್ಮಯ್ಯ ಒಂದೇ ಒಂದು ಸಲವೂ



ಜೈಲೂಟ ಮಾಡಲಿಲ್ಲ. ಬದಲಾಗಿ ಗುಂಡು-ತುಂಡು ಅಂತ ಹಾಯಾಗಿದ್ದ. ಇದರಲ್ಲಿ ಕೆಲ ರಾಜಕಾರಣಿಗಳು ಹಾಗೂ ಅಂದಿನ ಎಸ್ಪಿ ಬಿ.ಎಸ್. ಪ್ರಕಾಶ್ ಕೈವಾಡ ಪ್ರಮುಖವಾಗಿತ್ತೆಂದು ಇಂದಿಗೂ ಜನ ಮಾತಾಡಿಕೊಳ್ಳುತ್ತಿದ್ದಾರೆ.

ಇದಕ್ಕಿಂತಲೂ ದುರಂತದ ವಿಚಾರವೆಂದರೆ, ಒಂದಿಡೀ ವ್ಯವಸ್ಥೆಯೆ ತಮ್ಮಯ್ಯನ ಬಡ್ಡಿ ದಂಧೆಯ ಮುಲಾಜಿಗೆ ಬಿದ್ದಂತೆ ಮುದುರಿಕೊಂಡಿತ್ತು. ಗ್ಯಾರಳ್ಳಿ ತಮ್ಮಯ್ಯನ ಗೈರತ್ತು ಎಂಥದಿತ್ತೆಂದರೆ ಹಾ.ರಾ. ನಾಗರಾಜ್ ಕೊಲೆ ಪ್ರಕರಣದಲ್ಲಿ ಒಂದನೇ ಆರೋಪಿಯಾಗಬೇಕಿದ್ದ ಈತ ಮಂಜುನಾಥನೆಂಬ ಹದಿನೇಳರ ಎಳಸು ಯುವಕನನ್ನು ಆ ಸ್ಥಾನಕ್ಕೆ ತೂರಿಸಿ ತಲೆ ಉಳಿಸಿಕೊಂಡ. ಇಂಥ ಹಲವಾರು ಭಾನಗಡಿ ಸೃಷ್ಟಿಸಿದ ತಮ್ಮಯ್ಯ ಮೂರು ತಿಂಗಳಲ್ಲೇ ಹೊರಬಂದ.

ಆದರೆ ಕಣ್ಣೆದುರೇ ತನ್ನಪ್ಪನನ್ನು ಕೊಲೆ ಮಾಡಿದ್ದನ್ನು ಕಂಡಿದ್ದ ಹಾ.ರಾ. ನಾಗರಾಜ್ ಮಕ್ಕಳು ಕುದ್ದು ಹೋಗಿದ್ದರು. ತನ್ನಪ್ಪನನ್ನು ಕೊಲೆ ಮಾಡಿದ ಗ್ಯಾರಳ್ಳಿ ತಮ್ಮಯ್ಯನಿಗೊಂದು ಗತಿ ಕಾಣಿಸುವ ಶಪಥವನ್ನೂ ಮಾಡಿದ್ದರು.

ಲಾಗಾಯ್ತಿನಿಂದಲೂ ಬಡ್ಡಿ, ಪಾತಕ ಮುಂತಾದವುಗಳನ್ನೇ ಉಸಿರಾಡಿಕೊಂಡಿದ್ದ ತಮ್ಮಯ್ಯನಿಗೆ ಈ ಸೂಕ್ಷ್ಮ ಅರ್ಥವಾಗದಿರಲಿಲ್ಲ. ಪ್ರಭಾವ ಬಳಸಿ ಕಾನೂನಿನಿಂದ ತಪ್ಪಿಸಿಕೊಂಡಿದ್ದರೂ, ಪ್ರತೀಕಾರಕ್ಕೆ ತಹತಹಿಸುತ್ತಿರುವ ಹಾ.ರಾ. ಪುತ್ರರಿಂದ ಬಚಾವಾಗುವುದು ಸುಲಭದ ಮಾತಲ್ಲವೆಂಬ ವಿಚಾರ ಸ್ಪಷ್ಟವಾಗಿತ್ತು. ಇದಕ್ಕೊಂದು ಪರಿಹಾರ ಕಂಡುಕೊಳ್ಳಲೆಂದೇ ತಮ್ಮಯ್ಯ ರಾಜಿಸೂತ್ರದ ಮೊರೆಹೋದ!

ಇದರನ್ವಯ 'ನೀವು ರಾಜಿಯಾಗದಿದ್ದರೂ ತಮ್ಮಯ್ಯ ಕೇಸಿಂದ ಹೊರಬರ್ತಾನೆ. ಇದಕ್ಕೆ ಆತ ಮೂರು ತಿಂಗಳು ಐಷಾರಾಮಿ ಬಂಧನ ಅನುಭವಿಸಿದ್ದು ಮತ್ತು ಮೂರೇ ತಿಂಗಳಲ್ಲಿ ಜಾಮೀನು ಪಡೆದದ್ದೇ ಸಾಕ್ಷಿ' ಎಂಬರ್ಥದ ಸಂದೇಶವನ್ನು ತಮ್ಮಯ್ಯ ಆಪ್ತರ ಕಡೆಯಿಂದ ಹಾ.ರಾ. ಮಕ್ಕಳಿಗೆ ತಲುಪಿಸಿದ. ನಂತರ ಹಾ.ರಾ. ಹತ್ಯೆಗೆ ಲಕ್ಷಗಳ ಲೆಕ್ಕದಲ್ಲಿ 'ಬೆಲೆ' ಫಿಕ್ಸ್ ಆಯಿತು. ಆದರೆ, ಇದೇ ಹಣ ಮುಂದೊಂದು ದಿನ ತನ್ನ ಜೀವಕ್ಕೇ ಉರುಳಾಗಲಿದೆಯೆಂಬ ಸತ್ಯ ಬಡ್ಡಿ ಕುಳ ತಮ್ಮಯ್ಯನಿಗೆ ಹೊಳೆದಿರಲಿಲ್ಲ!

ದುಡ್ಡೆಂಬುದು ಪಿತೃಶೋಕವನ್ನು ಹೇಗೆ ಮರೆಸೀತು? ಇತ್ತ ಹಾ.ರಾ. ಪುತ್ರರು ರಾಜಿಯಾದರೂ ಗ್ಯಾರಳ್ಳಿ ತಮ್ಮಯ್ಯನನ್ನು ಮುಗಿಸಲು ಮುಹೂರ್ತ ಹುಡುಕುತ್ತಿದ್ದರೆ, ಮುಠ್ಠಾಳ ತಮ್ಮಯ್ಯ ಕೊಟ್ಟ ದುಡ್ಡು ಜೀವ ಉಳಿಸುತ್ತದೆಂಬ ಭ್ರಮೆಯಲ್ಲಿ ಮೈಮರೆಯತೊಡಗಿದ. ಇದನ್ನೇ ಕಾಯುತ್ತಿದ್ದ ಹಾ.ರಾ. ಪುತ್ರರು ಬೆಳ್ಳಂಬೆಳಗ್ಗೆ ವಾಕಿಂಗ್ ಹೊರಟಿದ್ದ ತಮ್ಮಯನನ್ನು ಕತ್ತರಿಸಿ ಹಾಕಿದ್ದರು.

ಹಾಸನದ ಪೊಲೀಸ್ ಇಲಾಖೆಯೆಂಬುದು ಹಾ.ರಾ. ನಾಗರಾಜ್ ಕೊಲೆ ಸಂದರ್ಭದಂತೆ ಗಬ್ಬೆದ್ದಿದ್ದರೆ ತಮ್ಮಯ್ಯನ ಹಂತಕರೂ ಕೂಡಾ ಸುಲಭವಾಗಿ ಬಚಾವಾಗಬಹುದಿತ್ತೇನೋ. ಆದರೆ ಗ್ಯಾರಳ್ಳಿ ತಮ್ಮಯ್ಯನ ಕೊಲೆ ನಡೆದ ಸಂದರ್ಭದಲ್ಲಿ ತಮ್ಮಯ್ಯ ಎಂಬ ಖಡಕ್ ಅಧಿಕಾರಿ ಎ.ಎಸ್ಪಿಯಾಗಿ ಬಂದು ಕೂತಿದ್ದರು. ತಮ್ಮಯ್ಯನ ಕೊಲೆಗೆ ಸಂಬಂಧಿಸಿದಂತೆ ತಾವೇ ಮುಂದೆ ನಿಂತು ಚಾರ್ಜ್ ಶೀಟ್ ಬರೆಸಿದರು. ಸರ್ಕಲ್ ಇನ್ಸ್‌ಪೆಕ್ಟರ್ ಗಿರಿಜೇಶ್ ಚಾರ್ಜ್ ಶೀಟ್ ಬರೆದರು!

ಈ ಪ್ರಕರಣದ ಆರೋಪ ಪಟ್ಟಿ ತಯಾರಾಗುವ ಹೊತ್ತಿಗಾಗಲೇ ಹಾ.ರಾ. ನಾಗರಾಜ್ ಹತ್ಯೆಗೆ ಸಂಬಂಧಿಸಿದ ಸಾಕ್ಷಿ ನಾಶ ಮುಂತಾದ ಭಂಜಕ ಕೃತ್ಯ ನಡೆಸಿಕೊಟ್ಟಿದ್ದ ಅನೇಕರ ನಿಷ್ಠೆ ಹಾ.ರಾ. ಪುತ್ರರತ್ತ ವಾಲಿತ್ತು. ಇವರೆಲ್ಲ ಸೇರಿ ಪೊಲೀಸರ ಮೇಲೆ ಒತ್ತಡ ತಂದು ಹಂತಕರನ್ನು ಬಚಾವು ಮಾಡುವ ಪ್ರಯತ್ನ ನಡೆಸಿದರು. ಆದರೆ ಎ.ಎಸ್ಪಿ ತಮ್ಮಯ್ಯ ಇದಕ್ಕೆಲ್ಲ ಅವಕಾಶ ಕೊಡಲಿಲ್ಲ.

ಇದೆಲ್ಲದರಿಂದಾಗೇ ಕೊಲೆ ಮಾಡಿದವರಿಗೆ ಶಿಕ್ಷೆಯಾಗುವಂತಾಯಿತು. ನೆನಪಿರಲಿ, ಹಾ.ರಾ. ನಾಗರಾಜ್ ಹತ್ಯೆ ಪ್ರಕರಣದಲ್ಲೂ ಇಂತಹದೊಂದು ನಿಷ್ಠುರ ತನಿಖೆ ನಡೆದಿದ್ದರೆ ಇನ್ನೊಂದು ಕೊಲೆ ನಡೆದು ಮತ್ತೊಂದಷ್ಟು ಮಂದಿ ಜೈಲು ಸೇರುವುದು ತಪ್ಪುತ್ತಿತ್ತು.


ಮೊದಲೇ ಹೇಳಿದಂತೆ ಕೊಲೆ ಮಾಡಿ ತಪ್ಪಿಸಿಕೋಳ್ಳೋದು ಸಲೀಸು ಎಂಬ ವಿಚಾರವನ್ನು ಈ ತೀರ್ಪು ಬುಡಮೇಲು ಮಾಡಿದೆ. ಇದೇ ಎಚ್ಚರಿಕೆಯಾಗಿ ಪರಿಸಿದರೆ ಹಾಸನದ ಮಂದಿ ನೆಮ್ಮದಿಯಿಂದಿದ್ದಾರು.

• ವರದಿಗಾರ


ಹಾ.ರಾ. ಹತ್ಯೆ ಪ್ರಕರಣ ಹೈಕೋರ್ಟ್‌ಗೆ?

ಹೀಗೆ ಸಮಗ್ರ ತನಿಖೆ ಹಾಗೂ ನಿಷ್ಠುರ ತೀರ್ಪಿನಿಂದ ಗ್ಯಾರಳ್ಳಿ ತಮ್ಮಯ್ಯನ ಹತ್ಯೆ ಪ್ರಕರಣ ಪರ್ಯಾವಸಾನಗೊಳ್ಳುತ್ತಿದ್ದಂತೆಯೇ ಹಾಸನದಲ್ಲಿ ಮತ್ತೊಂದು ಸುದ್ದಿ ಹರಿದಾಡಲಾರಂಭಿಸಿದೆ. ಅದು ಹಾ.ರಾ. ನಾಗರಾಜ್ ಹತ್ಯೆ ಪ್ರಕರಣವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸುವ ಬಗೆಗಿನ ಗುಸುಗುಸು.

ತಮ್ಮಯ್ಯನ ಕೊಲೆ ಪ್ರಕರಣದಲ್ಲಿ ಹಾ.ರಾ. ನಾಗರಾಜ್ ಕೊಲೆಗೆ ಪ್ರತೀಕಾರವಾಗಿ ತಮ್ಮಯ್ಯನ ಹತ್ಯೆ ನಡೆದಿದೆಯೆಂದು ಉಲ್ಲೇಖಿಸಲಾಗಿದೆಯಂತೆ. ಇದರಿಂದಾಗಿ ಹಾ.ರಾ. ಹತ್ಯೆ ಪ್ರಕರಣ ಕುರಿತಾಗಿ ಹೈಕೋರ್ಟ್‌ನಲ್ಲಿ ಪ್ರಶ್ನಿಸಲು ಕೆಲ ಮಂದಿ ಮುಂದಾಗಿದ್ದಾರೆಂದು ಹೇಳಲಾಗುತ್ತಿದೆ. ಹಾಗೊಂದು ವೇಳೆ ಹಾ.ರಾ. ಪ್ರಸಂಗ ಹೈಕೋರ್ಟ್ ಮೆಟ್ಟಿಲು ಹತ್ತಿದ್ದೇ ಆದರೆ ಕೆಲ ಆರೋಪಿಗಳು ಜೈಲು ಪಾಲಾಗುವುದು ಖಚಿತವೆಂಬ ಮಾತುಗಳೂ ಕೇಳಿಬರುತ್ತಿವೆ.



ಅಕ್ರಮ ಅದಿರು: ಮೊದಲ ಅಪರಾಧಿಯೇ ಸಿ.ಎಂ.!



ಇವತ್ತೇನೋ ರೆಡ್ಡಿಗಳ ಮುಲಾಜಿನ ಅಗತ್ಯವಿಲ್ಲವೆಂಬಂತೆ 'ಆ್ಯಕ್ಟ್' ಮಾಡುತ್ತಿರುವ ಮುಖ್ಯಮಂತ್ರಿ ಯಡಿಯೂರಪ್ಪ ಎಂಬ ಜನದ್ರೋಹಿ ಇದೇ ರೆಡ್ಡಿ-ರಾಮುಲುಗಳನ್ನು ಇಲ್ಲಿಯವರೆಗೆ ಪೋಷಿಸಿಕೊಂಡು ಬಂದಿರುವುದೇನೂ ಗುಟ್ಟಿನ ವಿಷಯವಲ್ಲ. ಬಳ್ಳಾರಿ ಭಾಗದಲ್ಲಿ ಯಡ್ಡಿ ಮತ್ತು ಆತನ ಮಕ್ಕಳ ಬೇನಾಮಿ ಗಣಿಗಾರಿಕೆ ಇಲ್ಲದಿರಬಹುದು. ಆದರೆ ಯಡ್ಡಿ ಬಳಗ ಈ ಅಕ್ರಮ ಅದಿರಿನ ಬೇನಾಮಿ ಲಾಭವನ್ನು ಬೇನಾಮಿಯಾಗಿಯೇ ಹೊಡೆಯುತ್ತಿದೆ. ಆ ಕಾರಣಕ್ಕಾಗಿಯೇ ಇಲ್ಲಿಯವರೆಗೆ ಅಕ್ರಮ ಅದಿರುಗಳ್ಳರಾದ ರೆಡ್ಡಿಗಳನ್ನು ರಕ್ಷಿಸುತ್ತ ಬರಲಾಗಿದೆ.

ಕೋರ್ಟ್ ತೀರ್ಪುಗಳೆಲ್ಲ ಅಕ್ರಮ ಗಣಿಗಾರಿಕೆ ವಿರುದ್ಧವೇ ಇರುವಾಗ, ಲೋಕಾಯುಕ್ತರ ವರದಿಯೂ ಇದನ್ನೇ ಹೇಳುವಾಗ, ಮುಖ್ಯಮಂತ್ರಿಯೊಬ್ಬ ಏನೂ ಕ್ರಮ ಕೈಗೊಳ್ಳುವುದಿಲ್ಲವೆಂದರೆ ಏನರ್ಥ? ಆತನೂ ಅದರಲ್ಲಿ ಪಾಲುದಾರನೇ ಎಂದಲ್ಲವೇ? ಈಗ ಇದೇ ಪ್ರಶ್ನೆ ಇಟ್ಟುಕೊಂಡು ಬಳ್ಳಾರಿಯ ಗಣಿ ಉದ್ಯಮಿ ಟಪಾಲ್ ಗಣೇಶ್ ಲೋಕಾಯುಕ್ತ ಕಚೇರಿ ಮತ್ತು ಹೈಕೋರ್ಟ್‌ಗಳಲ್ಲಿ ಯಡ್ಡಿ ವಿರುದ್ಧವೇ ಕೇಸು ಜಡಿದಿದ್ದಾರೆ. ಅವರ ಪ್ರಕಾರ ರಾಜ್ಯದ ಗಣಿಲೂಟಿಯ ಪ್ರಮುಖ ಆರೋಪಿ ಈ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿ ಯಡಿಯೂರಪ್ಪ! ಇದು ಸತ್ಯವೂ ಹೌದು. ಹೀಗಾಗಿ ಈ ರಾಜ್ಯದ ಜನರಿಂದ ಚುನಾಯಿಸಲ್ಪಟ್ಟ ಮುಖ್ಯಮಂತ್ರಿಯೊಬ್ಬ ಈಗ ಕಳ್ಳಖದೀಮನ ತರಹ ಕೋರ್ಟ್ ಕಟಕಟೆ ಏರಬೇಕಾಗಿದೆ...

ಟಪಾಲ್ ಗಣೇಶ್ ಎತ್ತಿರುವ ತಕರಾರುಗಳು ಹೀಗಿವೆ:

* ಕರ್ನಾಟಕ ರಾಜ್ಯದ ಗಡಿ ಬದಲಾವಣೆಯಾಗುವ ಮೂಲಕ ರಾಜ್ಯದ ಅದಿರು ಸಂಪತ್ತು ಆಂಧ್ರಪ್ರದೇಶದ ಪಾಲಾಗುತ್ತಿದೆ. ಇದೆಲ್ಲ ಗೊತ್ತಿದ್ದೂ ಬೇಕೆಂತಲೇ 'ಮೌನ' ವಹಿಸಿರುವ ಸಿ.ಎಂ.ಸಾಹೇಬರು ಈ ಲೂಟಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸುತ್ತಿದ್ದಾರೆ.

* 2008ರ ಕಾನೂನುಬಾಹಿರ ಸರ್ವೆಯ ಮೂಲಕ ರಾಜ್ಯದ ಗಣಿಪ್ರದೇಶವನ್ನು ಮೂಲಪ್ರದೇಶದಿಂದ 500 ಮೀ ಕೆಳಗಡೆ ಇಳಿಸಿರುವ ಪರಿಣಾಮವಾಗಿ ರಾಜ್ಯದ ಗಡಿಯೇ ಬದಲಾಗಿಬಿಟ್ಟಿದೆ. ಇಂತಹದ್ದನ್ನು ವಿರೋಧಿಸಿ, ನ್ಯಾಯ ಪಡೆಯಬೇಕಾಗಿದ್ದ ಸಿಎಂ ಸಾಹೇಬರು, ಗಡಿ ಒತ್ತುವರಿಯನ್ನು ಮತ್ತು ರಾಜ್ಯದ ಅದಿರು ಸಂಪತ್ತಿನ ಲೂಟಿಯನ್ನು ತಡೆಯುವ ಯಾವ ಪ್ರಯತ್ನವನ್ನು ಮಾಡದೇ ಇರುವುದರಿಂದ, ಈ ಲೂಟಿಯಲ್ಲಿ ಅವರು ಪಾಲುದಾರರು ಎಂಬುದು ಗೋಚರವಾಗುತ್ತಿದೆ.

* ರಾಜ್ಯದ ಗಡಿಯಲ್ಲಿರುವ ಟಪಾಲ್ ಗಣೇಶ್ ಮೈನ್ಸ್ ಏರಿಯಾವನ್ನು ಜನಾರ್ದನ ರೆಡ್ಡಿಯ ಓಎಂಸಿ ಕಂಪೆನಿ ಅಕ್ರಮವಾಗಿ ವಶಪಡಿಸಿಕೊಂಡಿದೆ. ಓಎಂಸಿ ಹೀಗೆ ಮಾಡಿರುವ ಎಲ್ಲ ಅಕ್ರಮ ಒತ್ತುವರಿಗಳ ವಿರುದ್ಧ ಕರ್ನಾಟಕ ಅರಣ್ಯ ಅಧಿಕಾರಿಗಳು ದೂರು (FOC No.:13/06,18/07) ಸಲ್ಲಿಸಿದ್ದಾರೆ. 2008ರ ಲೋಕಾಯುಕ್ತ ವರದಿಯಲ್ಲೂ ಈ ಅಕ್ರಮದ ಕುರಿತು ಪ್ರಸ್ತಾಪಿಸಲಾಗಿತ್ತು. ಆದರೆ ಆ ವೇಳೆಗೆ ಸಚಿವರಾಗಿದ್ದ ರೆಡ್ಡಿ-ರಾಮುಲುಗಳ ಮನಿ ಪವರ್‌ಗೆ ಮಣಿದ ಸಿ.ಎಂ. ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ.

* ಓಎಂಸಿಯಲ್ಲಿ ಮ್ಯಾನೇಜರಾಗಿ ಕೆಲಸ ನಿರ್ವಹಿಸಿದ್ದ ಆಂಜನೇಯ ಎಂಬುವವರೇ ಸುಪ್ರೀಂಕೋರ್ಟ್‌ಗೆ ದೂರೊಂದನ್ನು ದಾಖಲಿಸಿ, ಓಎಂಸಿಯ ಅದಿರು 35 ಗ್ರೇಡ್ ಮಟ್ಟದಲ್ಲೂ ಇಲ್ಲ ಎಂದು ಆರೋಪ ಮಾಡಿದ್ದಾರೆ. ಈ ಕುರಿತು ಯಡಿಯೂರಪ್ಪ ಸಾಹೇಬರು ಮೌನವಾಗಿದ್ದಾರೆ.

ಹೀಗೆ ನಿತ್ಯ ಅಕ್ರಮ ದಂಧೆ ನಡೆಸುತ್ತಿರುವ ಜನಾರ್ದನ ರೆಡ್ಡಿ ಪಟಾಲಂಗೆ ಸಹಕರಿಸುತ್ತಿರುವ ಅಧಿಕಾರಿಗಳ ವಿರುದ್ಧ ಯಡಿಯೂರಪ್ಪರಿಗೆ ನೂರಾರು ಮನವಿ ಸಲ್ಲಿಸಿದ್ದರೂ, ಅವರೆಂದೂ ರಾಜ್ಯ ಸಂಪತ್ತಿನ ರಕ್ಷಣೆಗೆ ಬರಲೇ ಇಲ್ಲ. ಹೀಗಾಗಿ ಇವತ್ತು ಗಣಿಲೂಟಿಯಲ್ಲಿ ರೆಡ್ಡಿ-ರಾಮುಲುಗಳಂತಹ ದರೋಡೆಕೋರರಿಗಿಂತಲೂ ರಾಜ್ಯಕ್ಕೆ ದ್ರೋಹ ಬಗೆದ ವ್ಯಕ್ತಿ ಎಂದರೆ ಅದು ಈ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿ ಯಡಿಯೂರಪ್ಪ!

ಹಾಗಾಗಿ ಗಣಿಲೂಟಿಯಲ್ಲಿ ಪ್ರಥಮ ಆರೋಪಿ ಈ ಯಡ್ಡಿಯೇ!

ಮಲ್ಲಿ

ನಂದೀಶನ ನಳಪಾಕ ಪುರಾಣ!

ಡೇಂಜರ್ ಶಿವನ ಟಾರ್ಗೆಟ್‌ಗಳಲ್ಲಿ ಒಬ್ಬನಾಗಿರುವ ನಂದೀಶ್ ಮಂಡ್ಯದ 'ಸಕ್ಕರೆ ಸೀಮೆ' ಅಂತೊಂದು ಪತ್ರಿಕೆಗೆ ಸಂಪಾದಕ. ಈ ಪತ್ರಿಕೆಯನ್ನ ಹಾಸನದಲ್ಲೂ ವಿತರಿಸುತ್ತಿರುವಾತ.

ಪತ್ರಿಕೋದ್ಯಮದಲ್ಲಿ ಭರ್ತಿ ಕಾಸು ಗಿಟ್ಟಿಸಿಕೊಂಡ ನಂದೀಶ ಹಾಸನದಲ್ಲೇ 'ನಳಪಾಕ' ಅಂತೊಂದು ಹೋಟೆಲ್ ಆರಂಭಿಸಿದ. ಇದರ ಮಾಲೀಕತ್ವವನ್ನು ಕೇರಳ ಮೂಲದ ಅನಿಲ್ ಎಂಬಾತನಿಗೆ ಕೊಟ್ಟಿದ್ದ. ಇದಕ್ಕೂ ಹಿಂದೆ ಹೋಟೆಲ್ ಅಪೂರ್ವ ಲಾಡ್ಜ್ ಅನ್ನು ಬಾಡಿಗೆಗೆ ಪಡೆದು ದಂಧೆ ನಡೆಸುತ್ತಿದ್ದ. ಈ ವಿಚಾರ ರಾಮನಗರ ಜೈಲಲಿರುವ ಶಿವನ ಕಿವಿಗೂ ಬಿದ್ದಿತ್ತು. ಈ ವಿಚಾರ ತಿಳಿದದ್ದೇ ರಿಸ್ಕ್ ಬೇಡ ಅಂತ ನಂದೀಶ ಹೋಟೆಲ್ ವ್ಯವಹಾರವನ್ನು ಮೋಹನ್ ಎಂಬಾತನಿಗೆ ಕೊಟ್ಟು ಕೈ ತೊಳೆದುಕೊಂಡಿದ್ದ.

ಇದೇ ದಂಧೆ ಮಂಡ್ಯದ ಭೂಗತ ಜಗತ್ತು ಹಾಸನದಲ್ಲಿ ಸದ್ದು ಮಾಡಿ ಅಮಾಯಕನೊಬ್ಬನ ಹತ್ಯೆಗೆ ಕಾರಣವಾಗಿರುವುದು ಸುಳ್ಳಲ್ಲ.

ಮಂಡ್ಯ: ಮತ್ತೆ ಹೆಣ ಬೀಳುತ್ತಾ?


'ನಾನು ಜೈಲಿಂದ ವಾಪಸಾಗೋದ್ರೊಳಗೆ, ಶತ್ರುಗಳೆಲ್ಲ ಸಮಾಧಿಯಾಗಿರ್ಬೇಕು'- ಈ ರೀತಿಯದ್ದೊಂದು ಶಪಥ ಮಾಡಿರುವವನು ಶಿವ ಅಲಿಯಾಸ್ ಡೇಂಜರ್ ಶಿವ!

ತನಗೆ ಜಾಮೀನು ಸಿಗುತ್ತದೆ, ಕೇಸು ಖುಲಾಸೆಯಾಗುತ್ತದೆ ಅಂತಲೇ ಬಲವಾಗಿ ನಂಬಿರುವ ಶಿವ ಇಂತಹುದೊಂದು ಶಪಥ ಮಾಡಿದ್ದ. ತನ್ನ ಮಾವ ಜಡೇಜಾ ರವಿ ಕೊಲೆಯಾದ ಮೂರೇ ದಿನಕ್ಕೆ ವಿರೋಧಿ ಲಿಕ್ಕರ್ ನಾಗಣ್ಣನನ್ನು ಕೊಂದು ಆ ಮೂಲಕವೇ ನಟೋರಿಯಸ್ ಆಗಿ ಬದಲಾದವನು ಶಿವ. ಅಖಂಡ ಹುಂಬತನ ಹಾಗೂ ಕ್ರೌರ್ಯ ತುಂಬಿಕೊಂಡಿರುವ ಈತ ಸ್ಕೆಚ್ಚು ಮಿಸ್ಸಾಗಿರುವುದರಿಂದ ಮತ್ತಷ್ಟು ವ್ಯಘ್ರನಾದಂತಿದೆ.

ಜೈಲೊಳಗಿದ್ದುಕೊಂಡೇ ಸ್ಕೆಚ್ಚು ರೆಡಿ ಮಾಡುವಷ್ಟು 'ಸ್ವಾತಂತ್ರ್ಯ'ವಿರುವುದರಿಂದ ನಂದೀಶ್, ಅಶೋಕ್ ಪೈ ಹಾಗೂ ಬುಯ್ಯಸ್ವಾಮಿಗೆ ಕಂಟಕ ತಪ್ಪಿದ್ದಲ್ಲ!

ಮಂಡ್ಯ-ಹಾಸನ ಅಂಡರ್‌ವರ್ಲ್ಡ್ ಲಿಂಕ್

ಪಾಪಿಗಳ ಕದನಕ್ಕೆ ಪಾಪದ ಹುಡುಗ ಬಲಿ!



ಅಫ್ಸರ್

ಹಾಸನದ ಹೋಟೆಲ್ ನಳಪಾಕದೊಳಗೆ ಹಾರಿದ ಂದಿನ ರಹಸ್ಯ ಬಯಲಾಗಿದೆ. ಇದರೊಂದಿಗೆ ಂಡ್ಯ-ಹಾಸನ ಅಂಡರ್‌ವರ್ಲ್ಡ್ ಕ್ ಹಾಗೂ ಜೈಲೊಳಗಿಂದಲೇ ಡೆಯುವ ದೀಲು-ಸ್ಕೆಚ್ಚುಗಳೂ ತ್ತಲಾಗಿವೆ. ದುರಂತವೆಂದರೆ, ಈ ಪಿಗಳ ಕದನಕ್ಕೆ ಪಾಪದ ಹುಡುಗ ಸ್ಸರ್ ಎಂಬಾತ ಬಲಿಯಾಗಿದ್ದಾನೆ.



ಬುಯ್ಯಾಸ್ವಾಮಿ

ಕಳೆದ ತಿಂಗಳ 26 ರಂದು ರಾತ್ರಿ ್ಯಬ್ ಟೆಕ್ನಿಷಿಯನ್ ಆಗಿರುವ ಫ್ಸರ್ ಹೋಟೆಲ್ ನಳಪಾಕದಲ್ಲಿ ೆಯರೊಂದಿಗೆ ಹರಟುತ್ತಿದ್ದ. ಾವಿಕಿ ನುಗ್ಗಿದ ಎಂಟು ಮಂದಿ ಂಡಿಗರು ಅಫ್ಸರ್ ಎದೆಗೆ ಫೈರ್ ಾಡಿದರು. ಏನಾಗುತ್ತಿದೆಯೆಂದು ಿಯುವ ಮುನ್ನವೇ ಅಫ್ಸರ್ ಕ್ಕುರುಳಿದ್ದ.

ಈ ಸುದ್ದಿ ತಿಳಿಯುತ್ತಲೇ ಹಾಸನದ ಮಂದಿ ಲಿಹೋದರು. ಮತ್ತೆ ಭೂಗತ ಜಗತ್ತು ಾರಾಮಾರಿಗಿಳಿಯಿತಾ ಅಂತಲೂ ಆತಂಕಗೊಂಡರು. ಾಕೆ ಕೊಲೆ ನಡೆಯಿತು ಅಂತಲೇ ಅರ್ಥವಾಗದ ಪರಿಸ್ಥಿತಿ. ಯಾಕೆಂದರೆ, ಸತ್ತು ಮಲಗಿದ್ದ ಅಫ್ಸರ್ ಯಾರೊಂದಿಗೂ ವೈರತ್ವ ಕಟ್ಟಿಕೊಂಡವನಲ್ಲ. ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಲ್ಯಾಬ್ ಟೆಕ್ನಿಷಿಯನ್ ಆಗಿದ್ದ ಈತ ಸಣ್ಣದೊಂದು ಜಗಳ ಮಾಡಿಕೊಂಡಿದ್ದೂ ಇಲ್ಲ. ಹಾಗಿದ್ದ ಮೇಲೆ ಕೊಲೆ ಯಾಕೆ ನಡೆಯಿತು ಅಂತ ನೆರೆದ ಮಂದಿ ತಲೆ ಕೆಡಿಸಿಕೊಂಡರು.



ಪರಿಸ್ಥಿತಿ ಹೇಗಿತ್ತೆಂದರೆ, ಖುದ್ದು ಹಾಸನದ ಪೊಲೀಸರೇ ಅಯೋಮಯರಾಗಿ ನಿಂತಿದ್ದರು! ಸಾಮಾನ್ಯರಿಗಿದ್ದ ಮಾಹಿತಿಯ ಹೊರತಾಗಿ ಪೊಲೀಸರಿಗೇನೂ ಗೊತ್ತಿರಲಿಲ್ಲ. ಜೊತೆಗೆ ಅಫ್ಸರ್ ಮೃತದೇಹದ ಅಂತಿಮ ಪರೀಕ್ಷೆ ಮಾಡಿದ್ದ ವೈದ್ಯರು 'ಇದು ವೃತ್ತಿಪರ ಕೊಲೆಗಡುಕರ ಕೆಲಸ' ಅಂತ ರಿಪೋರ್ಟ್ ಕೊಟ್ಟರು.

ಆದರೆ.... ಜಿಲ್ಲೆಯ ಎಸ್ಪಿ ಶರಶ್ಚಂದ್ರ ಚುರುಕಾದರು. ಕಗ್ಗಂಟಾಗಿರುವ ಈ ಪ್ರಕರಣ ಭೇದಿಸಲು ವಿಶೇಷ ಪಡೆಯನ್ನು ಸಜ್ಜುಗೊಳಿಸಿದರು. ಎಸ್ಐ. ನಾಗರಾಜ್ ಹೊನ್ನೂರು, ಸಕಲೇಶಪುರ ನಗರ ಠಾಣೆಯ ಯುವ ಎಸ್ಐ ದೀಪಕ್, ವೃತ್ತ ನಿರೀಕ್ಷಕ ವೇಣುಗೋಪಾಲ್, ಬೇಲೂರು ಸಿಪಿಐ ರಘು, ಹಾಸನ ನಗರ ಠಾಣೆ ಎಸ್ಐ ರಾಘವೇಂದ್ರ ಮುಂತಾದ ಖಡಕ್ ಅಧಿಕಾರಿಗಳ ತಂಡವದು.

ಹೀಗೊಂದು ಟೀಂ ಸಿದ್ಧಪಡಿಸಿದ ಶರಶ್ಚಂದ್ರ ಹಾಸನ, ಮಂಗಳೂರು, ಬೆಂಗಳೂರು ಹಾಗೂ ಮಂಡ್ಯ ಜಿಲ್ಲೆಗಳಿಗೆ ತನಿಖೆಗೆಂದು ಕಳುಹಿಸಿದರು. ದಿನಕಳೆದರೂ ಕೊಲೆ ನಡೆದದ್ದು ಯಾಕೆಂದೇ ತಿಳಿಯದ ಹಾಸನದ ಮಂದಿ ಕುತೂಹಲದಿಂದ ಕಾಯಹತ್ತಿದರು.

ಹೀಗೊಂದು ರೌಂಡು ತನಿಖೆ ನಡೆಸುತ್ತಲೇ ಪೊಲೀಸರೇ ಅಚ್ಚರಿ ಪಡುವಂತಹುದೊಂದು ವಿಚಾರ ಬಯಲಾಯಿತು! ಯಾರನ್ನೇ ಕೊಲ್ಲಲು ಬಂದವರು ಅಫ್ಸರ್‌ನನ್ನು ಬಲಿ ಹಾಕಿದ್ದಾರೆಂಬ ಅಂಶ ತನಿಖಾ ತಂಡಕ್ಕೆ ಮನದಟ್ಟಾಯಿತು.

ಈ ಸಣ್ಣ ಎಳೆ ಹಿಡಿದು ಹೊರಟ ಎಸ್ಐ ನಾಗರಾಜ್ ಹೊನ್ನೂರ್ ಮಹತ್ವದ ಮಾಹಿತಿ ಕಲೆ ಹಾಕಿದರು. ಈ ಕೊಲೆಯ ಸ್ಕೆಚ್ಚು ರೂಪುಗೊಂಡಿದ್ದು ರಾಮನಗರ ಜೈಲಲ್ಲಿ ಎಂಬುದು ಅದರ ಸಾರಾಂಶ!

ನಂತರ ಈ ಸಂಚಿನ ಹಿಂದಿರುವುದು ಶಿವ ಅಲಿಯಾಸ್ ಡೇಂಜರ್ ಶಿವ ಎಂಬ ಮಾಹಿತಿಯೂ ಹೊರಬಿತ್ತು. ಈ ಡೇಂಜರ್ ಶಿವ ಹೇಳಿಕೇಳಿ 2007 ರಲ್ಲಿ ಮಂಡ್ಯದಲ್ಲಿ ಹತನಾದ ಜಡೇಜಾ ರವಿಯ ಅಕ್ಕನ ಮಗ. ಈತ ತನ್ನ ಮಾವನ ಹತ್ಯೆ ಮಾಡಿದವರ ರಕ್ತತರ್ಪಣ ತೆಗೆದುಕೊಳ್ಳಲು ತಹತಹಿಸುತ್ತಿರುವ ಅಂಶ ಪೊಲೀಸರಿಗೆ ತಿಳಿಯದಿರುವುದೇನಲ್ಲ. ಈತ ಜಡೇಜಾ ರವಿ ಕೊಲೆಯಾದ ಮೂರೇ ದಿನಕ್ಕೆ ಲಿಕ್ಕರ್ ನಾಗಣ್ಣನನ್ನು ಮೈಸೂರಲ್ಲಿ ಹೊಡೆದು ಹಾಕಿದ್ದ. ಆ ಕೇಸಿನಲ್ಲೇ ರಾಮನಗರದ ಜೈಲು ಸೇರಿದ್ದ.

ಇಷ್ಟಾದರೂ ಡೇಂಜರ್ ಶಿವನೊಳಗಿನ ದ್ವೇಷದ ಕಿಡಿ



ಆರಿರಲಿಲ್ಲ. ತನ್ನ ಮಾವ ಜಡೇಜಾನನ್ನು ಕೊಂದ ಎಲ್ಲರನ್ನೂ ಕೊಲ್ಲುವ ಶಪಥ ಮಾಡಿದದ. ಅದರನ್ವಯ ಈತನ ಲಿಸ್ಟ್‌ನಲ್ಲಿರುವದ್ದರೆಂದರೆ, ಹಾಸನ ಜೈಲಿನಲ್ಲಿರುವ ಅಶೋಕ್ ಪೈ, ಆಗಾಗ ಹಾಸನಕ್ಕೆ ಹೋಗಿಬರುವ ಬುಯ್ಯಸ್ವಾಮಿ ಮತ್ತು ಮಂಡ್ಯದ 'ಸಕ್ಕರೆ ಸೀಮೆ' ಪತ್ರಿಕೆ ಸಂಪಾದಕ ನಂದೀಶ. ಇವರನ್ನೆಲ್ಲ ಮುಗಿಸಲು ಶಿವ ಜೈಲೊಳಗಿಂದಲೇ ಸ್ಕೆಚ್ಚು ರೂಪಿಸಿದ.

ಇದಾದಬಳಿಕ ಶಿವ ಈ 'ಭಾರ'ವನ್ನು 2006 ರಲ್ಲಿ ಚೀರನಳ್ಳಿ ಶಿವರಾಂ ಕೊಲೆ ಪ್ರಕರಣದಲ್ಲಿ ಜೈಲು ಸೇರಿ ಬಂದಿದ್ದ ಅಭಿರಾಮ್ ಎಂಬಾತನ ಹೆಗಲಿಗೆ ತಗುಲಿಸಿದ. ಇದಕ್ಕಾಗಿ ಒಂದು ಪಿಸ್ತೂಲ್ ಹಾಗೂ 25 ಸಾವಿರವನ್ನು ಕೊಡಿಸಿದ್ದ. ತಕ್ಷಣ ಫೀಲ್ಡಿಗಿಳಿದ ಅಭಿರಾಮ್‌ಗೆ ಜುಲೈ 26 ರಂದು ಬುಯ್ಯಸ್ವಾಮಿ ಹಾಗೂ ನಂದೀಶ ಜೈಲಲ್ಲಿರುವ ಅಶೋಕ್ ಪೈನನ್ನು ನೋಡಲು ಬರುತ್ತಾರೆಂಬುದು ಖಚಿತಗೊಂಡು ಅಂದೇ ಮುಹೂರ್ತ ನಿಗದಿಪಡಿಸಿದ್ದ. ಇದಕ್ಕಾಗಿ 8 ಹುಡುಗರ ಟೀಂ ರೆಡಿ ಮಾಡಿ ಮಹೇಶ ಎಂಬ ಕಟ್ಟುಮಸ್ತಾದ ಹುಡುಗನಿಗೆ ರಿವಾಲ್ವರ್ ಟ್ರೈನಿಂಗ್ ಕೊಟ್ಟು ಅಣಿಗೊಳಿಸಿದ್ದ.

ಹಾಗೆ ಹಾಸನಕ್ಕೆ ಬಂದಿಳಿದ ಹಂತಕ ಪಡೆ ಮೊದಲು ಟಾರ್ಗೆಟ್ ಮಾಡಿದ್ದುದು ಬುಯ್ಯಸ್ವಾಮಿಯನ್ನ. ಭಾವಚಿತ್ರ ಹಿಡಿದು ಅಪೂರ್ವ ಲಾಡ್ಜ್‌ನಲ್ಲಿ ತಂಗಿ ಬುಯ್ಯಸ್ವಾಮಿ ಚಲನವಲನ ಗಮನಿಸಿದ ಹಂತಕರು ಸ್ವಾಮಿ ಮತ್ತು ನಂದೀಶ ನಳಪಾಕ ಹೋಟೆಲ್‌ನಲ್ಲಿ ಅಡ್ಡೆ ಹಾಕುವುದನ್ನು ಖಚಿತಪಡಿಸಿಕೊಂಡು ಬೇಟೆಗೆ ಅಣಿಯಾಗಿವೆ.

ಅಂದು ರಾತ್ರಿ 8.30 ರ ಮಂದ ಬೆಳಕಲ್ಲಿ ಹರಟುತ್ತಾ ಕುಳಿತಿದ್ದ ಅಫ್ಸರ್ ಹಾಗೂ ಸ್ನೇಹಿತರು ಹಂತಕರ ಕಣ್ಣಿಗೆ ಬಿದ್ದಿದ್ದಾರೆ. ಅಫ್ಸರ್ ದುರಾದೃಷ್ಟಕ್ಕೆಂಬಂತೆ ಬುಯ್ಯಸ್ವಾಮಿಯನ್ನೇ ಹೋಲುತ್ತಾನೆ. ಇದನ್ನೇ ನಿಜವೆಂದುಕೊಂಡ ಹಂತಕ ಪಡೆ ಅಫ್ಸರ್‌ನನ್ನು ಕೊಂದು ಕೆಡವಿ ಪರಾರಿಯಾಗಿದೆ.

ಸಕಾರಾತ್ಮಕ ಅಂಶವೆಂದರೆ ಈ ರೀತಿಯ ಪೈಶಾಚಿಕ ಕೃತ್ಯ ನಡೆಸಿ ಮಂಡ್ಯ ಸೇರಿದ ಹಂತಕರನ್ನು ಪೊಲೀಸರು ಕೆಡವಿಕೊಂಡಿದ್ದಾರೆ. ಈ ಮೂಲಕ ವಾರವಿಡೀ ತಲ್ಲಣಿಸಿ ಹೋಗಿದ್ದ ಹಾಸನದ ಮಂದಿ ಕೊಂಚ ನಿಟ್ಟುಸಿರು ಬಿಡುವಂತಾಗಿದೆ.

ಆದರೆ ಭೂಗತದ ಗಂಧಗಾಳಿ ತಿಳಿಯದ ಅಫ್ಸರ್ ಪಾಪಿಗಳ ಕದನಕ್ಕೆ ಬಲಿಯಾಗಿರುವುದನ್ನು ಮಾತ್ರ ಆತನ ಮಿತ್ರರಿಗಾಗಲಿ, ಹಾಸನದ ಜನರಿಗಾಗಲಿ ಅರಗಿಸಿಕೊಳ್ಳಲಾಗುತ್ತಿಲ್ಲ.

• ವರದಿಗಾರ






ಸಕಲಕಲಾವಲ್ಲಭ ರೇಣುಕಾಚಾರ್ಯ!

ಕಳೆದ ವರ್ಷ ನವೆಂಬರ್ ತಿಂಗಳಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನ ವಿರುದ್ಧ ಬಂಡಾಯದ ಬಾವುಟ ಹಾರಿಸಿದ್ದಲ್ಲದೆ ಅವರ ಬಗ್ಗೆ ಅವಾಚ್ಯ ಶಬ್ದಗಳನ್ನೂ ಬಳಸಿದ್ದ ಹೊನ್ನಾಳಿ ಶಾಸಕ ರೇಣುಕಾಚಾರ್ಯ ಈಗ ಅದೇ ಯಡ್ಡಿಯ ಅಚ್ಚುಮೆಚ್ಚಿನ ಶಿಷ್ಯನಾಗಿ ಬಳ್ಳಾರಿ ಗಣಿದಣಿಗಳ ವಿರುದ್ಧ ಸಮರ ಸಾರಿದ್ದಾನೆ. ಇದು ರೇಣುಕಾಚಾರ್ಯನ ಅವಕಾಶವಾದಿತನಕ್ಕೆ ಒಂದು ಪುಟ್ಟ ಉದಾಹರಣೆ.

ನರ್ಸ್ ಜಯಲಕ್ಷ್ಮಿ ಕುಖ್ಯಾತಿಯ ರೇಣುಕನಿಗೆ ಯಾವಾಗ ಯಾರ ಪರ ಇರಬೇಕೆಂಬುದು ರಕ್ತಗತವಾಗಿದೆ. ಈ ಕಾರಣದಿಂದಲೇ ಆತನ ಆತ್ಮೀಯರು ಕೂಡ ರೇಣುಕಾಚಾರಿಯನ್ನು ಯಡ್ಡಿ ಸಂಪುಟದ 'ನವರಸನಾಯಕ' ಎಂದು 'ಪ್ರೀತಿ'ಯಿಂದ ಕರೆಯುತ್ತಾರೆ!



ಈತ ಎಂತಹ ಸಕಲಕಲಾವಲ್ಲಭನೆಂದರೆ, ಕಳೆದ ಬಾರಿ ಬಳ್ಳಾರಿ ಗಣಿ ಗ್ಯಾಂಗಿನವರು ಯಡ್ಡಿ ವಿರುದ್ಧ ಬಂಡಾಯದ ಬಾವುಟ ಹಾರಿಸಿದ್ದಾಗ ಇದೇ ರೇಣುಕಾಚಾರಿ 'ರೆಬೆಲ್‌ಸ್ಟಾರ್' ತರಹ ವರ್ತಿಸುತ್ತಾ ಪ್ರತಿ ದಿನ ಯಡ್ಡಿ ವಿರುದ್ಧ ಪತ್ರಿಕಾಗೋಷ್ಠಿಗಳನ್ನು ಕರೆದು ಕೆಂಡ ಕಾರಿದ್ದೇ ಕಾರಿದ್ದು. ಅದಕ್ಕೂ ಮುನ್ನ ನರ್ಸ್ ಜಯಲಕ್ಷ್ಮಿ ಜೊತೆಗಿನ 'ಕಿಸ್ಸಿಂಗ್ ಫೋಟೋ'ಗಳ ಮುಖಾಂತರ ತಾನು ಎಂತಹ 'ಲವ್ಲಿ ಸ್ಟಾರ್' ಎಂಬುದನ್ನೂ ಸಮಸ್ತ ಕರ್ನಾಟಕದ ಜನತೆಗೆ ತೋರಿಸಿಕೊಟ್ಟಿದ್ದ ಮಹಾನುಭಾವನೀತ. ಇನ್ನು ಈತ ಎಂತಹ 'ಸಾಹಸ ಸಿಂಹ' ಅಂದರೆ ಆತನಿಗೆ ಸಿಟ್ಟು ಬಂದಾಗಲೆಲ್ಲ ಅಧಿಕಾರಿಗಳ ವಿರುದ್ಧ ಯಾವುದೇ ಮುಲಾಜಿಲ್ಲದೆ "ಭೋ...ಮಗ, ಸೂ... ಮಗ" ಎಂದೆಲ್ಲ ಸಾರ್ವಜನಿಕವಾಗಿ ಬೈಯುತ್ತಾನೆ.

ಅದೆಲ್ಲ ಇರಲಿ, ಸಾಧಾರಣವಾಗಿ ಪ್ರತಿಯೊಬ್ಬ ಮುಖ್ಯಮಂತ್ರಿಗೂ ರೇಣುಕಾಚಾರಿಯಂತಹ 'ಸಕಲಗುಣಸಂಪನ್ನ' ವ್ಯಕ್ತಿಯೊಬ್ಬ ಅಚ್ಚುಮೆಚ್ಚಿನ ಶಿಷ್ಯನಾಗಿರುತ್ತಾನೆ. ಮುಖ್ಯಮಂತ್ರಿ ಅತ್ಯಂತ ಸಂದಿಗ್ಧ ಮತ್ತು ಕಷ್ಟಕರ ಪರಿಸ್ಥಿತಿಯಲ್ಲಿದ್ದಾಗ ಅವರ ಪರವಾಗಿ ಎದುರಾಳಿ ತಂಡದ ಮೇಲೆ 'ಮಾತಿನ ಬಾಂಬ್' ಎಸೆಯುವುದು ಇಂತಹ ಶಿಷ್ಯಂದಿರ ಮುಖ್ಯ ಕೆಲಸ. ಈ ಹಿಂದೆ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದಾಗ ಜೀವರಾಜ್ ಆಳ್ವಾ, ಎಸ್ಸೆಂ ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಡಿ.ಕೆ.ಶಿವಕುಮಾರ್ ತರಹದ ಶಿಷ್ಯಂದಿರು ಇಂತಹ ಕೆಲಸಗಳನ್ನು ಸಮರ್ಥವಾಗಿ ನಿರ್ವಹಿಸಿದ್ದರು. ಈಗ ಕಳೆದ ಕೆಲವು ದಿನಗಳಿಂದ ರೇಣುಕಾಚಾರ್ಯ ದಿನಕ್ಕೊಂದರಂತೆ ಬಳ್ಳಾರಿ ಗಣಿಧಣಿಗಳ ವಿರುದ್ಧ ರೇಣುಕಾಚಾರಿ ಮಾತಿನ ಬಾಂಬ್ ಎಸೆಯುವುದನ್ನು ನೋಡಿದರೆ ಯಡ್ಡಿಯ ಪಟ್ಟದ ಶಿಷ್ಯ ಈತನೇ ಎಂಬುದು ಸ್ಪಷ್ಟವಾಗುತ್ತದೆ.

ಕೇವಲ ಐದಾರು ತಿಂಗಳ ಹಿಂದೆ ಈ ರೇಣುಕಾ ಅದೆಷ್ಟು ಮಂಗಾಟ ಮಾಡಿದ್ದನೆಂದರೆ, ಭಿನ್ನಮತೀಯ ಭೂತವನ್ನು ತೋರಿಸಿದ್ದನೆಂದರೆ ಕೊನೆಗೆ ಯಡಿಯೂರಪ್ಪ ವಿಧಿ ಇಲ್ಲದೆ ಈತನನ್ನು ತನ್ನ ಸಂಪುಟಕ್ಕೆ ಸೇರಿಸಿಕೊಂಡು ಈತನನ್ನು ಅಬಕಾರಿ ಸಚಿವನನ್ನಾಗಿ ಮಾಡಿದ್ದರು. ಆಗ ಈ ಬೆಳವಣಿಗೆ ಯಡ್ಡಿ ಪಾಲಿಗೆ ಹಿನ್ನಡೆಯಂತೆ ಕಾಣಿಸಿದ್ದರೂ ಇಂದು ಅದೇ ರೇಣುಕಾ ಯಡ್ಡಿ ಪಾಲಿನ 'ಆಪತ್ಬಾಂಧವ'ನಾಗಿ ರೂಪಾಂತರಗೊಂಡಿದ್ದಾನೆ. ಇವತ್ತು ಬಳ್ಳಾರಿ ಗಣಿ ಗ್ಯಾಂಗಿನ ವಿರುದ್ಧವಾಗಲೀ, ಯಡ್ಡಿಯ ಪರವಾಗಲೀ ಉಗ್ರವಾಗಿ ಮಾತನಾಡಲು ಹಿರಿಯ ಸಚಿವರೂ ಆದ, ಚೆಡ್ಡಿಗಳು ಆದ ಆರ್.ಅಶೋಕ್, ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಮುರುಗೇಶ್ ನಿರಾಣಿ ಮೊದಲಾದವರೇ ಹಿಂಜರಿಯುತ್ತಿರುವಾಗ ಈ ರೇಣುಕಾ ಮಾತ್ರ ರೆಡ್ಡಿಗಳ ವಿರುದ್ಧ ಓತಪ್ರೋತವಾಗಿ ಕೆಂಡಕಾರುತ್ತಿದ್ದಾನೆ. ಇದರಿಂದ ತುಂಬಾ ಅಪ್‌ಸೆಟ್ ಆದ ಗಣಿ ಗ್ಯಾಂಗಿನವರು ಯಡ್ಡಿ ಮತ್ತು ಪಕ್ಷಾಧ್ಯಕ್ಷ ಈಶ್ವರಪ್ಪರ ಬಳಿ "ಆ ರೇಣುಕಾಚಾರ್ಯನಿಗೆ ನಾಲಿಗೆ ಬಿಗಿಹಿಡಿದು ಮಾತನಾಡಲು ಹೇಳಿ" ಎಂದು ಕಿಡಿಕಾರಿದ್ದಾರಂತೆ.

ಯಡಿಯೂರಪ್ಪ ಈ ರೇಣುಕನಿಗೆ ಅಬಕಾರಿ ಖಾತೆಯನ್ನು ನೀಡಿದಾಗ ಅದನ್ನು ಆತ ಒಲ್ಲದ ಮನಸ್ಸಿನಿಂದಲೇ ಸ್ವೀಕರಿಸಿದ. ಯಾಕೆಂದರೆ ಅಬಕಾರಿ ಇಲಾಖೆ ಈಗ ಈ ಹಿಂದಿನಂತೆ 'ಫಲಪ್ರದ' ಖಾತೆಯಾಗಿ ಉಳಿದಿಲ್ಲ. ಆದರೂ ರೇಣುಕಾ ಎಂತಹವನೆಂದರೆ ಆತನಿಗೆ ಕಲ್ಲನ್ನೇ ಕೊಟ್ಟರೂ ಅದನ್ನು ಹಿಂಡಿ ನೀರು ತೆಗೆಯುವ ಜಾತಿಯುಳ್ಳವನು. ಆದ್ದರಿಂದ 'ಗುಂಡು' ಸಚಿವನಾಗಿ ಅಧಿಕಾರ ವಹಿಸಿಕೊಂಡ ಕೂಡಲೇ ಈತ ಮೊದಲು ಮಾಡಿದ ಕೆಲಸವೇನು ಗೊತ್ತೇ? ಬೆಂಗಳೂರಿನ 56 ಬಾರ್ ಕಮ್ ಡಿಸ್ಕೋಥೆಕ್‌ಗಳ ಮೇಲೆ ದಾಳಿ ನಡೆಸಿದ್ದು. ಇದರ ಪರಿಣಾಮವಾಗಿ ಇಂದು ಅದೇ ಬಾರ್ ಮತ್ತು ಡಿಸ್ಕೋಥೆಕ್‌ಗಳಿಂದ ಏನಿಲ್ಲವೆಂದರೂ ರೇಣುಕನಿಗೆ ತಿಂಗಳಿಗಿಷ್ಟು ಎಂದು 'ಮಾಮೂಲಿ' ಬರಲಾರಂಭಿಸಿದೆ.

ಅದೇರೀತಿ ಸ್ಟಾರ್ ಹೋಟೆಲ್‌ಗಳಲ್ಲಿ ಮಧ್ಯರಾತ್ರಿಯ ನಂತರವೂ ಮದ್ಯ ನೀಡಬಹುದು ಎಂದು ಶಿಫಾರಸ್ಸು ಮಾಡಿದ ರೇಣುಕಾಚಾರಿ ಆ ಮೂಲಕ ಬೆಂಗಳೂರು ಪೊಲೀಸ್ ಕಮೀಷನರ್ ಶಂಕರ್ ಬಿದರಿ ಜೊತೆ ಜಟಾಪಟಿಗಿಳಿದ. ಆದರೆ ಇಂತಹ ಒಂದು ಪ್ರಸ್ತಾಪ ಮಾಡುವ ಮೂಲಕ ರೇಣುಕಾ ಅಲ್ಲೂ 'ಡೀಲ್' ಕುದುರಿಸಲು ಹೊರಟಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಇದೆಲ್ಲದರ ಅರ್ಥ ಅಬಕಾರಿಯಂತಹ 'ಒಣ' ಖಾತೆಯನ್ನೂ ಈಗ ರೇಣುಕಾಚಾರಿ ತನ್ನ ಜಾಣತನದಿಂದ 'ಸಂಪದ್ಭರಿತ'ವಾಗಿ ಪರಿವರ್ತಿಸಿದ್ದಾನೆ.

ಸಂದರ್ಭಕ್ಕೆ ಸರಿಯಾಗಿ ತನ್ನ ಬಣ್ಣವನ್ನು ಮತ್ತು ನಿಷ್ಠೆಯನ್ನು ಬದಲಾಯಿಸಿ ತನ್ನ ರಾಜಕೀಯ ಬೇಳೆಬೇಯಿಸಿಕೊಳ್ಳುವುದು ರೇಣುಕನಿಗೆ ಸಿದ್ಧಿಸಿರುವ ಕಲೆ. ಯಡ್ಡಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುವ ಮುನ್ನ ತಾನು ಖಂಡಿತವಾಗಿಯೂ ಅವರ ಸಂಪುಟದಲ್ಲಿ ಮಂತ್ರಿಯಾಗುತ್ತೇನೆ ಎಂದು ಎಲ್ಲಾ ಕಡೆ ಹೇಳಿಕೊಂಡು ತಿರುಗಾಡುತ್ತಿದ್ದ ರೇಣುಕಾಚಾರ್ಯ ಅದಕ್ಕೆಂದೇ ಸುಮಾರು ಇಪ್ಪತ್ತು ಜೋಡಿ ಬಿಳಿ ಪ್ಯಾಂಟ್-ಷರ್ಟ್ ಹೊಲಿಸಿಕೊಂಡಿದ್ದ! ಆದರೆ ಯಾವಾಗ ಯಡ್ಡಿ ಈತನಿಗೆ ಕೈಕೊಟ್ಟು ಈತನ ಜಿಲ್ಲೆಯವರೇ ಆದ ರವೀಂದ್ರನಾಥ್‌ರನ್ನು ಮಂತ್ರಿ ಮಾಡಿದರೋ ಆಗ ರೇಣುಕನಿಗೆ ಇನ್ನಿಲ್ಲದಂತಹ ಶಾಕ್ ಆಗಿತ್ತು, ಆಗಲೇ ಆತ ರೆಡ್ಡಿ ಗ್ಯಾಂಗಿನ ಭಿನ್ನಮತೀಯ ಚಟುವಟಿಕೆಯಲ್ಲಿ ತೊಡಗಿಕೊಂಡ. ಮಾತ್ರವಲ್ಲ, ಆತನಂತೆಯೇ ಅತೃಪ್ತಗೊಂಡಿದ್ದ ಸುಮಾರು 15 ಶಾಸಕರನ್ನೂ ರೆಡ್ಡಿ ಪಾಳೆಯಕ್ಕೆ ಕರೆದುಕೊಂಡುಹೋಗಿದ್ದ.

ಅದೆಂತಹ ಸಂದರ್ಭವಾಗಿತ್ತೆಂದರೆ 'ಅನ್ನ ಹಳಸಿತ್ತು, ನಾಯಿ ಹಸಿದಿತ್ತು' ಎಂಬ ಗಾದೆ ಮಾತಿಗೆ ಸೂಕ್ತವಾಗಿತ್ತು. ಆಗ ಯಡ್ಡಿ ವಿರುದ್ಧ ಅಸಮಾಧಾನಗೊಂಡಿದ್ದ ರೇಣುಕಾಚಾರಿ ಮತ್ತು ಇತರೆ ಶಾಸಕರನ್ನು ಬಳ್ಳಾರಿ ಗಣಿ ಧಣಿಗಳು ಸರಿಯಾಗಿಯೇ ಬಳಸಿಕೊಳ್ಳಲು ಒಂದು ಕಾರಣವೂ ಇತ್ತು, ಅದೇನೆಂದರೆ ಅಲ್ಲಿಯತನಕ ಬಳ್ಳಾರಿ ರೆಡ್ಡಿಗಳ ಮುಷ್ಟಿಯಲ್ಲಿ ಯಾವುದೇ ಲಿಂಗಾಯತ ಶಾಸಕರು ಇರಲಿಲ್ಲ, ಆದ್ದರಿಂದಲೇ ರೇಣುಕಾಚಾರಿ ಮತ್ತು ಜಗದೀಶ್ ಶೆಟ್ಟರ್ ಜೊತೆಗೆ ಇತರೆ ಲಿಂಗಾಯತರನ್ನು ಸೇರಿಸಿಕೊಳ್ಳುವ ಮುಖಾಂತರ ಯಡ್ಡಿ ವಿರುದ್ಧ ಲಿಂಗಾಯತರನ್ನೇ ಎತ್ತಿ ಕಟ್ಟುವ ರಾಜಕೀಯ ತಂತ್ರಗಾರಿಕೆಯನ್ನು ರೆಡ್ಡಿ ಗ್ಯಾಂಗ್ ಮಾಡಿತ್ತು.

ಆದರೆ ರೇಣುಕಾಚಾರಿ ಎಷ್ಟು 'ಜಾಣ' ಎಂದರೆ ಬಳ್ಳಾರಿಯ ಗಣಿ ದೊರೆಗಳನ್ನು ಹೀಗೆ ಬಳಸಿಕೊಂಡು ಯಡ್ಡಿಯಿಂದ ಸಚಿವ ಸ್ಥಾನ ಮತ್ತು ಅದರೊಂದಿಗೆ ಗೂಟದ ಕಾರನ್ನೂ ಪಡೆದನಂತರ ಆತ ಅದೇ ರೆಡ್ಡಿಗಳನ್ನು ತನ್ನ ಕಾಲಕಸದಂತೆ ನೋಡಲಾರಂಭಿಸಿದ. ಮಾತ್ರವಲ್ಲ, ಈಗ ಯಡ್ಡಿಯ ಕುಮ್ಮಕ್ಕಿನೊಂದಿಗೆ ಅದೇ ರೆಡ್ಡಿಗಳ ವಿರುದ್ಧ ಸಾರ್ವಜನಿಕವಾಗಿ ರೇಣುಕಾಚಾರಿ ಯುದ್ಧ ಸಾರಿದ್ದಾನಲ್ಲದೆ, ಪಕ್ಷದ ಒಳಗೆ 'ರೆಡ್ಡಿಗಳನ್ನು ಓಡಿಸಿ, ಬಿಜೆಪಿಯನ್ನು ರಕ್ಷಿಸಿ' ಎಂಬ ಕೆಲ ಚೆಡ್ಡಿ ಶಾಸಕರ ಬಂಡಾಯದ ನೇತೃತ್ವ ವಹಿಸಿದ್ದಾನೆ!

ಇಂತಹ ರೇಣುಕಾಚಾರ್ಯನನ್ನು ಸಕಲಕಲಾವಲ್ಲಭ ಎಂದಲ್ಲದೆ ಇನ್ನೇನೆಂದು ಕರೆಯಲು ಸಾಧ್ಯ?!

● ಸದಾಶಿವ ಶೆಣೈ

ಬಿಜೆಪಿಯೊಳಗೆ ಅನಾಥರಾದ ರೆಡ್ಡಿಗಳು


ಹೋದ ವರ್ಷ ಮುಖ್ಯಮಂತ್ರಿ ಯಡಿಯೂರಪ್ಪ ತನ್ನ ಸ್ಥಾನದಿಂದ ಇಳಿಯುವ ತನಕ ಬಿಡುವುದಿಲ್ಲ ಎಂದು ಬಳ್ಳಾರಿಯ ಗಣಿ ಕಳ್ಳರು ಪಣ ತೊಟ್ಟು ಯಡ್ಡಿ ವಿರುದ್ಧದ ತಮ್ಮ ಯುದ್ಧವನ್ನು ದೆಹಲಿ ತನಕ ಹೊತ್ತೈದಿದ್ದರಲ್ಲ...

ಆಗ 'ಗುಂಡು' ಮಂತ್ರಿ ರೇಣುಕಾಚಾರ್ಯ ಸಮೇತ ಇನ್ನುಳಿದ ಅತೃಪ್ತ ಶಾಸಕರನ್ನು ತಮ್ಮ ಅಸ್ತ್ರಗಳಾಗಿ ಅವರು ಬಳಸಿಕೊಂಡಿದ್ದರಲ್ಲ....

ಅವತ್ತು ಯಡ್ಡಿ ವಿರುದ್ಧ ಮತ್ತೋರ್ವ ಚೆಡ್ಡಿ ಲಿಂಗಾಯತ ಜಗದೀಶ್ ಶೆಟ್ಟರ್ ಅಲ್ಲದೆ ಇತರರೂ ಸೇರಿದಂತೆ ರೆಡ್ಡಿಗಳ ಪರ ಕನಿಷ್ಠ ನಲವತ್ತು ಶಾಸಕರಿದ್ದಾರೆ ಎಂದು ರೆಡ್ಡಿಗಳು ಬಿಂಬಿಸಿದ್ದರಲ್ಲ.....

ಅಂತಹ ರೆಡ್ಡಿಗಳ ಬೆನ್ನಿಗೆ ಇವತ್ತು ಯಾರ್‍ಯಾರು ಇದ್ದಾರೆ ಎಂದು ನೋಡಿದರೆ, ರೆಡ್ಡಿ ಗ್ಯಾಂಗಿನ ದುಷ್ಟತನವೂ, ದೇಶಭಕ್ತ ಬಿಜೆಪಿ ಶಾಸಕರ ಹಣಬಾಕತನವೂ, ಬಿಜೆಪಿ ನಾಯಕರ ಲಜ್ಜೆಗೇಡಿತನವೂ ಸ್ಪಷ್ಟವಾಗುತ್ತದೆ!

ಕೇವಲ ಒಂಭತ್ತು ತಿಂಗಳ ಹಿಂದೆ ಸುಮಾರು ನಲವತ್ತು ಬಿಜೆಪಿ ಶಾಸಕರನ್ನು ರೆಡ್ಡಿ ಗ್ಯಾಂಗ್ ಹೈದರಾಬಾದಿನ ಹತ್ತಿರದ ರೆಸಾರ್ಟ್ ಒಂದಕ್ಕೆ ಹೈಜಾಕ್ ಮಾಡಿತ್ತು, ಮಂತ್ರಿಗಿರಿಯಾಗಲಿ, ಮಂಡಳಿ ನಿಗಮಗಳಾಗಲಿ ತಮಗೆ ಸಿಗಲಿಲ್ಲವೆಂಬ ಕಾರಣಕ್ಕೆ ಅತೃಪ್ತಗೊಂಡಿದ್ದ ಆ ಶಾಸಕರ 'ಆಶೆ'ಗಳನ್ನು ಪೂರೈಸುವ ಜವಾಬ್ದಾರಿಯನ್ನು ರೆಡ್ಡಿಗಳು ಇದೇ ರೇಣುಕಾಚಾರಿಗೆ ನೀಡಿದ್ದರು. ಅದಕ್ಕೆ ಕಾರಣವೂ ಇತ್ತು, ಇದಕ್ಕೂ ಮುನ್ನ ಇದೇ ರೇಣುಕಾಚಾರಿ ನೈಸ್ ಖದೀಮ ಅಶೋಕ್ ಖೇಣಿಯಿಂದ ಸೂಟ್‌ಕೇಸ್‌ಗಟ್ಟಲೆ ಹಣ ಪಡೆದು ಬಿಜೆಪಿ ಶಾಸಕರನ್ನು ಏಟ್ರಿಯಾ ಹೋಟೆಲ್‌ನಲ್ಲಿ ಗುಡ್ಡೆ ಹಾಕಿಕೊಂಡು ಅವರೆಲ್ಲ ರೈತರ ಭೂಮಿಯನ್ನು ನೈಸ್ ಕಬಳಿಸುವುದರ ಬಗ್ಗೆ ಚಕಾರವೆತ್ತದಂತೆ ನೋಡಿಕೊಂಡಿದ್ದ ಅನುಭವ ಆತನಿಗಿತ್ತಲ್ಲ.. ಅದಕ್ಕೇ ರೆಡ್ಡಿಗಳೂ ಚೆಡ್ಡಿ ಶಾಸಕರನ್ನು 'ತೃಪ್ತಿ'ಗೊಳಿಸುವ ಜವಾಬ್ದಾರಿಯನ್ನು ಇದೇ ರೇಣುಕನಿಗೂ ನೀಡಿದ್ದರು.



ಆದರೆ ತಮಾಷೆಯ ವಿಷಯ ಯಾವುದೆಂದರೆ ಅಶೋಕ್ ಖೇಣಿ ಕೊಟ್ಟಿದ್ದ ದುಡ್ಡಿನ ಹೆಚ್ಚು ಭಾಗವನ್ನು ಈ ರೇಣುಕನೇ ಇಟ್ಟುಕೊಂಡು ಶಾಸಕರಿಗೆ ಅದರಲ್ಲಿ ಸ್ವಲ್ಪ ಮಾತ್ರವನ್ನು ನೀಡಿ ಖೇಣಿಗೆ ಮೂಂಡಾ ಮೋಚಿದ್ದು ಸ್ವತಃ ಖೇಣಿ ಅರಿವಿಗೆ ಹೇಗೆ ಬರಲಿಲ್ಲವೋ ಅದು ಈ ರೆಡ್ಡಿಗಾರುಗಳಿಗೂ ಗೊತ್ತಾಗಲಿಲ್ಲ.

ಅದೆಲ್ಲ ಇತಿಹಾಸ ಬಿಡಿ. ಕಳೆದ ವರ್ಷ ನವೆಂಬರ್‌ನಲ್ಲಿ ಅತೃಪ್ತ ಬಿಜೆಪಿ ಶಾಸಕರ ಪರವಾಗಿ ರೆಡ್ಡಿಗಳೊಂದಿಗೆ ಹೋಲ್‌ಸೇಲ್ ರೇಟ್‌ನಲ್ಲಿ ವ್ಯಾಪಾರ ಕುದುರಿಸಿದ್ದು ಇದೇ ರೇಣುಕಾಚಾರಿ! ಆಗ ರೆಡ್ಡಿಗಳ ಬೆನ್ನಿಗಿದ್ದ ಪ್ರತಿ ಶಾಸಕರಿಗೆ ತಲಾ ಎರಡು ಕೋಟಿ ರೂಪಾಯಿಗಳ 'ಸಂಭಾವನೆ'ಯನ್ನು ನಿಕ್ಕಿ ಮಾಡಲಾಗಿತ್ತು, ಅದು ಮಾಧ್ಯಮಗಳಲ್ಲೂ ವರದಿಯಾಗಿತ್ತು.

ಆದರೆ ವಾಸ್ತವವಾಗಿ ಆಗ ಪ್ರತಿ ಶಾಸಕನಿಗೆ ದೊರೆತಿದ್ದು ಬರೋಬ್ಬರಿ ಎರಡು ಕೋಟಿ ರೂಪಾಯಿಯಲ್ಲ, ಬದಲಾಗಿ ಕೇವಲ 25 ಲಕ್ಷ! ಇದರಿಂದ ರೇಣು ಮತ್ತು ಇತರರು ತುಂಬಾ ಬೇಜಾರು ಮಾಡಿಕೊಂಡರಂತೆ! ಅದಕ್ಕೆ ಅವರೆಲ್ಲ ಆನಂತರ "ರೆಡ್ಡಿ ಸಹೋದರರು ಕೊಟ್ಟ ಮಾತಿಗೆ ತಪ್ಪಿದ್ದಾರೆ, ವಚನಭ್ರಷ್ಟರಾಗಿದ್ದಾರೆ" ಎಂದೆಲ್ಲಾ ರೇಣುಕಾ ಮತ್ತು ಇತರೆ ಶಾಸಕರು ಪರಸ್ಪರರ ಮುಂದೆ ಗೋಳಾಡಿದ್ದರು.

ಇದಕ್ಕಿಂತಲೂ ಮುಖ್ಯವಾಗಿ ಈ ಶಾಸಕರಿಗೆ ತಮ್ಮ ಕ್ಷೇತ್ರದಲ್ಲಿನ ಪಕ್ಷದ ಕಾರ್ಯಕರ್ತರಿಗೂ, ತಮ್ಮ ಹಿಂಬಾಲಕರಿಗೂ ಮುಖ ತೋರಿಸಲಾಗಲಿಲ್ಲವಂತೆ. ಬಳ್ಳಾರಿ ಗಣಿಧಣಿಗಳು ನಮಗೆ ಯಾವುದೇ ರೀತಿಯಲ್ಲಿ ಹಣ ನೀಡಿಲ್ಲ ಎಂದು ತಮ್ಮ ಕಾರ್ಯಕರ್ತರಿಗೆಲ್ಲಾ ಮನದಟ್ಟು ಮಾಡಿಕೊಡುವಷ್ಟರಲ್ಲಿ ಅವರೆಲ್ಲ ಸುಸ್ತಾಗಿದ್ದರಂತೆ. ಅಷ್ಟೇ ಅಲ್ಲ, ರೆಡ್ಡಿಗಳನ್ನು ನಂಬಿ ಅವರ ಬೆನ್ನಿಗೆ ನಿಂತರೆ ಅತ್ತ ಹಣವೂ ಸಿಗುವುದಿಲ್ಲ, ಇತ್ತ ಮಾನವೂ ಉಳಿಯುವುದಿಲ್ಲ ಎಂಬುದು ಅವರೆಲ್ಲರಿಗೆ ಈಗ ಅರ್ಥವಾಗಿದೆಯಂತೆ. ಆದ್ದರಿಂದಲೇ ಈಗ ಯಾಕೆ ಯಡ್ಡಿ ವಿರುದ್ಧ ರೆಡ್ಡಿಗಳ ಪರವಾಗಿ ನಿಲ್ಲುವ ಅಗತ್ಯ ಇಲ್ಲ ಎಂಬ ತೀರ್ಮಾನಕ್ಕೆ ಅವರೆಲ್ಲ ಬಂದಿದ್ದಾರೆ. "ನಾವೆಲ್ಲ ಹೋಗಿ ಅವರ ಜೊತೆ ಸೇರಿಕೊಂಡರೆ ರೆಡ್ಡಿಗಳ ಬಲ ವೃದ್ಧಿಯಾಗುತ್ತದೆಯೇ ವಿನಃ ನಮಗೇನೂ ದಕ್ಕುವುದಿಲ್ಲ" ಎಂಬ ಸತ್ಯದ ಅರಿವು ದೇಶಭಕ್ತ ಬಿಜೆಪಿಯ ಶಾಸಕರಿಗಾಗಿದೆ.


ಇನ್ನು ರೆಡ್ಡಿಗಳ ಪರಿಸ್ಥಿತಿ ಎಂತಹದ್ದಾಗಿದೆ ಎಂದರೆ, ರೆಡ್ಡಿಗಳ ಬಂಡಾಯದಿಂದಲೇ ಸ್ಪೀಕರ್ ಸ್ಥಾನದಿಂದ ಸಚಿವಸ್ಥಾನ ಪಡೆದ ಲಿಂಗವಂತ ಜಗದೀಶ್ ಶೆಟ್ಟರ್ ಆಗಲೇ, ಅವರಂತೆಯೇ 'ಗುಂಡು' ಮಂತ್ರಿ ಸ್ಥಾನವನ್ನು ಪಡೆದ ರೇಣುಕಾಚಾರಿಯಾಗಲಿ, ಇತರೆ 'ಅತೃಪ್ತ' ಶಾಸಕರಾಗಲೀ ಯಾರೂ ಇವತ್ತು ರೆಡ್ಡಿಗಳ ಬೆಂಬಲಕ್ಕಿಲ್ಲ.

ಈ ಮಧ್ಯೆ, ಯಡ್ಡಿ ಕೂಡ ರೆಡ್ಡಿಗಳ ಸಾಮ್ರಾಜ್ಯಕ್ಕೆ ಕನ್ನ ಹೊಡೆದು ಅವರೊಂದಿಗಿದ್ದ ಹೊಸಪೇಟೆಯ ಶಾಸಕ ಬಿ.ಆನಂದ್ ಸಿಂಗ್, ಸಿರುಗುಪ್ಪ ಶಾಸಕ ಎಂ.ಎಸ್. ಸೋಮಲಿಂಗಪ್ಪ ಮತ್ತು ಹೂವಿನಹಡಗಲಿಯ ಶಾಸಕ ಚಂದ್ರ ನಾಯ್ಕನನ್ನು ತಮ್ಮತ್ತ ಸೆಳೆದುಕೊಂಡಿದ್ದಾರೆ. ಅಂದರೆ ಯಾವ ರೆಡ್ಡಿಗಳ ಕೃಪೆಯಿಂದಲೇ ಟಿಕೆಟ್ ಪಡೆದು ಶಾಸಕರಾಗಿದ್ದ ಈ ಮೂವರು ಕೂಡ ಇವತ್ತು ರೆಡ್ಡಿ ಪಾಳೆಯವನ್ನು ತೊರೆದು ಯಡ್ಡಿ ಪಾಳೆಯವನ್ನು ಸೇರಿಕೊಂಡಿದ್ದಾರೆ.


ಇದೆಲ್ಲದರ ಹಿನ್ನೆಲೆಯಲ್ಲಿ ಇವತ್ತು ರೆಡ್ಡಿ ಗ್ಯಾಂಗಿನಲ್ಲಿ ಎಷ್ಟು ಜನ ಇದ್ದಾರೆ ಎಂದು ಲೆಕ್ಕ ಹಾಕಿದರೆ ಸಿಗುವುದು ಹೆಚ್ಚೆಂದರೆ 8-9 ಜನ ಮಾತ್ರ, ಅವರಲ್ಲಿ ಮುಖ್ಯವಾದವರು ಎಂಎಲ್‌ಎಗಳಾದ ರೆಡ್ಡಿ ಸಹೋದರರಾದ ಸೋಮಶೇಖರ ರೆಡ್ಡಿ, ಕರುಣಾಕರ ರೆಡ್ಡಿ, ಶ್ರೀರಾಮುಲು, ನಾಗೇಂದ್ರ, ಸುರೇಶ್ ಬಾಬು, ಚಂದ್ರನಾಯ್ಕ ಮತ್ತು ಎಂಎಲ್‌ಸಿಗಳಾದ ಜನಾರ್ದನ ರೆಡ್ಡಿ ಮತ್ತು ಮೃತ್ಯುಂಜಯ ಜಿನಗಾ ಮಾತ್ರ!

ಕೇವಲ ಒಂದು ವರ್ಷದ ಹಿಂದೆ ಕರ್ನಾಟಕ ಅನಭಿಷಕ್ತ ದೊರೆಗಳಂತೆ ಮೀಸೆ ತಿರುಗಿಸುತ್ತಿದ್ದ ರೆಡ್ಡಿ ಗ್ಯಾಂಗ್ ಈಗ ತನ್ನ ಅಸ್ತಿತ್ವವನ್ನೇ ಕಾಪಾಡಿಕೊಳ್ಳಲು ಹೆಣಗುತ್ತಿರುವ ದೃಶ್ಯ ರಂಜಕವಾಗಿದೆಯಲ್ಲವೆ? ●

ಗುಲ್ಬರ್ಗಾ: ಆನಂದ ಸಾಹುಕಾರನ ಕೊಲೆ ಹಿಂದೆ ಶಾಸಕ ರಾಜೂಗೌಡ?


ರಾಜೂಗೌಡ

ಯಾದಗಿರಿ ಜಿಲ್ಲೆಯ ...ಮರ ತಾಲೂಕಿನಲ್ಲಿರುವಷ್ಟು ...ರ್ಕ ಬಹುಶಃ ನಮ್ಮ ರಾಜ್ಯದ ...ವ ಮೂಲೆಯಲ್ಲೂ ಇಲ್ಲ ...ರೆ ತಪ್ಪಾಗಲಾರದು. ಏಕೆಂದರೆ ...ಹಾಡುಹಗಲೇ ಏನು ...ದರೂ ಜರುಗಬಹುದು ... ಆತಂಕ, ತಲ್ಲಣಗಳು ...ಲ್ಲಿ ಮನೆಮಾಡಿಕೊಂಡಿವೆ. ಈ ...ಕಿನಾದ್ಯಂತ ಯಾರೊಬ್ಬರೂ ...ಯವಾಗಿ ತಿರುಗಾಡಿ ...ತವಾಗಿ ಮನೆಗೆ ವಾಪಸ್ಸು ... ಸಾಧ್ಯವೇ ಇಲ್ಲ ಎಂಬಂತಹ ... ನಿರ್ಮಾಣವಾಗಿ ಕಾಲಗಳೇ ... ಹೋಗಿವೆ.


ಆನಂದ ಸಾಹು

...ಂದಿನ ಶಾಸಕ ರಾಜೂಗೌಡ ತನ್ನ ವಿಭಿನ್ನ ಮ್ಯಾನರಿಸಂ ...ಲಕ ಜನಮಾನಸದಲ್ಲಿ ಬಹುಕಾಲದಿಂದ ಮನೆ ...ದ್ದ ಭಯದ ಭೂತವನ್ನು ಕಿತ್ತು ಹಾಕಿದ್ದಾನೆ ಎಂದು ...ತ್ತರುವಾಗಲೇ ಮತ್ತೆ ಕಗ್ಗೊಲೆಗಳು ಸಾಲುಸಾಲಾಗಿ ...ಯುತ್ತಿವೆ. ಸುರಪುರದ ಪ್ರಮುಖ ಬೀದಿಯಲ್ಲಿ ಆಲ್ದಾಳ ...ದ ಯುವಕ ಆನಂದ ಸಾಹುಕಾರನನ್ನು ನಾಲ್ಕೆಂಟು ...ಕೊಲೆಗಡುಕರು ಅಟ್ಟಾಡಿಸಿಕೊಂಡು ಹೊಡೆಯುತ್ತಿದ್ದರೆ ... ತಡೆಯುವ ತಾಕತ್ತು ಬಹುಶಃ ಯಾರಲ್ಲೂ ಇರಲಿಲ್ಲ ...ದೇ ವ್ಯವಸ್ಥೆಯ ಕ್ರೂರ ವ್ಯಂಗ್ಯ.

...ಲೈ 31ರಂದು ಸಾಯಂಕಾಲ 6 ಗಂಟೆಗೆ ಸೂರ್ಯ ... ದಿಕ್ಕಿನಲ್ಲಿ ಸಂಪೂರ್ಣ ಮುಳುಗಿರಲಿಲ್ಲ. ಇನ್ನೂ ...ಚುಮುಚುಮು ಬಿಸಿಲನ್ನು ಸಿಂಪಡಿಸುತ್ತಲೇ ಗುಡ್ಡದ ... ಜಾರುತ್ತಿದ್ದ. ಈ ಸಂದರ್ಭದಲ್ಲಿ ಆನಂದ ಸಾಹುಕಾರ ... ಯುವಕ ಪಟ್ಟಣದ ವಲ್ಲಭಬಾಯಿ ಪಟೇಲ ಚೌಕ್ ... ಕಾರ್ ಮೂಲಕ ಬರುತ್ತಲೇ ಬೈಕ್ ಮೇಲೆ ಬಂದ ...ಟು ಜನ ಯುವಕರು ಆತನ ಮೇಲೆ ಅಟ್ಯಾಕ್ ... ಅಕ್ಷರಶಃ ರಕ್ತದ ಓಕುಳಿ ಆಡಿದರು. ಪಟೇಲ ...ಂದ ದರ್ಬಾರ ಮೂಲೆಯವರೆಗೂ ಓಡಾಡಿಸಿಕೊಂಡು ...ಗಡುಕರು ಆತನ ಕೈ ಬೆರಳುಗಳನ್ನು ಕತ್ತರಿಸುತ್ತಿದ್ದರೆ ... ಸಾಹು ರಕ್ತದ ತರ್ಪಣ ಮಾಡುತ್ತ ತನ್ನ ಜೀವಕ್ಕಾಗಿ ...ರಾಟಿ ಓಡಾಡುತ್ತಿದ್ದ. ಈ ಕ್ರೂರ ಚಿತ್ರಣಗಳು ಕಣ್ಣ... ನಡೆಯುತ್ತಿದ್ದರೆ ಅದನ್ನೆಲ್ಲ ಜನರು ಭಯಭೀತಿಯಿಂದ ... ದಿಕ್ಕಾಪಾಲಾಗಿ ಓಡುತ್ತಿದ್ದರು. ಸುಮಾರು ...ಗಂಟೆಗೂ ಹೆಚ್ಚು ಕಾಲ ನಡೆದ ಈ ಬರ್ಬರ ...ಕಾಂಡ ಮನುಷ್ಯತ್ವವನ್ನೇ ಅಣಕಿಸುವಂತೆ ...ಹೋಗಿದೆ.

...ತ್ತೊಂದು ಆಶ್ಚರ್ಯದ ಸಂಗತಿಯೆಂದರೆ ಆನಂದ ...ರ ಹಾಲುಮತದ ಸಮಾಜದಿಂದ ಬಂದವನಾದರೂ ...ಜಾತಿ ಜನಾಂಗದವರ ಕಣ್ಗಾರಿಕೆಯಲ್ಲಿ ಬೆಳೆಯುತ್ತಿದ್ದ. ...ಹತ್ತಿರ ಯಾರು ಬಂದರೂ ಅವರ ಕೆಲಸಗಳನ್ನು ... ಎಂಬ ತಾದಾತ್ಮ್ಯಭಾವದಿಂದ ನೋಡಿ ಅದನ್ನು ...ಕೊಡುತ್ತಿದ್ದ. ತನ್ನ ನಲವತ್ತೆರಡನೆಯ ವಯಸ್ಸಿನಲ್ಲಿಯೆ ... ಹಾಗೂ ಸಚ್ಚಾರಿತ್ರ್ಯಗಳ ಮೂಲಕ ಜನ ಮಾನಸವನ್ನು ...ಬಿಟ್ಟಿದ್ದ. ಮೊದಮೊದಲು ಹಾಲುಮತದ ಸಮಾಜದ ...ಕನಂತೆ ಸಮಾಜದ ಕ್ಯಾನವಾಸ್ ಮೇಲೆ ...ಕೊಂಡರೂ ಬರುಬರುತ್ತ ಜನಾನುರಾಗಿ ನಾಯಕನಾಗಿ ...ಹೊಮ್ಮತೊಡಗಿದ್ದ.

...ಹುಶಃ ಈತ ತಾನು ರಾಜಕೀಯಕ್ಕೆ ...ಬೇಕೆಂದು ತಯಾರಿ ನಡೆಸಿದವನೇ ಅಲ್ಲ. ...ಸರಳ ಸಡವಳಿಕೆಯ ಬಂಡವಾಳದೊಂದಿಗೆ ...ಹೊರಟ ಆನಂದ ಸಾಹುಕಾರನ ಹಿಂದೆ ಜನರು ...ಕಿಂದರಿಜೋಗಿಯ ಹಿಂದೆ ಹೋಗುವಂತೆ ...ಹೋಗುತ್ತಿದ್ದರು. ಸ್ವಾರ್ಥದ ಲವಲೇಶವೂ ... ಆನಂದ ಸಾಹುಕಾರನ ಸಾಮಾಜಿಕ ಬದುಕಿಗೆ ...ಶಾಸಕ ರಾಜೂಗೌಡ ಕೂಡ ಬೆಕ್ಕಸಬೆರಗಾಗಿದ್ದ. ...ಕಲೇ ಮೂರು ವರ್ಷಗಳ ಹಿಂದೆ ಸ್ವತಃ ರಾಜೂಗೌಡ ಆನಂದ ಸಾಹುಕಾರನ ಆಲ್ದಾಳ ಗ್ರಾಮಕ್ಕೆ ಹೋಗಿ ತನ್ನೊಂದಿಗೆ ರಾಜಕೀಯಕ್ಕೆ ಬರಬೇಕು ಎಂದು ಒಂದಿಡೀ ರಾತ್ರಿ ತಾಲೀಮು ನಡೆಸಿ ಯಶಸ್ವಿಯಾಗಿದ್ದ. ಆನಂದ ಸಾಹುಕಾರ ಆಲ್ದಾಳನ ಕಸುವಿನೊಂದಿಗೆ ಸುರಪುರದಲ್ಲಿ ಹೇಳಹೆಸರಿಲ್ಲದಿದ್ದ ಬಿಜೆಪಿ ಎಂಬ ಗಟಾರದ ಪಕ್ಷ ಅಧಿಕಾರಕ್ಕೆ ಬಂತು. ಇದರಿಂದ ರಾಜಾವೆಂಕಟಪ್ಪ ನಾಯಕ ಎಂಬ ಫ್ಯೂಡಲ್ ಗುಣಗಳ ವ್ಯಕ್ತಿ ಮೂಲೆಗುಂಪಾದ. ಹೂವು ಎಲ್ಲಿದ್ದರೂ ಪರಿಮಳವನ್ನು ಬೀರುವಂತೆ ರಾಜಕೀಯದ ಇಂದಿನ ಕೊಚ್ಚೆಯಲ್ಲಿಯೂ ಈ ಆನಂದ ಸಾಹುಕಾರ ತನ್ನ ಪಾವಿತ್ರ್ಯವನ್ನು ಉಳಿಸಿಕೊಂಡಿದ್ದ.


ಒಂದೊಂದು ಸಲ ಈತ ತಮ್ಮ ಪಕ್ಷದ ನಿರ್ಧಾರಗಳ ವಿರುದ್ಧವೆ ಧರಣಿ-ಸತ್ಯಾಗ್ರಹ ಅಂತೆಲ್ಲ ಯೋಜನೆಗಳನ್ನು ರೂಪಿಸಿ ಚಳವಳಿಗೆ ಧುಮುಕುತ್ತಿದ್ದ. ಇದನ್ನೆಲ್ಲ ಕಂಡು ಕೆಲ ಚೆಡ್ಡಿ ರಾಜಕಾರಣಿಗಳು ಆತನನ್ನು ಛೇಡಿಸುತ್ತಿದ್ದರೆ ರೈತರಿಗೆ-ಕೂಲಿಕಾರರಿಗೆ-ಬಡವರಿಗೆ ಯಾವ ರಾಜಕೀಯ ಪಕ್ಷಗಳೂ ಬೇಕಿಲ್ಲ ಎಂಬರ್ಥದಲ್ಲಿ ಮಾತಾಡುತ್ತಿದ್ದ. ಇದೆಲ್ಲ ಈತನ ಜನಪರ ಧೋರಣೆಯನ್ನು ತೋರಿಸುವ ಅಂಶಗಳಾಗಿದ್ದವು. ಹೀಗೆ ಜನಾನುರಾಗಿ ನಾಯಕನಾಗಿ ಹೊರಹೊಮ್ಮುವ ವೇಳೆಗೆ ಹಲವು ಸಲ ಗೊತ್ತಿಲ್ಲದೆಯೆ ಬಹುತೇಕ ವ್ಯಕ್ತಿಗಳು ಎಡವುತ್ತಾರೆ. ಜನಪ್ರಿಯತೆಯ ತುತ್ತತುದಿಗೆ ಹೋಗುತ್ತಲೆ ಕಣ್ಪರೆಗಳು ಬಂದು ದೃಷ್ಟಿ ಮಂಕಾಗಿ ಹೋಗುತ್ತದೆ. ಆದರೆ ಆನಂದ ಸಾಹುಕಾರನಿಗೆ ಅಂಥ ಯಾವ ಪೊರೆ-ಪೊಗರುಗಳೂ ಬಂದಿರಲಿಲ್ಲ. ತನ್ನ ತಾಲೂಕಿನ ಯಾವುದೇ ಒಬ್ಬ ವ್ಯಕ್ತಿ ಮೈದಡವಿ ಮಾತಾಡಿಕೊಳ್ಳುವಷ್ಟು ಸಲುಗೆಯ ಸ್ನೇಹ ಬೆಳೆಸಿಕೊಂಡಿದ್ದ.

ನೇರ ಮಾತಿನ-ಸರಳ ನಡೆಯ ಆನಂದ ಸಾಹುಕಾರನ ಜನಪ್ರಿಯತೆ ಅನಾರೋಗ್ಯಕರ ಮನಸ್ಸಿನ ಯಾರಿಲ್ಲಾದರೂ ಹೊಟ್ಟೆಕಿಚ್ಚು ಹುಟ್ಟಿಸಿದ್ದರೆ ಆನಂದ ಸಾಹುಕಾರನಾದರೂ ಏನು ಮಾಡಬೇಕು? ತಮಾಷೆ ಎಂಥದ್ದೆಂದರೆ ಆನಂದ ಸಾಹುಕಾರನಿಗೆ ರಾಜಕೀಯವಾಗಿ ಏನಾದರೂ ಆಗಬೇಕು ಎಂಬ ವಾಂಛೆಗಳು ಇರಲಿಲ್ಲ. ಮನಸ್ಸು ಮಾಡಿದ್ದರೆ ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ, ಕೊನೆಗೆ ಗ್ರಾಮ ಪಂಚಾಯತಿಯ ಅಧ್ಯಕ್ಷನಾಗುವ ಭಾಗ್ಯಗಳೆಲ್ಲ ಈತನನ್ನು ಹುಡುಕಿಕೊಂಡು ಬಂದಿದ್ದವು. ಆದರೂ ಅವೆಲ್ಲವನ್ನೂ ಆತ ತಿರಸ್ಕರಿಸಿದ್ದ.

ಇಂತಹ ಸನ್ನಿವೇಶದಲ್ಲೇ ಎರಡು ತಿಂಗಳ ಹಿಂದೆ ಸುರಪುರ ಪಟ್ಟಣದಿಂದ ಐದು ಕಿಲೋಮೀಟರ್ ದೂರದಲ್ಲಿರುವ ಕುಂಬಾರ ಪೇಟೆಯಲ್ಲಿ ಹಣಮಂತ ಗುಡ್ಡಕಾಯಿ ಎಂಬ ನಾಯಕ ಜನಾಂಗದ ಮೂವತ್ತು ವರ್ಷದ ಯುವಕನನ್ನು ದುಷ್ಕರ್ಮಿಗಳ್ಯಾರೋ ಕೊಚ್ಚಿ ಕೊಂದುಹಾಕಿದರು. ಈ ಕೊಲೆ ನಡೆದದ್ದು ಚಂದಲಾಪುರ ಎಂಬ ದೂರದ ಗ್ರಾಮದ ಹೊಲದಲ್ಲಿ. ಬಹುಶಃ ಹಣಮಂತ ಗುಡ್ಡಕಾಯಿ ಬೋವಿಗಲ್ಲಿಯ ಹುಡುಗಿಯೊಂದಿಗೆ ಇಟ್ಟುಕೊಂಡಿದ್ದ ಅಕ್ರಮ ಸಂಬಂಧವೇ ಆತನ ಕೊಲೆಗೆ ಕಾರಣವೆಂದು ಹೇಳುತ್ತಾರಾದರೂ ಅದಿನ್ನೂ ಖಚಿತವಾಗಿಲ್ಲ.

ಆದರೆ ಈ ಕೊಲೆಗೆ ಕಾರಣಕರ್ತರೆಂದು ಕುರುಬ ಸಮಾಜಕ್ಕೆ ಸೇರಿದ ಸಣ್ಣ ಶಿವಪ್ಪ, ದೊಡ್ಡ ಶಿವಪ್ಪ, ಯಂಕಪ್ಪ, ನಿಂಗಪ್ಪ, ಮರ್ಚಪ್ಪ, ಮಲ್ಲಪ್ಪ, ಲಕ್ಷ್ಮಣ, ಹೈಯಾಳಪ್ಪ ಸಿದ್ದಪ್ಪ, ಭೀಮಪ್ಪ, ವೆಂಕಟೇಶ್ ಮುಂತಾದ ಯುವಕರ ಹೆಸರನ್ನು ಸೇರಿಸಲಾಯಿತು. ಆನಂದ ಸಾಹುಕಾರನಿಗೆ ಇವರೆಲ್ಲ ಹತ್ತಿರದವರಲ್ಲವಾದರೂ ಒಂದೇ ಸಮಾಜಕ್ಕೆ ಸೇರಿದವರು ಎಂಬ ಕಾರಣಕ್ಕೆ ಅವರಿಗೆಲ್ಲ ವಕೀಲರ ಮೂಲಕ ಬೇಲ್ ಮಾಡಿಸಿ ಜೇಲಿನಿಂದ ಹೊರಬರುವಂತೆ ನೋಡಿಕೊಂಡಿದ್ದ. ಜೊತೆಗೆ ಕೊಲೆಗೀಡಾಗಿರುವ ಹಣಮಂತ ಗುಡ್ಡಕಾಯಿಯ ಸಂಬಂಧಿಗಳೊಂದಿಗೂ ಮಾತುಕತೆ ನಡೆಸಿ ಎರಡೂ ಕಡೆಯವರ ನಡುವೆ ಕಾಂಪ್ರೊಮೈಸ್ ಮಾಡಿಸಿ ತನ್ನ ದೊಡ್ಡತನವನ್ನು ಪ್ರದರ್ಶಿಸಿದ್ದ. ಬಹುಶಃ ಆನಂದ ಸಾಹುಕಾರನ ಇಂತಹ ದೊಡ್ಡ ಗುಣವೇ ಆತನ ಕೊಲೆಗೆ ಕಾರಣವಾಗಿರುವ ಸಾಧ್ಯತೆಗಳು ಇದ್ದರೂ ಈ ಪ್ರಕರಣದ ಆಳಕ್ಕೆ ಇಳಿದರೆ ಇತರೆ ಹಲವಾರು ಮುಖವಾಡಗಳು ಕಳಚತೊಡಗುತ್ತವೆ.

ನೇರ ನಡೆನುಡಿಯ ಆನಂದ ಸಾಹುಕಾರ ಮತ್ತು ಹಾಲಿ ಬಿಜೆಪಿ ಶಾಸಕ ರಾಜೂಗೌಡನ ನಡುವಿನ ಸ್ನೇಹ ಇತ್ತೀಚೆಗೆ ಹಳಸತೊಡಗಿತ್ತು ಎಂದು ಹಲವಾರು ಜನ ಮಾತನಾಡುತ್ತಿದ್ದಾರೆ. ಆನಂದ ಸಾಹುಕಾರನ ಜನಪ್ರಿಯತೆ



ಮುಂದೊಂದು ದಿನ ತನ್ನ ರಾಜಕೀಯ ಬದುಕಿಗೇ ಪೆಟ್ಟು ನೀಡಬಹುದೆಂಬ ಆತಂಕ ರಾಜೂಗೌಡನಲ್ಲಿ ಕಂಡದ್ದನ್ನು ನೋಡಿದ ಕೊಲೆಗಡುಕರು ಈ ಭೀಕರ ಹತ್ಯೆಗೆ ಮುಂದಾಗಿರಬಹುದೆಂದೂ ಅವರು ಹೇಳುತ್ತಾರೆ.

ಇದೇನೇ ಇರಲಿ, ಇವತ್ತಿನ ದಿನಮಾನಗಳಲ್ಲಿ ಸಾಮಾಜಿಕ ಬದ್ಧತೆ, ತುಡಿತ, ಜನಪರ ಕಾಳಜಿ ಇಟ್ಟುಕೊಂಡೂ ಜನಾನುರಾಗಿ ನಾಯಕನಾಗಿ ಹೊರಹೊಮ್ಮುತ್ತಿದ್ದ ಆನಂದ ಸಾಹುಕಾರನ ಅಪರೂಪದ ಗುಣಗಳೆ ಆತನ ಮೃತ್ಯುವಿಗೆ ದಾರಿಯಾದುದು ಅತ್ಯಂತ ನೋವಿನ ಸಂಗತಿಯಾಗಿದೆ.

• ನಾಯಕ್

ಸುರಪುರದ ರಕ್ತಚರಿತ್ರೆ

ಅದೇನು ದಾಷ್ಟ್ಯವೋ? ರೋಷವೋ? ಅಥವಾ ಅಜ್ಞಾನವೋ? ಸ್ಪಷ್ಟವಾಗಿ ಗುರುತಿಸಲಾಗುತ್ತಿಲ್ಲ. ಸುರಪುರದ ನಾಯಕ ಜನಾಂಗಕ್ಕೆ ಸೇರಿದ ಬಹುತೇಕ ಎಲ್ಲರಲ್ಲೂ ಒಂದೇ ನಮೂನೆಯ ಗುಣಗಳನ್ನು ಕಾಣುತ್ತೇವೆ. ಬಹುಶಃ ಹಿಂದಿನ ಕಾಲದಲ್ಲಿ ರಾಜಮಹಾರಾಜರಾಗಿ ಮೆರೆದಿರುವ ಠೀವಿ, ಗತ್ತು, ಗೈರತ್ತುಗಳನ್ನು ಈ ಜನಾಂಗದವರು ಇಂದಿಗೂ ಅನೂಚಾನವಾಗಿ ಮುಂದುವರೆಸಿಕೊಂಡು ಹೊರಟಿದ್ದಾರೆನಿಸುತ್ತದೆ. ಪ್ರಜಾಪ್ರಭುತ್ವದ ಇಂದಿನ ದಿನಮಾನಗಳಲ್ಲಿಯೂ ತಮ್ಮ ಹಿಂದಿನ ಠೇಂಕಾರವನ್ನು ಸಮಾಜಮುಖಿ ಮುಖಂಡರು ಬಿಟ್ಟುಕೊಟ್ಟಿಲ್ಲ. ಪರಿಣಾಮವಾಗಿ ಇಡೀ ಜನಾಂಗ ಅವರನ್ನು ಅನುಸರಿಸುತ್ತ ಹುಂಬ ಕೆಲಸಗಳನ್ನು ಮಾಡುತ್ತ ಸಾಗಿದ್ದಾರೆ.

ಸುಮಾರು ನಲವತ್ತೆರಡು ವರ್ಷಗಳ ಹಿಂದೆ ರುಕ್ಮಾಪುರ ಗ್ರಾಮದ ಕೊಟ್ರೆಪ್ಪ ಸಾಹು ಎಂಬ ಲಿಂಗಾಯತ ಕೋಮಿಗೆ ಸೇರಿದ ವ್ಯಕ್ತಿ ಸುರಪುರದ ಈ ನಾಯಕ ಜನಾಂಗದ ದೌರ್ಜನ್ಯಗಳ ವಿರುದ್ಧ ಮೊತ್ತಮೊದಲ ಬಾರಿಗೆ ಧ್ವನಿ ಎತ್ತಿದ. ಜನರೆಲ್ಲ ಆತನ ಧ್ವನಿಗೆ ಕಿವಿಗೊಟ್ಟದ್ದರಿಂದ ಕೆಲವೇ ವರ್ಷಗಳಲ್ಲಿಯೆ ಕೊಟ್ರೆಪ್ಪ ಸಾಹು ತಾಲೂಕಿನಾದ್ಯಂತ ಮನೆ ಮಾತಾದ. ಇದನ್ನು ಸಹಿಸದ ಕೆಲ ಪಟ್ಟಭದ್ರ ಹಿತಾಸಕ್ತಿಗಳು ಕೆಲವೇ ದಿನಗಳಲ್ಲಿ ಕೊಟ್ರೆಪ್ಪ ಸಾಹುನನ್ನು ಭೀಕರವಾಗಿ ಕೊಲೆಗೈದಿತು. ಆ ಮೂಲಕ ತಮ್ಮ ತೀಟೆಯನ್ನು ತೀರಿಸಿಕೊಂಡಿದ್ದರು. ಇದಾದ ತರುವಾಯ ಜಿಲ್ಲೆಯ ಭೀಮಾ ನದಿಯಲ್ಲಿ ಸಾಕಷ್ಟು ನೀರು ಹರಿದು ಹೋಗಿದ್ದರೂ ಇಲ್ಲಿನ ಜನಜೀವನದಲ್ಲಿ ಬದಲಾವಣೆ ಎಂಬುದು ಬರೀ ಮರೀಚಿಕೆಯಾಗಿಯೇ ಉಳಿದಿದೆ.


ನಾಲ್ಕಾರು ವರ್ಷಗಳ ಹಿಂದೆ ಸುರಪುರದ ಬಸ್ ನಿಲ್ದಾಣದ ಹತ್ತಿರವಿರುವ ಸಂವಿಧಾನಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಹಾಡುಹಗಲೇ ಎಲ್ಲರ ಕಣ್ಣೆದುರೇ ನಾಯಕ ಜನಾಂಗದವರು ಅವಮಾನ ಮಾಡಿದ್ದೂ ಅಲ್ಲದೆ ದಲಿತ ಬಂಧುಗಳ ಮೇಲೆ ದಬ್ಬಾಳಿಕೆಯನ್ನೂ ಮಾಡಿದ್ದರು. ಆಗಲೂ ಸರಕಾರ ಕಳ್ಳ ಮೌನ ವಹಿಸಿತೇ ಹೊರತು ಅವರೆಲ್ಲರ ವಿರುದ್ಧ ಕ್ರಮ ಕೈಗೊಳ್ಳಲಿಲ್ಲ.

ಆದರೆ ಈಗ ಕಾಲ ಹಿಂದಿನಂತಿಲ್ಲ! ಆದ್ದರಿಂದಲೆ ಜಿಲ್ಲೆಯಾದ್ಯಂತ ಕುರುಬ ಸಮಾಜಕ್ಕೆ ಸೇರಿದ ಬಹುತೇಕ ನಾಯಕರು, ಜನಸಾಮಾನ್ಯರು ಬೀದಿಗೆ ಇಳಿದು ಆನಂದ ಸಾಹುಕಾರನ ಕೊಲೆಯನ್ನು ತೀವ್ರವಾಗಿ ಪ್ರತಿಭಟಿಸುತ್ತಿದ್ದಾರೆ. ಊರೂರುಗಳಲ್ಲಿ ಜನಜಾಗೃತಿ ಉಂಟುಮಾಡಿ ನಾಯಕ ಜನಾಂಗದ ಉಪಟಳವನ್ನು ಬೀದಿಗೆ ಎಳೆಯುತ್ತ ಸವಾಲೆಸೆಯುತ್ತಿದ್ದಾರೆ. ಇದರಿಂದ ಇಡೀ ಸುರಪುರ ಬೂದಿಮುಚ್ಚಿದ ಕೆಂಡದಂತಾಗಿದೆ.

ಈ ಸೂಕ್ಷ್ಮವನ್ನು ಸರಕಾರ ಅರ್ಥಮಾಡಿಕೊಂಡು ಕೊಲೆಗಡುಕರು ಯಾರೇ ಆಗಿದ್ದರೂ ಅವರನ್ನು ಬಂಧಿಸಿ ಶಿಕ್ಷಿಸುವ ಮೂಲಕ ಭವಿಷ್ಯದಲ್ಲಿ ಉಂಟಾಗಬಹುದಾದ ಬಹುದೊಡ್ಡ ಅನಾಹುತವನ್ನು ತಪ್ಪಿಸಬೇಕಿದೆ. ಆದರೆ ಈ ಸೂಕ್ಷ್ಮ ಬುದ್ಧಿಮತ್ತೆ ಬಿಜೆಪಿಯ ಚಡ್ಡಿಗಳಿಗೆ ಇದೆಯೆ? ಎಂಬುದು ಅನುಮಾನ. ●

ಯಶವಂತಪುರದ ಚೀಟರ್ ಕಲಾವತಿಯೂ ಚೆಡ್ಡಿ ಇನ್ಸ್‌ಪೆಕ್ಟರ್ ಗಣಪತಿಯೂ




ಕಲಾವತಿ

ಇದೇ ಜುಲೈ 14 ರ ಬೆಳಗ್ಗೆ ಯಶವಂತಪುರ ಪೊಲೀಸ್ ಠಾಣೆಯಲ್ಲಿ ನಡೆದ ಘಟನೆಯಿದು. ಹೀಗೆ ರಕ್ತ ಸುರಿಸಿಕೊಂಡು ಠಾಣೆಗೆ ಬಂದ ಆ ಹೆಂಗಸಿನ ಹೆಸರು ಜಿ.ಕೆ. ಜಯಲಕ್ಷ್ಮಿ. ಆಕೆಯನ್ನು ನಡುರಸ್ತೆಯಲ್ಲಿ ಕೆಡವಿ ಹಿಂಸಿಸಿದ್ದು ಇದೇ ಯಶವಂತಪುರದ ಪುಡಿ ರೌಡಿ ಆಶಿಕ್ ಮತ್ತು ಆತನ ತಾಯಿ ಚೀಟರ್ ಕಲಾವತಿ. ಸದ್ಯ ಯಶವಂತಪುರ ಠಾಣೆಯನ್ನಾಳುತ್ತಿರುವ ಎಂ.ಕೆ. ಗಣಪತಿ ಎಂಬ ಖಾಕಿ ಮಹಾಶಯನೇ ದೂರು ನೀಡಲು ಬಂದಾಕೆಯನ್ನು ಪೀಡಿಸಿದ ಪೊಲೀಸ್ ಇನ್ಸ್‌ಪೆಕ್ಟರ್!

ರೌಡಿ ಪಡೆಯೊಂದು ಹಾಡುಹಗಲೇ ಮನೆಯೊಂದಕ್ಕೆ ನುಗ್ಗುತ್ತದೆ. ಜನ ಕಂಗಾಲಾಗಿ ನೋಡುತ್ತಿದ್ದಂತೆಯೇ ಹೆಂಗಸೊಬ್ಬಳನ್ನು ದರದರನೇ ಜುಟ್ಟು ಹಿಡಿದು ರಸ್ತೆಗೆ ಎಳೆತರುತ್ತದೆ. ಆಕೆಯನ್ನು ನೆಲಕ್ಕೆ ಹಾಕಿ ತುಳಿದದ್ದೇ ರಾಡು, ಚೈನು, ದೊಣ್ಣೆಯಿಂದ ಥಳಿಸುತ್ತದೆ. ಅಯ್ಯೋ ಕಾಪಾಡೀ.... ಎಂದು ಆ ಹೆಂಗಸು ಗೋಳಾಡುತ್ತಿದ್ದರೆ, ಎಳೆದು ತಂದ ಧಾಂಡಿಗರ ಮಧ್ಯೆಯೇ ಹೆಂಗಸೊಬ್ಬಳು ಲಾಂಗ್ ಹಿಡಿದು ಉಲ್ಟಾ ಮಾಡಿ ಹೊಡೆಯಲಾರಂಭಿಸುತ್ತಾಳೆ. ಒಂಟಿ ಹೆಂಗಸನ್ನು ಹಾಗೇ ಮನೆಯಿಂದ ಎಳೆತಂದು ಮಾಡಬಾರದ ಅವಮಾನಕ್ಕೆ ಒಡ್ಡಿದ ಅದೇ ರೌಡಿಪಡೆ ತಾವು ಆಕೆಯನ್ನು ಥಳಿಸುತ್ತಿದ್ದದ್ದನ್ನು ವೀಡಿಯೋ ಒಂದರಲ್ಲಿ ಚಿತ್ರೀಕರಿಸಿಕೊಳ್ಳು ತ್ತದೆ. ರಕ್ತ ಸುರಿಸುತ್ತಾ ನಡುರಸ್ತೆಯಲ್ಲಿ ಬಿದ್ದು ಆ ಹೆಂಗಸು ಗೋಳಿಡುತ್ತಿದ್ದರೆ ಅಟ್ಟಾಡಿಸಿದ ರೌಡಿ ಗ್ಯಾಂಗ್ ಆಕೆಯ ಮೊಬೈಲ್ ಸಮೇತ ಪರಾರಿಯಾಗುತ್ತದೆ.

ಈ ಥರದ ಘಟನೆ ಬೆಂಗಳೂರಿಗೇನೂ ಹೊಸದಲ್ಲ, ಆದರೆ ತನ್ನ ಮೇಲೆ ನಡೆದ ಈ ದೌರ್ಜನ್ಯದ ವಿರುದ್ಧ ದೂರು ಕೊಡಲೆಂದು ಆ ಹೆಣ್ಣುಮಗಳು ಪೊಲೀಸ್ ಠಾಣೆಗೆ ಬಂದರೆ ಇನ್ಸ್‌ಪೆಕ್ಟರ್ ಓರ್ವ ಹೇಗೆ ವರ್ತಿಸಬೇಕು?

ಹಾಗೇ ನಡುರಸ್ತೆಯಲ್ಲಿ ಆ ಹೆಂಗಸನ್ನು ಹಿಂಸಿಸಿದ ರೌಡಿಪಡೆಯ ಜೊತೆಗೇ ಪೊಲೀಸ್ ಇನ್ಸ್‌ಪೆಕ್ಟರ್ ಕೂತು ಕಾಫಿ ಕುಡಿಯುತ್ತಿದ್ದಾನೆ. ದೂರು ಕೊಡಲೆಂದು ಬಂದ ಆ ಹೆಂಗಸನ್ನೇ ವಾಚಾಮಗೋಚರ ಬಯ್ಯುತ್ತಾನೆ. ರೌಡಿಪಡೆ ಕಿತ್ತೊಯ್ದಿತ್ತಲ್ಲ; ಅದೇ ಮೊಬೈಲನ್ನು ರೌಡಿಗಳಿಂದ ಈಸಿಕೊಂಡಿದ್ದೇ ದೂರು ನೀಡಲು ಬಂದಿದ್ದ ಆ ಹೆಂಗಸಿಗೆ ಕೊಟ್ಟು 'ನೋಡು; ಇದೇ ತಾನೇ ನಿನ್ನ ಮೊಬೈಲು?


ಯೌವನದ ದಿನಗಳಲ್ಲಿ ಕಲಾವತಿ...

ಇನ್ಯಾಕೆ ರಾಬರಿ ಕೇಸು ಕೊಡ್ತೀಯ? ನಿನಗೆ ಕೊಟ್ಟ ದೂರೇ ಸರಿ ಇಲ್ಲ, ನಾನು ಹೇಳಿದಂತೆ ಬರೆದು ಕೊಟ್ಟರಷ್ಟೇ ನಿನ್ನ ದೂರು ದಾಖಲಿಸೋದು.....!'

ಪೊಲೀಸ್ ವ್ಯವಸ್ಥೆಯನ್ನು ನಂಬಿ ಠಾಣೆಗೆ ಬಂದ ಆ ಹೆಣ್ಣು ಮಗಳಿಗೆ ಏನಾಗಿರಬೇಡ?

ಇದೇ ಜುಲೈ 14 ರ ಬೆಳಗ್ಗೆ ಯಶವಂತಪುರ ಪೊಲೀಸ್ ಠಾಣೆಯಲ್ಲಿ ನಡೆದ ಘಟನೆಯಿದು. ಹೀಗೆ ರಕ್ತ ಸುರಿಸಿಕೊಂಡು ಠಾಣೆಗೆ ಬಂದ ಆ ಹೆಂಗಸಿನ ಹೆಸರು ಜಿ.ಕೆ. ಜಯಲಕ್ಷ್ಮಿ. ಆಕೆಯನ್ನು ನಡುರಸ್ತೆಯಲ್ಲಿ ಕೆಡವಿ ಹಿಂಸಿಸಿದ್ದು ಇದೇ ಯಶವಂತಪುರದ ಪುಡಿ ರೌಡಿ ಆಶಿಕ್ ಮತ್ತು ಆತನ ತಾಯಿ ಚೀಟರ್ ಕಲಾವತಿ. ಸದ್ಯ ಯಶವಂತಪುರ ಠಾಣೆಯನ್ನಾಳುತ್ತಿರುವ ಎಂ.ಕೆ. ಗಣಪತಿ ಎಂಬ ಖಾಕಿ ಮಹಾಶಯನೇ ದೂರು ನೀಡಲು ಬಂದಾಕೆಯನ್ನು ಪೀಡಿಸಿದ ಪೊಲೀಸ್ ಇನ್ಸ್‌ಪೆಕ್ಟರ್!


ಜಯಲಕ್ಷ್ಮಿ

ಬಿಜೆಪಿಯ ರಾಮರಾಜ್ಯ(!)ದಲ್ಲಿ ಪೊಲೀಸ್ ಠಾಣೆಗಳು ಯಾಪಾಟಿ ಕುಲಗೆಟ್ಟಿವೆ ಎಂಬುದಕ್ಕೆ ಇದಕ್ಕಿಂತ ಉದಾಹರಣೆಬೇಕಿಲ್ಲ. ಹೀಗೆ ದೂರು ನೀಡಲು ಬಂದವರನ್ನೇ ಠಾಣೆಯಲ್ಲಿ ಹಿಂಸೆ ಕೊಟ್ಟು ರೌಡಿ-ಕೇಡಿಗಳ ಜೊತೆ ಕೂತು ನೆಂಟಸ್ತಿಕೆ ಮಾಡುವ ಇನ್ಸ್‌ಪೆಕ್ಟರ್ ಗಣಪತಿಯ ವರ್ತನೆ ಇದೇ ಮೊದಲೇನಲ್ಲ. ಇಲ್ಲಿಗೆ ಎರಡು ತಿಂಗಳ ಹಿಂದೆ ತನ್ನ ಮಕ್ಕಳನ್ನು ಕೊಡಿಸಿ ಎಂದು ಕಣ್ಣೀರಿಟ್ಟು ಬಂದ ಗೌರಮ್ಮ ಎಂಬ ದಲಿತ ಮಹಿಳೆಯನ್ನೇ ಹೊಡೆದಿದ್ದ. ಈಕೆಯ ಪರ ವರದಿ ಮಾಡಲೆಂದು ಬಂದ ಟೀವಿ ಒಂಬತ್ತರ ವರದಿಗಾರ್ತಿಯನ್ನು ಆಕೆಯ ಕ್ಯಾಮೆರಾ ಸಮೇತ ಒದ್ದು ಹೊರಗಟ್ಟಿದ್ದ. ಇದೇ ಜುಲೈ 17 ರಂದು ಗಣಪತಿಯ ನಿರ್ಲಕ್ಷದಿಂದಾಗಿಯೇ ಸುಭೇದಾರ್‌ಪಾಳ್ಯದ ಗೋವಿಂದರಾಜು ಕೊಲೆಯಾದ.

ತನ್ನ ಮನೆ ಮುಂದೆ ಮೂತ್ರ ವಿಸರ್ಜಿಸುತ್ತಿದ್ದವರ ವಿರುದ್ಧ ಜಗಳಕ್ಕೆ ಬಿದ್ದ ಗೋವಿಂದರಾಜು ರಕ್ಷಣೆಗೆ ಪೊಲೀಸರೇನಾದರೂ ಸಕಾಲದಲ್ಲಿ ಹೋಗಿದ್ದರೆ ಆತ ಕೊಲೆಯಾಗುತ್ತಿರಲಿಲ್ಲ.

ಓಕೆ; ಪ್ರಾಣವನ್ನೇನೋ ಉಳಿಸಲಾಗಲಿಲ್ಲ, ಆದರೆ ಕೊಲೆಯನ್ನು ತನ್ನ ಲಾಭಕ್ಕೆ ಬಳಸಿಕೊಳ್ಳುವಲ್ಲಿ ಮಾತ್ರ ಗಣಪತಿ ಹಿಂದೆ ಬೀಳಲಿಲ್ಲ. ಯಶವಂತಪುರದ ಶ್ರೀಮಂತರ ಪುಂಡ ಮಕ್ಕಳನ್ನೆಲ್ಲ ಎಳೆದೆಳೆದು ತಂದಿದ್ದೇ 'ನೀನೇ ಗೋವಿಂದರಾಜು ಕೊಂದಿದ್ದು. ನಿನ್ನನ್ನೇ ಕೊಲೆ ಕೇಸಿಗೆ ಫಿಟ್ ಮಾಡ್ತೀನಿ' ಎಂದು ಲಕ್ಷಗಟ್ಟಲೇ ಕಿತ್ತ. ಗೋವಿಂದರಾಜು ಕೊಲೆ ಕೇಸೊಂದರಿಂದಲೇ 15 ಲಕ್ಷದಷ್ಟು ಸುಲಿಗೆ ಮಾಡಿದ.

ಇಂಥ ಇನ್ಸ್‌ಪೆಕ್ಟರ್ ಗಣಪತಿಗೆ ಸದ್ಯ ಆಪ್ತ ಸಖಿಯಂತಿರುವವಳು ಚೀಟರ್ ಕಲಾವತಿ!

ಈಕೆ ಇದೇ ಯಶವಂತಪುರದ ಸುಭೇದಾರ್‌ಪಾಳ್ಯದವಳು. ಈಕೆಯ ಕುಖ್ಯಾತಿ ಮತ್ತು ಹಾವಳಿ ಯಶವಂತಪುರಕ್ಕಾಗಲಿ ಪೊಲೀಸರಿಗಾಗಲಿ ಹೊಸತೇನಲ್ಲ. ಈ ಸುತ್ತಮುತ್ತಲ ಬಹುತೇಕ ಪೊಲೀಸ್ ಠಾಣೆಗಳಲ್ಲಿ ಈಕೆಯ ವಿರುದ್ಧ ಕಮ್ಮಿಯೆಂದರೂ ಒಂದು ಡಜನ್ ಕ್ರಿಮಿನಲ್ ಕೇಸುಗಳಿವೆ. ಈಕೆಯ ಮಗನೇ ಲೋಕಲ್ ರೌಡಿ. ಸದ್ಯ ಇನ್ಸ್‌ಪೆಕ್ಟರ್ ಗಣಪತಿಗೆ ಈ ಕಲಾವತಿಯ ಮನೆಯೇ ಪೊಲೀಸ್ ಠಾಣೆಯಿದ್ದಂತೆ.

ಕಲಾವತಿ ಮನೆಯಲ್ಲಿ ಗಣಪತಿಗೆ ಅದೇನು ಕೆಲಸವೋ ಗೊತ್ತಿಲ್ಲ, ಬಹುಶಃ ಅನ್ನ ಪಾನಾದಿಗಳಿಗೆಲ್ಲ ಇನ್ಸ್‌ಪೆಕ್ಟರ್ ಸಾಹೇಬರು ಆಕೆಯನ್ನೇ ಅವಲಂಬಿಸಿರಬೇಕು. ಈ ಕಲಾವತಿ ಸದ್ಯ ತಾನು ಎಸಿಪಿ ಒಬ್ಬರ ಪತ್ನಿ ಎಂದು ಹೇಳಿಕೊಳ್ಳುತ್ತಾಳಾದರೂ ಅದು ಪರಮ ಸತ್ಯವಲ್ಲ. ತಾನೊಬ್ಬ ಸಿನಿಮಾ ನಟಿ ಎಂಬುದು ಈಕೆಯ ವಾದ. ಯಾವುದೋ ಕಾಲಕ್ಕೆ 'ಬಿಸಿರಕ್ತ' ಎಂಬ 'ಎ' ಸರ್ಟಿಫಿಕೇಟ್ ಚಿತ್ರದಲ್ಲಿ ಹೀರೋಯಿನ್ನಾಗಿ ಈಕೆ ನಟಿಸಿದ್ದಳಂತೆ. ಸಿನಿಮಾ ರಿಲೀಜಾಗುವ ಮೊದಲೇ ಶಿವಾಜಿನಗರದ ರಿಜ್ವಾನ್ ಎಂಬಾತನ ಜೊತೆ ನಾಪತ್ತೆಯಾದಳಂತೆ. ಮತ್ತೆ ಕಲಾವತಿ ಕಣ್ಣಿಗೆ ಬೀಳುವ ಹೊತ್ತಿಗೆ ಆಕೆಯ ಜೊತೆಗಿದ್ದವನು ಆಸಿಫ್. ಕೈಕೊಟ್ಟ ರಿಜ್ವಾನ್ ದುಬೈಗೆ ಪರಾರಿಯಾದ ನಂತರ ಆಸಿಫ್‌ನನ್ನು ಆಶ್ರಯಿಸಿದ ಕಲಾವತಿಗೆ ಆಶಿಕ್ ಎಂಬ ಮಗುವಾಯಿತು. ತನ್ನ ಹೆಸರನ್ನು ಆಯೇಷಾ ಎಂದು ಬದಲಿಸಿಕೊಂಡಳು.

ಅದೇನಾಯಿತೋ ಗೊತ್ತಿಲ್ಲ ಕೈಹಿಡಿದ ಆಸಿಫ್ ಕೂಡ ಕೈಕೊಟ್ಟು ಪರಾರಿಯಾಗಿದ್ದ. ಆದರೆ ಹೋಗುವ ಮುನ್ನ


ವೈಜಯಂತಿ


ನಳಿನಿ ಕೃಷ್ಣಪ್ಪ


ಚಿನ್ನಿ(ವೀಣಾ)


ಅನುರಾಧಸಿಂಗ್

ಆಸಿಫ್ ಲಕ್ಷಗಟ್ಟಲೇ ದುಡ್ಡು ಕೊಟ್ಟೇ ಹೋಗಿದ್ದ. ಕೆಲ ದಿನಗಳ ಕಾಲ ಕಾಂಗ್ರೆಸ್ ಪುಢಾರಿ ಪುಟ್ಟಸ್ವಾಮಿಗೌಡರ ನೆರಳಂತೆ ಓಡಾಡಿದ ಕಲಾವತಿಗೆ ರಾಜಕೀಯದ ಹುಚ್ಚೆತ್ತು. ಪರಿಚಯಸ್ಥ ಪುಢಾರಿಗಳ ಸಂಖ್ಯೆಯೂ ಜಾಸ್ತಿಯಾಯಿತು. ಹೀಗೆ ರಾಜಕೀಯ, ಪೊಲೀಸ್, ಕೋರ್ಟು, ಕಚೇರಿ; ಇತ್ಯಾದಿಗಳಲ್ಲೇ ಬಿಜಿಯಾದಳು ಕಲಾವತಿ.

ಇದಿಷ್ಟೂ ಕಲಾವತಿಯ ಬದುಕಿನ ಮೊದಲನೇ ಇನ್ನಿಂಗ್ಸ್. ಸದ್ಯ ಕಲಾವತಿಗೆ ವಯಸ್ಸಾಗಿದೆ. ಹಿಂದಿನಂತೆ ಯೌವ್ವನವಿಲ್ಲ, ಕಂಡಕಂಡ ಬ್ಯಾಂಕಿನಲ್ಲಿ ಸಾಲವಿದೆ. ಹೊಟ್ಟೆಪಾಡಿಗೆ ಕಸುಬು, ವ್ಯಾಪಾರ, ನೌಕರಿ ಯಾವುದೂ ಇಲ್ಲ. ಹೆಸರಿಗೆ ತಾನು ರಾಜಕಾರಣಿ ಎಂದು ಹೇಳಿಕೊಳ್ಳುತ್ತಾಳಾದರೂ ಮಾಡುವುದು ಮಾತ್ರ ರೋಲ್‌ಕಾಲ್ ವಸೂಲಿಯೆ. ಅದಕ್ಕೊಂದು ತನ್ನ ಮಗ ಆಶಿಕ್ ಅಲಿಯಾಸ್ ರಿಯಾಜ್ ಎಂಬಾತನನ್ನೇ ರೌಡಿ ಮಾಡಿದ್ದಾಳೆ. ರಾಜಾಜಿನಗರದ ಪುಡಿ ರೌಡಿ ಸುನೀಲ, ದೇವನಹಳ್ಳಿಯ ಕಿರಣ, ಕಲಾವತಿ ಅಣ್ಣನ ಮಗ ರಾಹುಲ್, ಜೆಪಿನಗರದ ನಿತಿನ್ ರೆಡ್ಡಿ, ರಾಜಾಜಿನಗರದ ಸುನೀಲ್ ಸಾಗರ್; ಇತ್ಯಾದಿ ಪುಂಡರ ಹಿಂದೆ ಆಶಿಕ್‌ನ ಬೆನ್ನಿಗಿದೆ.

ಆದರೆ ಕಲಾವತಿಯ ಅಪಾಯವಿರುವುದು ಆಕೆಯಂತೆ ಬೀದಿಗಿಳಿದ ಮನೆಮುರುಕ ಹೆಂಗಸರ ಪಡೆಯೊಂದು ಸದಾ ಆಕೆಯ ದುರಾಚಾರಕ್ಕೆ ಕೈಜೋಡಿಸುವುದರಲ್ಲಿ. ಇದೇ ಯಶವಂತಪುರದ ಲೇಡಿ ರ್‍ಯಾಂಬೋ ನಳಿನಿ ಕೃಷ್ಣಪ್ಪ, ಸುಭೇದಾರ್‌ಪಾಳ್ಯದ ವಂಚಕಿ ಚಿನ್ನಿ ಉರ್ಫ್ ವೀಣಾ, ತ್ರಿವೇಣಿ ರೋಡಿನ ಅನುರಾಧಾ ಸಿಂಗ್, ರೈಲ್ವೇ ಕ್ವಾಟ್ರಸ್

ಈ ರೌಡಿ ಪೊಲೀಸ್‌ನಿಂದ ರಕ್ಷಣೆ ಉಂಟೆ?

ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ಬೆಂಗಳೂರಿನ ಆಯಕಟ್ಟಿನ ಪೊಲೀಸ್ ಠಾಣೆಗಳಿಗೆ ವಕ್ಕರಿಸಿದ ಚೆಡ್ಡಿ ಇನ್ಸ್‌ಪೆಕ್ಟರ್‌ಗಳ ಪೈಕಿ ಅತ್ಯಂತ ಕರಾಳ ಹಿನ್ನೆಲೆಯವನು ಎಂ.ಕೆ. ಗಣಪತಿ. ಸದ್ಯ ಆರೆಸ್ಸೆಸ್ ನಾಯಕ ಕಲ್ಲಡ್ಕ ಪ್ರಭಾಕರ ಭಟ್ಟನನ್ನು ಹಿಡಿದು ಶೋಭಾ ಕರಂದ್ಲಾಜೆಗೆ ಹೇಳಿಸಿ ಯಶವಂತಪುರದ ಪೊಲೀಸ್ ಠಾಣೆಗೆ ವಕ್ಕರಿಸಿದ್ದು ಕೂಡ ಈತನ ಚೆಡ್ಡಿ ಹಿನ್ನೆಲೆಯಿಂದಲೇ!


ಓರ್ವ ಮಹಿಳೆಯ ಕಾಲಿಗೆ ಬಿದ್ದು ಯಶವಂತಪುರ ಠಾಣೆ ದಕ್ಕಿಸಿಕೊಂಡ ಋಣಕ್ಕಾದರೂ ಗಣಪತಿ ಜಯಲಕ್ಷ್ಮಿಯನ್ನು ಹಿಂಸಿಸಿದವರನ್ನು ಬಂಧಿಸಬೇಕಿತ್ತು, ಕನಿಷ್ಠ ಎಫ್‌ಐಆರ್ ಅನ್ನಾದರೂ ಹಾಕಬಹುದಿತ್ತು, ಆದರೆ ಗಣಪತಿ ಪಕ್ಕಾ ತಲೆತಿರುಕ ಮತ್ತು ಲಂಚಕೋರ. ಮೂಲತಃ ಮಡಿಕೇರಿಯ ಈತ ಆರೆಸ್ಸೆಸ್ ವಿಷ ಕುಡಿದೇ ಪೊಲೀಸ್ ಇಲಾಖೆಗೆ ಸೇರಿಕೊಂಡ. ಬಂಟ್ವಾಳದಲ್ಲಿದ್ದ ಮೂರು ವರ್ಷಗಳ ಕಾಲ ರಮಾನಾಥ್ ರೈ ಮನೆ ಬಾಗಿಲುಕಾದಿದ್ದು ಬಿಟ್ಟರೆ ಈತ ಮಾಡಿದ್ದು ಬಾರು-ಕ್ಲಬ್ಬುಗಳ ಮಂತ್ಲಿ ವಸೂಲಿ ಮಾತ್ರ. ಕಾಂಗ್ರೆಸ್ ಸರ್ಕಾರ ಬಿದ್ದಿದ್ದೇ ಉಲ್ಲಾಳಕ್ಕೆ ಹಾಕಿಸಿಕೊಂಡ. ಅದೇ ಹೊತ್ತಿಗೆ ಚರ್ಚ್ ಮೇಲೆ ಆರೆಸ್ಸೆಸ್ ಚೆಡ್ಡಿಗಳ ದಾಳಿ ನಡೆಯಿತು. ಅದನ್ನು ಪ್ರಗತಿಪರ ಸಂಘಟನೆಗಳು ಖಂಡಿಸಿ ಪ್ರತಿಭಟನೆಗಿಳಿದರೆ, ಗಣಪತಿ ತನ್ನ ವ್ಯಾಪ್ತಿಯನ್ನೂ ಮೀರಿ ನುಗ್ಗಿ ಹೋಗಿದ್ದೇ ಪ್ರತಿಭಟಿಸುತ್ತಿರುವವರನ್ನು ಹಿಡಿದು ಬಡಿದ.

ಗಣಪತಿಯ ಉದ್ಧಟತನಕ್ಕೆ ಬೇಸತ್ತ ಪೊಲೀಸ್ ವರಿಷ್ಠರು ಆತನನ್ನು ಕದ್ರಿ ಪೊಲೀಸ್ ಠಾಣೆಗೆ ಒಗಾಯಿಸಿ ನಿಟ್ಟುಸಿರಿಟ್ಟರು. ಆದರೆ ಇಲ್ಲೂ ತನ್ನ ಹಳೇ ಚಾಳಿಯನ್ನೇ ಪುನರಾವರ್ತಿಸಿದ ಗಣಪತಿ ಮಂಗಳೂರು ಕಾರ್ಪೊರೇಷನ್ ಎದುರು ಪ್ರತಿಭಟಿಸುತ್ತಿದ್ದ ಡಿವೈಎಫ್‌ಐ ಮತ್ತು ಸಿಪಿಎಂ ಪಕ್ಷದ ಕಾರ್ಯಕರ್ತರನ್ನು ವಿನಾಕಾರಣ ಅಟ್ಟಾಡಿಸಿ ಥಳಿಸಿಬಿಟ್ಟ. ಪ್ರತಿಭಟನೆಯಿದ್ದದ್ದು ಬರ್ಕೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ, ಅದು ಬಂದರು ಠಾಣೆ ಇನ್ಸ್‌ಪೆಕ್ಟರ್ ವ್ಯಾಪ್ತಿಗೆ ಬರುತ್ತಿತ್ತು, ಪ್ರತಿಭಟನೆಗೂ ಈತನಿಗೂ ಏನೇನೂ ಸಂಬಂಧವಿಲ್ಲದಿದ್ದರೂ ತಲೆಕೆಟ್ಟ ರೌಡಿಯಂತೆ ನುಗ್ಗಿ ಲಾಠಿಚಾರ್ಜ್ ಮಾಡಿದ್ದ ಈತನ ಗೂಂಡಾ ಬುದ್ಧಿಗೆ ತಕ್ಕಾಗೂಂಡಾಗಿರಿ ವಿರುದ್ಧ ಜನ ಬೀದಿಗಿಳಿದರು. ರೋಸತ್ತ ಎಸ್.ಪಿ. ದಯಾನಂದ್ 'ನಿನ್ನಂಥೋ ಪೊಲೀಸ್ ಕೆಲಸಕ್ಕೆ ನಾಲಾಯಕ್ಕು' ಎಂದು ರಜೆ ಕೊಟ್ಟು ಹೊರದಬ್ಬಿದ್ದರು.

ಹಾಗೇ ದಕ್ಷಿಣ ಕನ್ನಡದಿಂದ ಒದ್ದೋಡಿಸಲ್ಪಟ್ಟ ಗಣಪತಿ ಆರೆಸ್ಸೆಸ್ ಧೂರ್ತ ಕಲ್ಲಡ್ಕ ಪ್ರಭಾಕರ ಭಟ್ಟನ ಕಾಲಿಗೆ ಬಿದ್ದ, ಆತನಿಂದ ಹೇಳಿಸಿ ಶೋಭಾ ಕರಂದ್ಲಾಜೆಗೂ ಅಡ್ಡಬಿದ್ದ, ಇಂತಹ ರೌಡಿ ಪೊಲೀಸ್‌ನಿಂದ ಜನರಿಗೆ ರಕ್ಷಣೆ ಉಂಟೇ?

...ರದಮ್ಮ, ಮತ್ತಿಕೆರೆಯ ವೈಜಯಂತಿ; ಹೀಗೆ ...ರೂಬಿಟ್ಟು ನಿಂತ ಮನೆಹಾಳು ಹೆಂಗಸರೇ ಕಲಾವತಿ ...ಂಗಿನ ಪಂಟರುಗಳು ಮತ್ತು ಫೈಟರುಗಳು. ಗಂಡ ...ಂಡತಿ ಕಿತ್ತಾಡಿದರೆ ಅದಕ್ಕೆ ತಲೆಹಾಕಿ ರೊಕ್ಕ ಕೀಳುವುದು, ...ಕಸ್ಥ ಗಂಡಸರಿಗೆ ಹೊಂಚು ಹಾಕಿ ಬ್ಲಾಕ್‌ಮೇಲ್ ...ಡುವುದು, ಬಡ್ಡಿ ವಸೂಲಿ, ಚೀಟಿ ದಂಧೆ; ಇತ್ಯಾದಿಗಳೇ ...ವರ ಉಪಕಸುಬು.

ಇಲ್ಲಿಗೆ ವರ್ಷದ ಹಿಂದೆ ಕೊಡಿಗೇಹಳ್ಳಿಯ ಭದ್ರಪ್ಪ ...ಔಟಿನ ರಮೇಶ್ ಬಾಬು ಎಂಬಾತನ ಮನೆಗೆ ನುಗ್ಗಿ ...ತನ ಪ್ರೇಯಸಿಯ ಪರವಾಗಿ ರೋಲ್‌ಕಾಲ್ ಮಾಡಲು ಹೋಗಿದ್ದ ಇದೇ ಕಲಾವತಿಯನ್ನು ಯಲಹಂಕದ ಎಸಿಪಿ ...ಗೌರಿ ಲಾಕಪ್ಪಿಗೆ ದಬ್ಬಿದ್ದರು. ಜಯನಗರದ ಗೋಕುಲ್ ...ಂಬಾತನ ಕಾರನ್ನು ಕಿತ್ತು ತಂದಿದ್ದ ಮಗ ಆಶಿಕ್‌ನನ್ನು ಮಲ್ಲೇಶ್ವರದ ಪೊಲೀಸರು ಹಿಡಿದು ರಿಪೇರಿ ಮಾಡಿದ್ದರು. ಆರ್.ಟಿ. ನಗರದ ಲೋಕೇಶ್ ಎಂಬಾತನ ತಂಗಿಯ ಮೇಲೆ ಮಗನನ್ನು ಛೂ ಬಿಟ್ಟು ಮನೆ ಖಾಲಿ ಮಾಡಿಸಲು ಹೋಗಿದ್ದ ಇದೇ ಕಲಾವತಿ ಮತ್ತು ಮಗ ಆಶಿಕ್ ವಿರುದ್ಧ ಅತ್ಯಾಚಾರ ಯತ್ನದ ಕೇಸು ...ತ್ತು. ಜೀವನಭೀಮಾನಗರ ಪೊಲೀಸ್ ಠಾಣೆಯಲ್ಲಿ ಕಾರು ...ದ್ದ ಕೇಸೂ ಮಗನ ಮೇಲಿತ್ತು. ಚಾಮರಾಜಪೇಟೆಯ ...ರ್ವಾಡಿಯೊಬ್ಬನನ್ನು ನಂಬಿಸಿ ಲಕ್ಷಗಟ್ಟಲೇ ಚಿನ್ನ ...ಂಡಾಯಿಸಿದ ಪ್ರಕರಣದಲ್ಲಿ ಕಲಾವತಿಯೇ ಮೊದಲ ...ರೋಪಿಯಾಗಿದ್ದಳು. ಒಂದೆಡೆ ಮಗನ ಗ್ಯಾಂಗನ್ನು ಬಿಟ್ಟು ...ವಳಿಯಿಕ್ಕಿಸುವುದು ಮತ್ತೊಂದೆಡೆ ತಾನು ...ಡಕಂಡವರನ್ನು ಮುಂಡಾಯಿಸುವುದು ಕಲಾವತಿಗೆ ...ಭ್ಯಾಸವಾಗಿ ಹೋಯಿತು.


ಬದರಿ

ಪ್ರತಿ ಸಂಜೆಯಾದರೆ ಮಗನ ಜೊತೆ ಕೂತೇ ವಿಸ್ಕಿ ...ಡಿಯುತ್ತಾಳೆ. ವಾರದ ಅಷ್ಟೂ ದಿನ ಮಟನ್ ಸಾರು ...ಕೇಬೇಕು. ಆದಾಯವಿಲ್ಲ, ಇಂಥ ಬರಕತ್ತಿಲ್ಲದ ಹೊತ್ತಲ್ಲೇ ...ಲಾವತಿಯ ಬುಟ್ಟಿಗೆ ಬಿದ್ದವಳು ಅದೇ ಸುಭೇದಾರ್‌ಪಾಳ್ಯದ ...ಡಪಾಯಿ ಹೆಂಗಸು ಜಯಲಕ್ಷ್ಮಿ. ಕಾಂಗ್ರೆಸ್ ...ರ್ಯಕರ್ತೆಯಾಗಿದ್ದ ಜಯಲಕ್ಷ್ಮಿಯನ್ನು ನಂಬಿಸಿ ಅರವತ್ತು ...ವಿರ ರೂಪಾಯಿ ಸಾಲ ಪಡೆದಿದ್ದಳು ಕಲಾವತಿ. ತನ್ನ ...ತಿ ಚಿನ್ನಿ ಉರ್ಫ್ ವೀಣಾ ಎಂಬಾಕೆಗೂ ಮನೆಕಟ್ಟಲೆಂದು ...ರಡು ಲಕ್ಷದ ೮೦ ಸಾವಿರ ಕೊಡಿಸಿದ್ದಾಳೆ. ಕಲಾವತಿಯ ...ನ್ನೆಲೆ ಗೊತ್ತಿಲ್ಲದ ಜಯಲಕ್ಷ್ಮಿಗೆ ತಾನು ಮೋಸ ಹೋಗಿದ್ದು ...ತ್ತಾಗುವ ಹೊತ್ತಿಗೆ ಕತೆಯೇ ಬೇರೆಯಾಗಿತ್ತು.

ದುಡ್ಡಿನ ವಸೂಲಿಗೆ ಹೋದ ಜಯಲಕ್ಷ್ಮಿಯ ವಿರುದ್ಧ ...ನ್ಸ್‌ಪೆಕ್ಟರ್ ಗಣಪತಿಯನ್ನು ಎತ್ತಿಕಟ್ಟಿ ಸುಳ್ಳು ಕೇಸು ...ಕಿಸಿದಳು. ಮಗನ ರೌಡಿ ಗ್ಯಾಂಗ್ ಬಿಟ್ಟು ಧಮಕಿ ...ಟ್ಟಳು. ಇದ್ಯಾವುದಕ್ಕೂ ಜಗ್ಗದ ಜಯಲಕ್ಷ್ಮಿ ಯಶವಂತ ...ರದ ಹಿರೀಕರನ್ನೆಲ್ಲ ಕಂಡು ತನ್ನ ದುಡ್ಡು ವಸೂಲಿ ...ಡಿಕೊಡುವಂತೆ ಕಣ್ಣೀರಿಟ್ಟಿದ್ದಾಳೆ. ಈ ಮಧ್ಯೆ ...ಲಾವತಿಯಿಂದ ಮೋಸ ಹೋಗಿದ್ದ ಕೆಂಪರಾಜು ಎಂಬ ...ಕೀಲರಿಂದಲೂ ಬಾಕಿ ವಸೂಲಿಗೆ ಒತ್ತಡ ಬಂದಿದೆ. ...ಡಪಾಯಿ ಜಯಲಕ್ಷ್ಮಿ ತಾನೇ ಇನ್ನೇನು ಮಾಡಲು ...ಧ್ಯ. ಪಡೆದ ಸಾಲ ತೀರಿಸಿದ್ದರೆ ಏಕೆ ಜಯಲಕ್ಷ್ಮಿ ...ಲಾವತಿಯನ್ನು ಪೀಡಿಸುತ್ತಿದ್ದಳು?

ಚೀಟರ್ ಕಲಾವತಿಗೆ ಇದ್ಯಾವುದೂ ಹೊಸದಲ್ಲ ಮತ್ತು ...ಡೆದ ಸಾಲ ತೀರಿಸಿದ್ದು ಆಕೆಯ ಇತಿಹಾಸದಲ್ಲೇ ಇಲ್ಲ. ...ತ್ತೆಂದೂ ಜಯಲಕ್ಷ್ಮಿ ತನ್ನ ತಂಟೆಗೆ ಬಾರದಿರಲಿ ಎಂದು ...ಗನ ಗ್ಯಾಂಗ್ ಸೇರಿದ್ದೇ ಜುಲೈ 16 ರ ಬೆಳಗ್ಗೆ ಜಯಲಕ್ಷ್ಮೀ ...ನೆಗೆ ದಾಳಿಯಿಕ್ಕಿಸಿಬಿಟ್ಟಳು. ಬಹುಶಃ ಇಂಥದೊಂದು ...ರ್ಜನ್ಯವನ್ನು ಈತನಕ ಯಶವಂತಪುರದ ಜನ ಕಂಡಿರಲಿಲ್ಲ. ...ರಸ್ತೆಯಲ್ಲಿ ಮಗನ ರೌಡಿ ಪಡೆ ಬಿಟ್ಟು ಒಬ್ಬಂಟಿ ...ಯಲಕ್ಷ್ಮಿಯನ್ನು ಹಿಂಸಿಸಿದ ಕಲಾವತಿ ಮತ್ತಾಕೆಯ ಗ್ಯಾಂಗ್ ...ಯಲಕ್ಷ್ಮಿ ಠಾಣೆಗೆ ಬರುವ ಹೊತ್ತಿಗೆ ಇನ್ಸ್‌ಪೆಕ್ಟರ್ ...ಣಪತಿಯ ಚೇಂಬರಿನಲ್ಲೇ ಹರಟೆಹೊಡೆಯುತ್ತಿತ್ತು. ...ತ್ತಯಿದ್ದ ಮೊಬೈಲನ್ನ ತಾನೇ ಕೊಡಿಸಿದ ಇನ್ಸ್‌ಪೆಕ್ಟರ್ ...ಣಪತಿ ಆಕೆಯ ಸಿಮ್‌ಕಾರ್ಡನ್ನು ಮಾತ್ರ ಈತನಕ ...ಡಿಸಿಲ್ಲ, ರಾಬರಿ ಕೇಸು ಹಾಕುವುದಿರಲಿ ಇದೇ ದೌರ್ಜನ್ಯದ ...ರುದ್ಧ ಎಫ್‌ಐಆರ್ ಕೂಡ ಹಾಕಿಲ್ಲ.

ಸದ್ಯ ಡಿಸಿಪಿ ರೇವಣ್ಣ ಇದೀ ಕೇಸನ್ನು ಗಣಪತಿಯಿಂದ ...ತ್ತಿ ಸೋಲದೇವನಹಳ್ಳಿ ಇನ್ಸ್‌ಪೆಕ್ಟರ್ ಸುಬ್ರಮಣಿಯವರಿಗೆ ...ಪ್ಪಿಸಿದ್ದಾರೆಂದರೆ, ಆತನ ಬಗ್ಗೆ ಮೇಲಧಿಕಾರಿಗಳಿಗೂ ಎಂಥಾ ...ನುಮಾನವಿರಬೇಡ?

ಹೆಂಗಸೊಬ್ಬಳನ್ನು ನಡುರಸ್ತೆಯಲ್ಲಿ ಹಿಂಸಿಸಿ ಪೀಡಿಸಿದರೂ ...ಶವಂತಪುರ ಪೊಲೀಸರು ಕೇಸು ದಾಖಲಿಸುವುದಿಲ್ಲ ...ಂದರೆ ಅದನ್ನು ಪೊಲೀಸ್ ಠಾಣೆ ಅನ್ನಬೇಕಾ? ಇನ್ಸ್‌ಪೆಕ್ಟರ್ ...ಣಪತಿಗೂ ಡಕಾಯಿತರಿಗೂ ವ್ಯತ್ಯಾಸವಿದೆಯಾ?

ಕಮಿಷನರ್ ಶಂಕರ್ ಬಿದರಿಯವರಿಗಿದು ಶೋಭೆಯಾ?

● ವರದಿಗಾರ

ಬೆಥನಿ ಸ್ಕೂಲ್ ಅಪಸ್ವರ

“ಕನ್ನಡದ ಮಕ್ಕಳೆಲ್ಲ ಡಿವೈಡಾಗಿ ಬನ್ನಿ...”



‘ಇಟ್ ಇಸ್ ಟೂ ಡೇಂಜರಸ್’ ಎಂದು ಬೆಂಗಳೂರಿನ ಹೈ-ಫೈ ಕಾನ್ವೆಂಟ್‌ಗಳು ತಮ್ಮ ವಿದ್ಯಾರ್ಥಿಗಳ ಪೋಷಕರನ್ನು ‘ಅಲರ್ಟ್’ ಮಾಡತೊಡಗಿವೆ.

ಈ ‘ರೆಡ್ ಅಲರ್ಟ್’ನ ಹಿಂದಿನ ಮರ್ಮ ‘ಶಿಕ್ಷಣ ಮೂಲಭೂತ ಹಕ್ಕು’ ಎಂಬ ಕಾಯ್ದೆ. ಬಡಮಕ್ಕಳಿಗೆ ಉಚಿತ ಶಿಕ್ಷಣ ನೀಡಲೆಂದು ರೂಪಿಸಿರುವ ಈ ಕಾಯ್ದೆಯಿಂದ ಈ ಶ್ರೀಮಂತ ಶಾಲೆಯ ಶ್ರೀಮಂತ ಮಕ್ಕಳ ಸಿರಿವಂತ ಪೋಷಕರು, ಸಿರಿವಂತ ಆಡಳಿತ ಮಂಡಳಿಗೇಕೆ ಆಘಾತ ಎಂದಿರಾ? ಏನಿಲ್ಲ, ಈ ಕಾಯ್ದೆಯ ಪ್ರಕಾರ ಪ್ರತಿ ‘ಶ್ರೀಮಂತ’ ಶಾಲೆಯೂ ತನ್ನ ಸುತ್ತಮುತ್ತಲಿನ ಪ್ರದೇಶದ ಬಡ, ಹಿಂದುಳಿದ ಮಕ್ಕಳಿಗೆ ಶೇ. 25 ರಷ್ಟು ಪ್ರವೇಶಗಳನ್ನು ಮೀಸಲಿಡಬೇಕು ಎಂದು ಹೇಳಿರುವುದೇ ನಾಜೂಕು ‘ಬ್ರಾಹ್ಮಣ್ಯ’ದ ಮನಸ್ಥಿತಿಯ ನಗರವಾಸಿ ಮೇಲ್-ಮಧ್ಯಮವರ್ಗದವರಿಗೆ ಅಸಹ್ಯ ಮೂಡಿಸಿಬಿಟ್ಟಿದೆ. ಅನಾಮತ್ತು ಫೀಸು ಕೊಟ್ಟು, ಠಾಕು-ಠೀಕಾಗಿ ಡ್ರೆಸ್ ಮಾಡಿ ತಾವು ಕಳಿಸುವ ತಮ್ಮ ಮಕ್ಕಳ ಜೊತೆ ಸ್ಲಮ್‌ನ ಸಿಂಬಳಗೊಣ್ಣೆ ಮಕ್ಕಳೇ? ಎಂಬ ಪ್ರಶ್ನೆಯನ್ನು ಈ ಜನ ಎತ್ತುತ್ತಿದ್ದಾರೆ. ಅದನ್ನೀಗ ಬೆಂಗಳೂರಿನ ಕೋರಮಂಗಲದ ಬೆಥನಿ ಸ್ಕೂಲ್ ಬಹಿರಂಗವಾಗಿ ‘ಆಚರಿಸಿ’ ಕಷ್ಟಕ್ಕೆ ಬಿದ್ದಿದೆಯಷ್ಟೆ.

‘ಈ ಕಾಯ್ದೆ ಜಾರಿಗೆ ಬಂದರೆ ನಿಮ್ಮ ಮಗುವನ್ನು ‘ಆ ಮಗು’ ಹೊಡೆಯಬಹುದು. ನಿಮ್ಮ ಮಗು ‘ಆ ಮಗು’ನಿಂದ ಸಿಗರೇಟು ಸೇದೋದನ್ನು ಕಲಿಬಹುದು. ಟೀಚರ್‌ಗೇ ಹೊಡೆದ್ರು ಹೊಡಿಬಹುದು....’ ಹೀಗೆ ಪಾಲಕರಿಗೆ ಸುತ್ತೋಲೆ ಕಳಿಸಿದ ಬೆಥನಿ ಸ್ಕೂಲ್ ಆಡಳಿತ ಮಂಡಳಿ, ‘ಬಡಮಕ್ಕಳೆಂದರೆ ಬುದ್ಧಿಗೇಡಿಗಳು, ಅಸಹ್ಯರು, ಕೊಳಕರು, ಕ್ರಿಮಿನಲ್ ಬುದ್ಧಿಯವರು’ ಎಂದು ಸಾರುವ ಮೂಲಕ ಬುದ್ಧಿಗೇಡಿತನವನ್ನಷ್ಟೇ ಅಲ್ಲ, ನಗರವಾಸಿ ಶ್ರೀಮಂತ ಮೇಲ್ ಮಧ್ಯಮವರ್ಗಗಳ ಮನಸ್ಥಿತಿಯ ಚಿತ್ರಣವನ್ನು ನೀಡಿದೆ.

ಇಲ್ಲಿ ಬರೀ ಬೆಥನಿ ಸ್ಕೂಲೊಂದನ್ನು ಆ ಸ್ಕೂಲಿನ ನಗರವಾಸಿ ಪಾಲಕರನ್ನು ದೂಷಿಸಿ ಕೈತೊಳೆದುಕೊಳ್ಳಲಾಗುವುದಿಲ್ಲ. ಈ 60 ವರ್ಷಗಳ ಆಳ್ವಿಕೆಯೇ ಅಂತದೊಂದು ಜಾತಿ ಆಧಾರಿತ, ವರ್ಗ ಆಧಾರಿತ ಶ್ರೇಣೀಕೃತ ಮನಸ್ಥಿತಿಯನ್ನು ನಿರ್ಮಿಸಿಬಿಟ್ಟಿದೆ. ಎಲ್ಲ ಮಕ್ಕಳೂ ಒಂದೇ ವಾತಾವರಣದಲ್ಲಿ ಕಲಿಯುವಂತಹ ಏಕರೂಪ (**uniform schools**) ಗಳನ್ನು ಸ್ಥಾಪಿಸಿದ್ದರೆ ಇಂಥದೊಂದು ತಾರತಮ್ಯದ ಮನಸ್ಥಿತಿಯೇ ಉದ್ಭವಿಸುತ್ತಿರಲಿಲ್ಲ.

ಸಾಕಷ್ಟು ಲೋಪದೋಷಗಳನ್ನು ಹೊಂದಿರುವ ಕಪಿಲ್ ಸಿಬಾಲ್‌ರ ಈ ಹೊಸ ಕಾಯ್ದೆಯಲ್ಲಿ ಶೇ. 25 ರಷ್ಟು ಬಡಮಕ್ಕಳನ್ನು ಕಾನ್ವೆಂಟ್ ಶಾಲೆಗಳು ಸೇರಿಸಿಕೊಳ್ಳಬೇಕೆಂಬ ಧನಾತ್ಮಕ ಅಂಶವಿದೆ. ಆದರೆ ಅಲ್ಲಿ ಸೇರಿದ ಈ ಶೇ. 25 ರಷ್ಟು ಮಕ್ಕಳು ಮತ್ತೆ ಅಸ್ಪೃಶ್ಯರಾಗಿಯೇ ಉಳಿಯಲಿದ್ದಾರೆ ಎಂಬ ಅಂಶದ ಕಡೆ ಈ ಕಾಯ್ದೆ ಗಮನಹರಿಸಿಯೇ ಇಲ್ಲ. ಅಷ್ಟಕ್ಕೂ ಈ ಕಾಯ್ದೆ ಪ್ರಕಾರ, ಈ ಶೇ. 25 ರಷ್ಟು ಮಕ್ಕಳ ಫೀಸು, ಪುಸ್ತಕದ ಖರ್ಚನ್ನು ಸರ್ಕಾರ ಭರಿಸಲಿದೆ. ಅದರ ಬದಲು ಈ ಮಕ್ಕಳ ಖರ್ಚು-ವೆಚ್ಚದ ಹೊಣೆಯನ್ನು ಆಯಾ ಶಾಲೆಗಳಿಗೆ ಹೊರಿಸಿದ್ದರೆ ಸರಿಯಾಗಿತ್ತು.

ಏನೇ ಇರಲಿ, ಜಾತಿ-ವರ್ಗಗಳ ಆಧಾರದಲ್ಲಿ ಎಂದೋ ವಿಭಜನೆಗೊಂಡಿರುವ ಭಾರತೀಯ ಸಮಾಜದಲ್ಲಿ ಈ ಕಾಯ್ದೆಯಿಂದ ಶೈಕ್ಷಣಿಕ ಕ್ರಾಂತಿ ಮಾಡುವುದು ಅಸಾಧ್ಯ. ಡಾ. ಯು.ಆರ್. ಅನಂತಮೂರ್ತಿ ಮತ್ತು ಮತ್ತಿತರರು ಹೇಳುವಂತೆ, ಎಲ್ಲ ಜಾತಿ, ವರ್ಗಗಳ ಮಕ್ಕಳು ಒಂದೆಡೆ ಕಲಿಯುವಂತಾಗಿ, ಪರಸ್ಪರರನ್ನು ಅರ್ಥಮಾಡಿಕೊಳ್ಳುವ, ಆ ಮೂಲಕ ಏಕಮುಖೀ ಸಂಸ್ಕೃತಿಯಿಂದ ಹೊರಬಂದು ಭಾರತದ ವೈವಿಧ್ಯಮಯ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುವ ವಾತಾವರಣ ನಿರ್ಮಾಣವಾಗಬೇಕು. ಅದಾಗಬೇಕೆಂದರೆ, ಸಚಿವ ಕಪಿಲ್ ಸಿಬಾಲ್‌ರ ಶೇ. 25 ರ ಫಾರ್ಮುಲಾದಿಂದ ಸಾಧ್ಯವಿಲ್ಲ. ಬದಲಿಗೆ 1966 ರಲ್ಲಿ ಕೊಠಾರಿ ಕಮಿಷನ್ ವರದಿ ಹೇಳಿದಂತೆ ಒಂದೇ ಪಠ್ಯಕ್ರಮದ ಏಕರೂಪಿ ಶಾಲೆಗಳ ಅಗತ್ಯ ಇದ್ದೇ ಇದೆ.

ಬೆಥನಿ ಶಾಲೆಗೆ ಅಲ್ಲಿನ ಸುತ್ತಮುತ್ತಲಿನ ಸ್ಲಮ್ ಮಕ್ಕಳನ್ನು ಸೇರಿಸುವುದು ಇಂದಿನ ತುರ್ತಲ್ಲ. ಬದಲಿಗೆ 1 ರಿಂದ 8 ನೇ ತರಗತಿವರೆಗಿನ ಪ್ರಾಥಮಿಕ ಶಿಕ್ಷಣವನ್ನು ರಾಷ್ಟ್ರೀಕರಣಗೊಳಿಸಬೇಕು. ಸಂವಿಧಾನ ಹೇಳಿದಂತೆ ಪ್ರಾಥಮಿಕ ಶಿಕ್ಷಣ ಉಚಿತವಾಗಿ ಸಿಗುವಂತಾಗಬೇಕು. ಹಾಗೆಯೇ ನೆರೆಹೊರೆ ಶಾಲೆ (**neighbourhood school**) ಗಳ ಪರಿಕಲ್ಪನೆ



ಜಾರಿಗೆ ಬರಬೇಕು. ಅಂದರೆ ಆಯಾ ಏರಿಯಾದ ಮಕ್ಕಳೆಲ್ಲ ಒಂದೇ ಶಾಲೆಯಲ್ಲಿ ಕಲಿಯುವಂತಾಗಬೇಕು. ಕೊನೆಯದಾಗಿ, ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲೇ ಕಲಿಸುವಂತಾಗಬೇಕು.

1964-66 ರಲ್ಲೇ ‘ಸಮಾನ ಶಿಕ್ಷಣ ಶಾಲೆ’ಗಳ ಸ್ಥಾಪನೆಗೆ ಶಿಕ್ಷಣ ಆಯೋಗವೇ ಶಿಫಾರಸ್ಸು ಮಾಡಿತ್ತು, 1968, 1986 ರ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು 1992 ರ ಪರಿಷ್ಕೃತ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲೂ ಈ ವಿಷಯ ಪ್ರಸ್ತಾಪವಾಗಿತ್ತು, ಆದರೆ ರಾಜಕೀಯ ಪಕ್ಷಗಳ ಇಚ್ಛಾಶಕ್ತಿಯ ಕೊರತೆ ಮತ್ತು ಶಿಕ್ಷಣದೆಡೆಗಿನ ಅವುಗಳ ಉದಾಸೀನತೆಯಿಂದಾಗಿ ಈ ನೀತಿ ಜಾರಿಗೊಳ್ಳಲೇ ಇಲ್ಲ, ಅದರ ಪರಿಣಾಮವಾಗಿ ನಮ್ಮ ಮಕ್ಕಳ ಮಧ್ಯೆ ಭೇದಭಾವದ ಗೋಡೆಗಳೆದ್ದುಬಿಟ್ಟವು. ಈಗ ಕೇಂದ್ರ ಮಾನವ ಸಂಪನ್ಮೂಲ ಸಚಿವ ಕಪಿಲ್ ಸಿಬಾಲ್‌ರ ಮಹತ್ವಾಕಾಂಕ್ಷೆಯ ಹೊಸ ಕಾಯ್ದೆ ಕೂಡಾ ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವೇ ಇದೆ. ಸಂವಿಧಾನದಲ್ಲಿ 14 ವರ್ಷದೊಳಗಿನ ಮಕ್ಕಳಿಗೆ ಉಚಿತ ಶಿಕ್ಷಣ ಕೊಡಬೇಕು ಎಂದಿದ್ದರೆ, ಈ ಹೊಸ ಕಾಯ್ದೆಯಲ್ಲಿ 6 ರಿಂದ 14 ವರ್ಷದ ಮಕ್ಕಳಿಗೆ ಉಚಿತ ಶಿಕ್ಷಣದ ವ್ಯವಸ್ಥೆ ಆಯೋಜಿಸಲಾಗಿದೆ. ಅಂದರೆ 6 ವರ್ಷದೊಳಗಿನ ಮಕ್ಕಳು ಈ ಸೌಲಭ್ಯದ ವ್ಯಾಪ್ತಿಯಿಂದ ಹೊರಗೇ ಉಳಿಯುತ್ತಾರೆ. ಹಾಗೆಯೇ ಸ್ವಾತಂತ್ರ್ಯ ಬಂದ ಹೊತ್ತಲ್ಲಿ 8 ನೇ ಕ್ಲಾಸು ಓದಿದವರಿಗೂ ಕೆಲಸ ಸಿಗುವ ಖಾತ್ರಿ ಇತ್ತು, ಆದರಿವತ್ತು ಕನಿಷ್ಠ 12 ನೇ ಕ್ಲಾಸು ಓದದೇ ಇದ್ದರೆ ಕೆಲಸವೇ ಸಿಗುವುದಿಲ್ಲ, ಹೀಗಾಗಿ ಈಗಿರುವ 8 ವರ್ಷಗಳ ಉಚಿತ ಶಿಕ್ಷಣದ ಬದಲು 12 ವರ್ಷಗಳ ಉಚಿತ ಶಿಕ್ಷಣದ ವ್ಯವಸ್ಥೆಯಾಗಬೇಕು. ಕಪಿಲ್ ಸಿಬಾಲ್‌ರ ಹೊಸ ಕಾಯ್ದೆ ಇದ್ಯಾವುದನ್ನೂ ಪರಿಶೀಲಿಸದೇ ಖಾಸಗಿ ಶಾಲೆಗಳೆಂಬ ವ್ಯಾಪಾರೀಕೂಟಗಳ ಮುಂದೆ ದೈನೇಸಿಯಾಗಿ ಕೈಯೊಡ್ಡಿದೆಯಷ್ಟೇ.

ವ್ಯಾಪಾರಕ್ಕೆಂದೇ ಹುಟ್ಟಿಕೊಂಡ ಖಾಸಗಿ ಶಾಲೆಗಳು ಬಡಮಕ್ಕಳಿಗೆ ಶಿಕ್ಷಣ ನೀಡುತ್ತವೆ ಎಂದು ನಂಬುವುದೇ ಮೂರ್ಖತನ. ಈ ದೇಶದ ಎಲ್ಲ ಮಕ್ಕಳಿಗೂ ಸಮಾನ, ಏಕರೂಪಿ ಶಿಕ್ಷಣ ಸಿಗಬೇಕೆಂದರೆ ಕೂಡಲೇ ಪ್ರಾಥಮಿಕ ಶಿಕ್ಷಣವನ್ನು ರಾಷ್ಟ್ರೀಕರಣಗೊಳಿಸಬೇಕಷ್ಟೇ....

● ಮಲ್ಲನಗೌಡರ್ ಪಿ.ಕೆ.

ರಾಜೀವ್ ಗಾಂಧಿ ಆರೋಗ್ಯ ವಿವಿಯೂ... ರಾಮನಗರದ ಗೊಂದಲವೂ...


ಇದೊಳ್ಳೆ ಕತೆಯಾಯ್ತು ಎಂದು ‘ಲಂಕೇಶ್’ ಓದುಗರು ಅಂದುಕೊಳ್ಳಬಹುದೇನೋ. ಈ ರಾಜ್ಯಕ್ಕೆ ಒಂದು ತಾಂತ್ರಿಕ ವಿವಿ ಮತ್ತು ಒಂದು ಮೆಡಿಕಲ್ ವಿವಿ ಬಂದಾಯ್ತು. ಆದಾಗಲೇ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಬೆಳಗಾವಿಯಲ್ಲಿ ಭದ್ರ ನೆಲೆಯೂರಿ ಸ್ವಂತ ಕಟ್ಟಡದಲ್ಲಿ ತನ್ನ ಕೆಲಸ-ಕಾರ್ಯ ಮಾಡಿಕೊಂಡಿದೆ. ಆದರೆ ಯಾವಾಗ ಈ ರಾಜೀವ್ ಗಾಂಧಿ ಆರೋಗ್ಯ ವಿವಿಯನ್ನು ಬೆಂಗಳೂರಲ್ಲಿ ಸ್ಥಾಪಿಸುವುದು ಎಂದು ನಿರ್ಧಾರವಾಯಿತೋ ಅವತ್ತಿಂದ ಗಜಿಬಿಜಿ ಶುರುವಾಗಿದೆ. ಬೆಳಗಾವಿಯಲ್ಲಿ ತಾಂತ್ರಿಕ ವಿವಿಗೆ ಆಗದ ಸಮಸ್ಯೆ ಇಲ್ಲಿ ರಾಜೀವ್‌ಗಾಂಧಿ ವಿವಿಗೇಕೆ? ಎಂಬ ಪ್ರಶ್ನೆ ಎತ್ತಿಕೊಂಡರೆ ಥಟ್ಟನೆ ಎದುರಾಗುವುದು ರಿಯಲ್ ಎಸ್ಟೇಟ್ ಸಮಸ್ಯೆ.


ಅರ್ಚಕರಹಳ್ಳಿಯ ಭೂಮಿ...

ಹೌದು, ಯಾವುದೇ ವಿವಿ ಮಾಡಬೇಕೆಂದರೂ ನೂರಾರು ಎಕರೆ ಭೂಮಿ ಬೇಕಲ್ಲ? ಅದು ಬೆಂಗಳೂರಿನಲ್ಲಿ ಸರ್ಕಾರಕ್ಕೆ ಸಿಗುವುದು ಅಸಾಧ್ಯವೇ. ಯಾಕೆಂದರೆ ಎಲ್ಲ ಪಕ್ಷಗಳೂ ಇಡೀ ಬೆಂಗಳೂರನ್ನು ರಿಯಲ್ ಎಸ್ಟೇಟ್ ದಳ್ಳಾಳಿಗಳಿಗೆ ಮಾರಿಕೊಂಡಾಗಿಬಿಟ್ಟಿದೆ.

ಆ ಕಾರಣಕ್ಕಾಗಿ ರಾಜೀವ್ ಗಾಂಧಿ ಮೆಡಿಕಲ್ ವಿವಿಗೆ ಬೆಂಗಳೂರಲ್ಲಿ ಜಾಗ ಸಿಗಲಿಲ್ಲ, ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಅವರು ತಮ್ಮ ಕ್ಷೇತ್ರ ರಾಮನಗರದ ಅರ್ಚಕರ ಹಳ್ಳಿಯಲ್ಲಿ 216 ಎಕರೆ ಜಾಗ ಗುರ್ತಿಸಿದ್ದರು. ಅವರ ಆಜ್ಞೆಯಂತೆ ಅಲ್ಲಿ ಭೂಸ್ವಾಧೀನ ಪ್ರಕ್ರಿಯೆ ಶುರುವಾಯಿತು. ಆದರೆ ಈ ಜಾಗ ಕೃಷಿಭೂಮಿ ಆಗಿದ್ದರಿಂದ ಅಲ್ಲಿನ ಜನ ಇದಕ್ಕೆ ವಿರೋಧ ಮಾಡಿದರು. ಪಕ್ಕದಲ್ಲೇ 2,500 ಎಕರೆ ಸರ್ಕಾರಿ ಜಮೀನಿದ್ದೂ ರೈತರ ಈ ಭೂಮಿಗೆ ಕೈಹಾಕಿದ್ದರ ಹಿಂದೆ ದೊಡ್ಡ ರಿಯಲ್ ಎಸ್ಟೇಟ್ ಹುನ್ನಾರವಿತ್ತು. ಅಲ್ಲಿ ರಾಜೀವ್ ಗಾಂಧಿ ವಿವಿ ತಲೆ ಎತ್ತಿದರೆ ಸುತ್ತಮುತ್ತಲಿನ ಜಮೀನಿಗೆ ಭಾರೀ ಬೆಲೆ ಬರುವುದರಿಂದ 2,500 ಸರ್ಕಾರಿ ಜಮೀನನ್ನು ರಾಜಕೀಯ ಪಕ್ಷಗಳ ಧುರೀಣರ ಚೇಲಾಗಳು ಕಬಳಿಸುವ ಹುನ್ನಾರ 2007ರಿಂದಲೇ ಶುರುವಾಯಿತು. ಗಿರಿದೇವನೂರು ಎಂಬ ಆಸಾಮಿ ಇಲ್ಲಿ ಒಂದು ಸಾವಿರ ಎಕರೆ ಸರ್ಕಾರಿ ಭೂಮಿಯಲ್ಲಿ ಭಾರೀ ಪ್ರಾಜೆಕ್ಟ್ ಮಾಡ್ತೀನಿ ಅಂತ ಆ ಕಾಲದಿಂದಲೂ ಸಂಚು ಹೂಡಿಯೇ ಕುಳಿತಿದ್ದಾನೆ. ಮೊದಲಿಗೆ ಈತನಿಗೆ ಕುಮಾರಸ್ವಾಮಿ ಸಪೋರ್ಟ್ ಮಾಡಿದರೆ, ಈಗ ಯಡ್ಡಿಯ ಸಪೋರ್ಟ್ ಇದೆ.

ಮಂಚನಬೆಲೆಯ ನೀರಾವರಿ ಪ್ರಾಜೆಕ್ಟ್‌ನ ಲಾಭ ಈ ಅರ್ಚಕರಹಳ್ಳಿಯ ರೈತರಿಗೆ ದೊರೆಯಲಿದೆ. ಹೀಗಾಗಿ ಅವರಲ್ಲಿ ಬಹುತೇಕರು ಈ ಭೂಮಿಯನ್ನು ಬಿಡಲು ತಯಾರಿಲ್ಲ, ಅದು ಅವರ ಹಕ್ಕು ಕೂಡ. ಇಲ್ಲಿರುವ 102 ಕುಟುಂಬಗಳಲ್ಲಿ 98 ಲಿಂಗಾಯತರವೇ ಆಗಿದ್ದರಿಂದ ಕುಮಾರಸ್ವಾಮಿ ಈ ರೈತರ ಬಗ್ಗೆ ಕೇರ್ ಮಾಡಲಿಲ್ಲ ಎನ್ನಲಾಗುತ್ತಿದೆ. ಮುಂದೆ ಈ ಕುಟುಂಬಗಳು ಹೋರಾಟದ ಹಾದಿ ತುಳಿವ ಬದಲು “ವೀರಶೈವ ಲಿಂಗಾಯತರ ವೇದಿಕೆ” ಮೂಲಕ ಯಡಿಯೂರಪ್ಪನನ್ನು ಸಂಧಿಸಿ, ಭೂಸ್ವಾಧೀನವನ್ನು ತಡೆಹಿಡಿಯುವ ಆಜ್ಞೆ ಪಡೆದವು. ಆದರೀಗ ರಿಯಲ್ ಎಸ್ಟೇಟ್ ಎಂಜಲಿಗೆ ತಲೆಬಾಗಿರುವ ‘ವೀರಶೈವ’ ಯಡ್ಡಿಯೂ ಕೊಟ್ಟ ಮಾತನ್ನು ಮರೆತಿದ್ದಾರೆ.



ಇದೀಗ ಅರ್ಚಕರಹಳ್ಳಿಯಲ್ಲೇ ರಾಜೀವ್ ಗಾಂಧಿ ವಿವಿ ಕ್ಯಾಂಪಸ್ ಕಟ್ಟಡ ಎಬ್ಬಿಸಲು ಬಿಜೆಪಿ, ಜೆಡಿಎಸ್ ಎರಡೂ ಉತ್ಸುಕವಾಗಿವೆ. ಅಲ್ಲಿನ ರೈತರ ಪ್ರತಿರೋಧವನ್ನು ದಮನ ಮಾಡಲು ಒಳಒಪ್ಪಂದ ಮಾಡಿಕೊಂಡಿವೆ. ಇದರ ಪರಿಣಾಮವಾಗಿಯೇ ‘ರಾಜೀವ್ ಗಾಂಧಿ ವಿವಿ ಸ್ಥಳಾಂತರ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ರಾಮಚಂದ್ರೇಗೌಡ ಹೇಳಿಕೆ ಹೊರಡಿಸುತ್ತಾರೆ. ಈಗಾಗಲೇ ಬೆಂಗಳೂರು ಬಳಿ ಭೀಮನಕುಪ್ಪೆಯಲ್ಲಿ ಅದಕ್ಕೆಂದೇ ಸ್ವಾಧೀನಮಾಡಿಕೊಂಡಿರುವ 50 ಎಕರೆ ಜಮೀನಿನಲ್ಲಿ ಈ ವಿವಿ ಆರಂಭಿಸುತ್ತೇವೆ ಎಂಬ ಪುಕಾರು ಎಬ್ಬಿಸಲಾಗಿದೆ. ಆದರೆ ಈ ಹಿಂದೆಯೇ ರಾಜೀವ್ ಗಾಂಧಿ ವಿವಿಯ ಆಡಳಿತ ಮಂಡಳಿ ಮತ್ತು ಕೆಐಎಡಿಬಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ, ರಾಮನಗರದ ಅರ್ಚಕರ ಹಳ್ಳಿಯ ಬದಲು ಅದರ ಪಕ್ಕದ ಸರ್ಕಾರಿ ಜಮೀನಿನಲ್ಲಿ ವಿವಿ ಸ್ಥಾಪಿಸುವುದು ಯೋಗ್ಯ ಎಂದು ವರದಿ ನೀಡಿವೆ. ಆದರೆ 200 ಎಕರೆ ಸರ್ಕಾರಿ ಜಮೀನನ್ನು ‘ಕಳೆದುಕೊಳ್ಳಲು’ ಒಲ್ಲದ ಬಿಜೆಪಿ, ಜೆಡಿಎಸ್‌ಗಳು ಅರ್ಚಕರಹಳ್ಳಿಯಲ್ಲೇ ವಿವಿ ಸ್ಥಾಪನೆ ಆಗಲಿ ಎಂಬ ಷಡ್ಯಂತ್ರ ರೂಪಿಸಿವೆ.

2007ರಿಂದಲೂ ಕಾನೂನುಬದ್ಧ ಹೋರಾಟ ಮಾಡುತ್ತ ಬಂದಿರುವ ಅರ್ಚಕರಹಳ್ಳಿಯ ರೈತಕುಟುಂಬಗಳು ಈಗ ಮತ್ತೆ ಕಂಗಾಲಾಗಿವೆ. ರಾಮನಗರದ ಶಾಸಕ ರಾಜು ಮಾತ್ರ ಇದಕ್ಕೂ ತನಗೂ ಸಂಬಂಧವೇ ಇಲ್ಲದಂತೆ ಮುಗುಮ್ಮಾಗಿದ್ದಾನೆ. ಇಲ್ಲಿ ‘ನೈಸ್’ ಯೋಜನೆಗೆ ಒಂದೇ ಜಾತಿಯ ಸಾವಿರಾರು ಕುಟುಂಬಗಳ ಜಮೀನು ಲೂಟಿ ನಡೆಯುತ್ತಿವೆ ಎನ್ನುವ ಸಂಸದ ಕುಮಾರಸ್ವಾಮಿಗೆ, ಅರ್ಚಕರಹಳ್ಳಿಯ ಒಂದೇ ಜಾತಿಯ ರೈತರ ನೋವು ಏಕೆ ಅರ್ಥವಾಗುವುದಿಲ್ಲ?

ಒಟ್ಟಿನಲ್ಲಿ ರಾಜೀವ್ ಗಾಂಧಿ ವಿವಿ ರಾಮನಗರದಲ್ಲೇ ಸ್ಥಾಪಿತವಾಗಲಿ. ಆದರೆ ಅದು ಬಡರೈತರ ಜಮೀನಿನಲ್ಲಿ ಸ್ಥಾಪಿತವಾಗದೇ, ಪಕ್ಕದ ಸರ್ಕಾರಿ ಜಮೀನಿನಲ್ಲಿ ತಲೆ ಎತ್ತಲಿ. ಇಲ್ಲಿ ಬಿಜೆಪಿ, ಜೆಡಿಎಸ್‌ಗಳು ತಮ್ಮ ರಿಯಲ್ ಎಸ್ಟೇಟ್ ಬುದ್ಧಿಗೆ ಕೊಂಚ ವಿರಾಮ ಕೊಟ್ಟರೆ ಎಲ್ಲ ಕೆಲಸವೂ ಸುಗಮವಾಗುತ್ತದೆ.

● ವರದಿಗಾರ

ಪಾದಯಾತ್ರೆಯಲ್ಲಿ ಒಂದು ದಿನ...

• ಪಾರ್ವತೀಶ
bparvateesha@gmail.com



ಸಂಸತ್ ಅದಿವೇಶನ ಮುಗಿಯಲಿ ಆಮೇಲೆ ನೋಡಿ.... ಸಂಸದ ವಿಶ್ವನಾಥ

ಶಿರಾ ದಾಟಿ ಸುಮಾರು ಮೂರು ಕಿಲೋಮೀಟರ್ ಮುಂದಕ್ಕೆ ಹೋದ ನಾವು ಬೂವನಹಳ್ಳಿ ಜಂಕ್ಷನ್ ಬಳಿ ನಿಂತು ಪಾದಯಾತ್ರಿಗಳಿಗಾಗಿ ಕಾದೆವು. ಎರಡು ಕಿ.ಮೀ.ನಷ್ಟು ಉದ್ದಕ್ಕೆ ಚಾಚಿಕೊಂಡಿದ್ದ ಯಾತ್ರೆ ನಮ್ಮನ್ನು ಹಾದು ಸಾಗುತ್ತಿರುವಾಗ ಮೈಸೂರಿನ ಸಂಸದ ಎಚ್.ವಿಶ್ವನಾಥ್ ಕಾಣಿಸಿದರು. ಅವರೊಂದಿಗೆ ನಾಲ್ಕಾರು ಜನ ಹೆಜ್ಜೆ ಹಾಕುತ್ತಿದ್ದರು. ವಿಶ್ವನಾಥ್ ಜೊತೆ ಸೇರಿಕೊಂಡ ನಮ್ಮ ತಂಡ ನಡೆಸಿದ ಮಾತುಕತೆ ಹೀಗಿದೆ:

ಲಂಕೇಶ್ : ಇದು ಎಲ್ಲಿತನಕ? ಹೇಗೆ ಕೊನೆಯಾಗುತ್ತೆ ಸಾರ್?

ವಿಶ್ವನಾಥ್ : ನಾವು ಬಳ್ಳಾರಿತನಕ ಹೋಗ್ತೀವಿ, ಸಮಾವೇಶ ಆಗಸ್ಟ್ 9ರಂದು ನಡೆದೇ ನಡೆಯುತ್ತೆ.

ಲಂಕೇಶ್ : ಅದು ಗೊತ್ತಿದೆ, ನಾವು ಕೇಳಿದ್ದು ಅದರ ಬಗ್ಗೆ ಅಲ್ಲ.

ವಿಶ್ವನಾಥ್ : ಮತ್ತೆ!?

ಲಂಕೇಶ್ : ಕಾಂಗ್ರೆಸ್ ಹೈಕಮಾಂಡ್ ರೆಡ್ಡಿಗಳ ವಿರುದ್ಧ ಎಷ್ಟು ದೂರ ಹೋಗಲು ತಯಾರಾಗಿದೆ?

ವಿಶ್ವನಾಥ್ : ನೋಡಿ ಡೆಮಾಕ್ರಸಿಗೆ ಈ ಮೈನಿಂಗ್ ಮಾಫಿಯಾ ಅಪಾಯ....

ಲಂಕೇಶ್ : ಸಾರ್... ನಮಗೂ ಅದೆಲ್ಲ ಗೊತ್ತಿದೆ. ನಾವು ಕೇಳ್ತಿರೋದು ಸೋನಿಯಾ ಗಾಂಧಿ ಮನಸ್ಸಿನಲ್ಲಿ ಏನಿದೆ ಅಂತ?

ವಿಶ್ವನಾಥ್ : ನೋಡಿ, ಕಾಂಗ್ರೆಸ್ ನೂರು ವರ್ಷಗಳ ಇತಿಹಾಸ ಇರೋ ಬಲಿಷ್ಠ ಪಾರ್ಟಿ. ಅಂತಹ ಪಕ್ಷದ ಬಗ್ಗೆ ಇವರು ಕೇವಲವಾಗಿ ಮಾತಾಡ್ತಾ ಇದ್ದಾರೆ. ಇವರಿಗೆ ಕೇವಲ ನಮ್ಮ ಕೆಪಾಸಿಟಿ ಏನೂಂತ ತೋರಿಸಲೇಬೇಕು.

ಲಂಕೇಶ್ : ಹಾಗಂದರೆ ಇದು ಇಲ್ಲಿಗೇ ಮುಗಿಯಲ್ಲ ಅಂತಾಯಿತು

ವಿಶ್ವನಾಥ್ : ಹೌದು.

ಲಂಕೇಶ್ : ಕಾಂಗ್ರೆಸ್‌ಗೆ ಇದು ಕೇವಲ ಅಕ್ರಮ ಗಣಿಗಾರಿಕೆಗೆ ಸೀಮಿತವಾಗಿರೋ ವಿಷಯ ಅಲ್ಲ ಹೌದಾ? ಈ ರೆಡ್ಡಿ ಗ್ಯಾಂಗ್ ರಾಷ್ಟ್ರಮಟ್ಟದಲ್ಲಿ ಬಿಜೆಪಿಗೆ ಹಣ ಪಂಪ್ ಮಾಡ್ತಿದ್ದಾರೆ. ಇವತ್ತು ಬಿಜೆಪಿ ಗುಡಾರ ನಿಂತಿರೋದೇ ಗುಜರಾತ್ ಮೋದಿ ಸರ್ಕಾರ ಮತ್ತೆ ಈ ರೆಡ್ಡಿ ಗ್ಯಾಂಗ್ ಎಂಬ ಕಂಬಗಳ ಮೇಲೆ. ಇದು ಹೈಕಮಾಂಡ್‌ಗೂ ಅರ್ಥವಾಗಿರುತ್ತೆ ಅಲ್ಲವಾ?

ವಿಶ್ವನಾಥ್ : ಹೌದು ನಿಜ. ಸೊಹ್ರಾಬುದ್ದೀನ್ ಕೇಸಿನಲ್ಲಿ ಇವತ್ತಲ್ಲ ನಾಳೆ ಮೋದಿನೂ ಸಿಕ್ಕಿಬೀಳ್ತಾನೆ. ಇನ್ನು ರೆಡ್ಡಿಗಳ ವಿಚಾರಕ್ಕೆ ಬಂದರೆ....

ಲಂಕೇಶ್ : ಹೇಳಿ ಏನು ಮಾಡಬೇಕಂತಿದ್ದೀರಾ? ಇವರನ್ನು ಕಂಟ್ರೋಲ್ ಮಾಡೋಕೆ ಆಗುತ್ತಾ?

ವಿಶ್ವನಾಥ್ : (ದಾರಿಯಲ್ಲಿ ಎದುರಿಗೆ ಸಿಕ್ಕ ರೈತರ ಕೈಕುಲುಕಿ ಮುಂದುವರೆಯುತ್ತಾ) ನೋಡಿ ಅಕ್ರಮ ಅದಿರು ರಫ್ತು ವಿಚಾರವು ಫೆರಾ ಕಾಯ್ದೆ ಉಲ್ಲಂಘನೆ ವ್ಯಾಪ್ತಿಗೂ ಬರುತ್ತೆ. ಅದೆಲ್ಲಾ ತನಿಖೆಯಾಗೋ ಕಾಲವೂ ಬರುತ್ತೆ ಬಿಡಿ.

ಲಂಕೇಶ್ : ಆಂಧ್ರದಲ್ಲಿ ಜಗನ್ ಕಾಂಗ್ರೆಸ್ ಹೈಕಮಾಂಡ್ ವಿರುದ್ಧಾನೆ ಹೋಗ್ತಿದ್ದಾನೆ. ಅದಕ್ಕೂ ರೆಡ್ಡಿಗಳ ಚಿತಾವಣೆನೇ ಕಾರಣವಾ ಹೇಗೆ?

ವಿಶ್ವನಾಥ್ : ಅದೂ ನಿಜ. ಜಗನ್ ವಿಷಯಾನ ಹೈಕಮಾಂಡ್-ಹ್ಯಾಂಡಲ್ ಮಾಡ್ತಾರೆ ಬಿಡಿ.

ಲಂಕೇಶ್ : ಕೊನೆಯದಾಗಿ ಬಳ್ಳಾರಿ ರೆಡ್ಡಿ ಗ್ಯಾಂಗ್ ವಿಷಯವನ್ನು ಹೈಕಮಾಂಡ್ ಹೇಗೆ ನಿಭಾಯಿಸಬಹುದು. ನಿಮಗೀಗ ಡೆಲ್ಲಿ ವ್ಯವಹಾರಗಳೂ ಹತ್ತಿರವಾಗಿರೋದರಿಂದ ಕೇಳ್ತಿದ್ದೀವಿ ಅಷ್ಟೇ.

ವಿಶ್ವನಾಥ್ : (ಒಂಥರಾ ನಿಗೂಢವಾಗಿ ನಗುತ್ತಾ) ಈಗಿನ ಪಾರ್ಲಿಮೆಂಟ್ ಸೆಷನ್ ಮುಗೀಲಿ ಅಂತ ಕಾಯ್ತಿದ್ದೀವಿ. ಆಮೇಲೆ ನೀವೇ ನೋಡಿ ಏನಾಗುತ್ತೆ ಅಂತ...!

ಲಂಕೇಶ್ : ಅಂದರೆ...?

ವಿಶ್ವನಾಥ್ : ಇವರ ವಿಷಯಾನ ಒಂದು Logical Endಗೆ ತಲುಪಿಸೋವರೆಗೂ ನಾವು ಬಿಡಲ್ಲ



ಪಾರ್ವತೀಶ, ಗೌರಿ, ರೀನಿ ಮತ್ತು ಚಸರಾ

ಅಂದುಕೊಂಡಿದ್ದಂತೆ ಕಳೆದ ವಾರ ಜುಲೈ 31ರ ಶನಿವಾರ ಬೆಳಗ್ಗೆ ಏಳು ಗಂಟೆಗೆ ನಾವೊಂದಿಷ್ಟು ಜನ ಕಾಂಗ್ರೆಸ್‌ನವರ ಪಾದಯಾತ್ರೆಯ ಬೆನ್ನತ್ತಿ ಬೆಂಗಳೂರಿನಿಂದ ಹೊರಟೆವು.


ಕ್ಯಾಪ್ಟನ್ ಗೌರಿ, ನಾನು ಹಾಗೂ ಪತ್ರಕರ್ತ ಮಿತ್ರರಾದ ರೀಟಾ ರೀನಿ, ಚಸರ, ಲಕ್ಷ್ಮೀಪತಿ ಈ ಎಲ್ಲರಿಗೂ ಕಾಂಗ್ರೆಸ್ ಬಗ್ಗೆ ದಿಢೀರ್ ನಂಬಿಕೆ ಅಥವಾ ಸಂಭ್ರಮಗಳಿರಲಿಲ್ಲವಾದರೂ ಸಹಜ ಕುತೂಹಲವಂತೂ ಬೇಕಾದಷ್ಟಿತ್ತು. ಅಷ್ಟರಲ್ಲಿ ಪಾದಯಾತ್ರೆಗೆ ಆರು ದಿನ ಕ್ರಮಿಸಿದ್ದ ದೂರ ನೂರಿಪ್ಪತ್ತು ಕಿ.ಮೀ.ಗಳು. ಆ ಕಾರಣಕ್ಕಲ್ಲವಾದರೂ ನಾವಿದ್ದ ದೊಡ್ಡ ಸೈಜಿನ ಇನೋವಾ ಕಾರ್ ಅನ್ನು ಗೌರಿ ಗಂಟೆಗೆ ನೂರಿಪ್ಪತ್ತು ಕಿ.ಮೀ.ಗಳ ಸ್ಪೀಡಿನಲ್ಲೇ ಓಡಿಸುತ್ತಾ ಶಿರಾ ತಲುಪಿಸಿದಾಗ ಸರಿಯಾಗಿ ಹತ್ತು ಗಂಟೆಯಾಗಿತ್ತು. ಆಶ್ಚರ್ಯ ಅಂದರೆ ದಾರಿಯಲ್ಲಿ ಎಲ್ಲೂ ನಮಗೆ ಪಾದಯಾತ್ರೆ ಹಾದುಹೋಗಿದ್ದ ಕುರುಹುಗಳು ಕಾಣಸಿಗಲಿಲ್ಲ. ಕರ್ನಾಟಕದ ರಾಜಕಾರಣದ ಮಟ್ಟಿಗೆ, ಅದರಲ್ಲೂ ಕಾಂಗ್ರೆಸ್ ಪಕ್ಷದ ಪಾಲಿಗೆ ಅತೀ ಅಪರೂಪದ ಸಂಗತಿ ಎಂಬಂತಿದ್ದ ಈ ಯಾತ್ರೆಯಲ್ಲಿ ಸಾವಿರಾರು ಜನರಿದ್ದರೂ ನಮಗೆ ದಾರಿಯಲ್ಲಿ ಬಳಸಿ ಬಿಸಾಡಿದ್ದ ಪ್ಲಾಸ್ಟಿಕ್ ತಟ್ಟೆ-ಲೋಟಾ, ಬ್ಯಾನರ್ ಕರಪತ್ರಗಳ ಕಸ ಕಾಣಲಿಲ್ಲ.

ನಾವು ಶಿರಾ ಐಬಿ ಸರ್ಕಲ್ ಹತ್ತಿರ ಹೋದಾಗ ಅಲ್ಲೊಂದು ಬೃಹತ್ ಜನ ಸಾಗರ. ಪಾದಯಾತ್ರೆಯಲ್ಲಿ ಕಾಯಂ ಆಗಿರುತ್ತಿದ್ದ ಸಾವಿರಾರು ಜನರೊಂದಿಗೆ ಅದೇತಾನೆ ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳಿಂದ ಬಂದಿದ್ದ ಸಾವಿರಾರು ಜನ ಜಮಾಯಿಸಿದ್ದರು. ಅಷ್ಟರಲ್ಲಾಗಲೇ ಕಾಂಗ್ರೆ ನಾಯಕರಾದ ಎಚ್.ಎಂ.ರೇವಣ್ಣ, ಕೃಷ್ಣಬೈರೇಗೌಡ, ದಿನೇಶ್ ಗುಂಡೂರಾವ್ ಕಾಲ್ನಡಿಗೆಗೆ ರೆಡಿಯಾಗಿದ್ದರು.

ಹಿಂದಿನ ದಿನ ಸುರಿದಿದ್ದ ಮಳೆ ಹಾಗೂ ಅವತ್ತಿನ ಬೆಳಗ್ಗಿನಿಂದ ಮೋಡ ಕವಿದಿದ್ದ ವಾತಾವರಣವಂತೂ ನಡಿಗೆ ಮುಂದುವರೆಸಲು ಹೇಳಿಮಾಡಿಸಿದಂತಿತ್ತು. ಕೆಲ ಲೀಡರುಗಳು ತಂತಮ್ಮ ಹಿಂಬಾಲಕರೊಂದಿಗೆ ಆಗಲೇ ನಡಿಗೆ ಚಾಲೂ ಮಾಡೇಬಿಟ್ಟಿದ್ದರು. ಆದರೂ ಆ ಇಡೀ ಜನಸ್ತೋಮ ಒಂದೇ ಘನ ವಸ್ತುವಿನಂತೆ ಅತ್ತಿಂದಿತ್ತ ತುಯ್ದಾಡುತ್ತಾ ಯಾರನ್ನೋ ನಿರೀಕ್ಷಿಸುತ್ತಿದ್ದಂತೆ ಕಾಯುತ್ತಿತ್ತು. ನ್ಯಾಷನಲ್ ಹೈವೇ ನಾಲ್ಕರಲ್ಲಿ ಒಂದು ಲೈನಿನ ಮೇಲೆ ಸಾಗಬೇಕಿದ್ದ ಜನ ಇದ್ದಕ್ಕಿದ್ದಂತೆ ಸಾವಿರಾರು ಸಂಖ್ಯೆಯಲ್ಲಿ ಒಂದೆಡೆ ನುಗ್ಗತೊಡಗಿದರು.

ಅಲ್ಲಿ ಸಿದ್ದರಾಮಯ್ಯ ಕಾಣಿಸಿಕೊಂಡಿದ್ದರು!

ನಮ್ಮ ಕಣ್ಣೆದುರೇ ಕನಿಷ್ಠ ಐನೂರು ಜನರಿಗೆ ಶೇಕ್‌ಹ್ಯಾಂಡ್ ನೀಡಿರಬೇಕು ಸಿದ್ದರಾಮಯ್ಯ. ರಾಜ್ಯದ ನಾನಾ ಮೂಲೆಗಳಿಂದ ಬಂದಿದ್ದ ಜನರಿಗೆ ಸಿದ್ದರಾಮಯ್ಯ ಅವರೇ ಸ್ಟಾರ್. ಅಲ್ಲಿಂದಾಚೆಗೆ ಆ ಬೃಹತ್ ಗುಂಪು ಕದಲಲು ಶುರುವಾಯಿತು. ಅವರೊಂದಿಗೆ ಒಂದೆರಡು ಕಿ.ಮೀ ನಡೆದು ಫೋಟೋ ಕ್ಲಿಕ್ಕಿಸುತ್ತಾ, ಜನರನ್ನು ಮಾತನಾಡಿಸುತ್ತಾ ಸಾಗಿದ ನಮ್ಮ ತಂಡ ಒಮ್ಮೆ ಬದಿಗೆ ಸರಿದು ಹಿಂದಕ್ಕೆ ನೋಡಿದರೆ....



ಆ ಪಾದಯಾತ್ರೆ ಹೈವೇಯಲ್ಲಿ ಎರಡು ಕಿ.ಮೀ ಉದ್ದಕ್ಕೂ ಹರಡಿಕೊಂಡಿದ್ದು ಕಾಣಿಸಿತು. ಪಾದಯಾತ್ರೆಗೆ ಬಂದಿದ್ದವರು ಕೇವಲ ಹಣ-ಊಟ ಸಿಗುತ್ತದೆಂದು ಬಂದಿರಲಿಲ್ಲ ಎನ್ನುವುದು ಗೊತ್ತಾಗುತ್ತಿತ್ತು. ಯಾವುದೇ ರಾಜಕೀಯ ಪಕ್ಷದವರು ನಡೆಸುವ ಸಮಾವೇಶಗಳಿಗೆ ಬಸ್ಸು, ಊಟ, ಖರ್ಚಿಗೆ ದುಡ್ಡು ಕೊಟ್ಟು ಜನರನ್ನು ಕರೆತರುವುದು ಈಗ ಶಾಶ್ವತ ನಿಯಮದಂತಿದೆ. ಆದರೆ ಪಾದಯಾತ್ರೆಯೂ ಇದೇ ಎಂದಾದರೆ ಜನ ಕೇವಲ ಹಣಕ್ಕಾಗಿ ಬರುವ ಮನಸ್ಸು ಮಾಡುವುದಿಲ್ಲವಲ್ಲ. ದಿನಕ್ಕೆ 20 ಕಿ.ಮೀ. ಬಿಸಿಲು-ಮಳೆಯೆನ್ನದೇ ನಡೆಯಬೇಕೆಂದರೆ ಅಂತ ಜನರನ್ನೂ ಬರೀ ದುಡ್ಡಿನ ಆಮಿಷ ತೋರಿಸಿ ಕರೆತರಲಾಗುವುದಿಲ್ಲ. ಕಾಂಗ್ರೆಸ್ ಈ ಬಾರಿ ಸ್ವಲ್ಪಮಟ್ಟಿಗಾದರೂ ತನ್ನ ಹಳೇ ಚಾಳಿ ಬಿಟ್ಟಂತೆ ಕಾಣುತ್ತಿತ್ತು. ಈ ಪಾದಯಾತ್ರೆ ಎರಡು ದಿನದ ಹಿಂದೆ ತುಮಕೂರು ಪ್ರವೇಶಿಸುವಾಗ ಹದಿನೈದು ಸಾವಿರ ಜನ ಸೇರಿದ್ದರಂತೆ!



ಮಹಿಮಾ





ಅದೆಲ್ಲ ಕಾಂಗ್ರೆಸ್ ಪರ ಅನ್ನಲಾಗದಿದ್ದರೂ ಖಂಡಿತವಾಗಿಯೂ ಆಳುವ ಬಿಜೆಪಿಯ ದುರಾಡಳಿತದ ವಿರುದ್ಧ ಅನ್ನಬಹುದು.

ಶಿರಾ ಪಟ್ಟಣ ದಾಟಿದ ನಂತರ ಮತ್ತೆ ಕಾರನ್ನೇರಿದ ನಮ್ಮ ತಂಡ ಪಾದಯಾತ್ರೆಯನ್ನೂ ತಂಡ ದಾಟಿ ನಾಲ್ಕಾರು ಕಿ.ಮೀ ಮುಂದೆ ಹೋದೆವು. ಸುತ್ತಮುತ್ತಲಿನ ಹಳ್ಳಿಗಳಲ್ಲಿನ ಜನರ ಮೂಡ್, ನಿರೀಕ್ಷೆಗಳನ್ನು ನೋಡುವ ಅಪೇಕ್ಷೆಯಿಂದ. ಹಾಗೆ ನಾವು ಹೋಗಿ ತಲುಪಿದ್ದು ಭೂವನಹಳ್ಳಿ ಗೇಟ್‌ಗೆ. ಡಿ.ಬಿ.ಜಯಚಂದ್ರ ಗೆದ್ದು ಬಂದಿರುವ ಕ್ಷೇತ್ರಕ್ಕೆ ಸೇರಿರುವ ಆ ಹಳ್ಳಿಯ ಸಮಸ್ತರೂ ಹೈವೇ ಬಳಿ ಬಂದುನಿಂತಿದ್ದರು. ಇಲ್ಲೇನೋ ನಡೆಯುತ್ತಿದೆ ಅನ್ನುವ ಕುತೂಹಲ. ಬಳ್ಳಾರಿ ರೆಡ್ಡಿಗಳ ವಿರುದ್ಧ ಅಸಹನೆ ಅವರೆಲ್ಲರ ಮನಸ್ಸಿನಲ್ಲಿತ್ತು.

"ರಾಮುಲು ತಲೆ ಬೋಳಿಸಿ ಕೊಂಡಿದ್ದಾನಲ್ಲ, ನಿಮಗೇನನ್ನಿಸುತ್ತೆ?" ಎಂದು ಒಬ್ಬ ವಯಸ್ಸಾದ ರೈತನನ್ನು ಕೇಳಿದೆವು.

"ನಾನೇನ್ ಹೇಳೋದು ಸ್ವಾಮಿ... ಎಲ್ಲಾ ನಿಮ್ಗೇ ಗೊತ್ತು" ಅಂದವನೆ ಮರುಕ್ಷಣ ವಿಪರೀತ ನಗಾಡಿದ. ಆ ನಗೆ 'ರಾಮುಲು ಒಬ್ಬ ಮುಠ್ಠಾಳ' ಎಂಬುದನ್ನೇ ಹೇಳುತ್ತಿತ್ತು. ಅಲ್ಲಿ ಬರುವ ಜನರಿಗಾಗಿ ಟೀ, ಮಜ್ಜಿಗೆ ಕಾದಿದ್ದವು. ಕೆಲ ಹೊತ್ತಿನಲ್ಲೇ ಪಾದಯಾತ್ರೆ ಅಲ್ಲಿಗೆ ತಲುಪಿತಾದರೂ ಯಾರೂ ನಿಲ್ಲಲಿಲ್ಲ. ಬಾಯಾರಿದ್ದವರು ಸಿಕ್ಕಿದ್ದನ್ನು ಕುಡಿದು ಮುಂದೆ ನಡೆದೇ ಬಿಟ್ಟರು. ಅದೊಂಥರಾ ಮ್ಯಾರಥಾನ್ ಓಟಗಾರರು ಓಡುತ್ತಲೇ ದಾರಿಯಲ್ಲಿ



ಬಳ್ಳಾರಿಯತ್ತ ಸಾಗುತ್ತಿರುವ ಜನ



ಕಿಮ್ಮನೆ ರತ್ನಾಕರ, ಕೃಷ್ಣಭೈರೇಗೌಡ



ುವ ನೀರನ್ನು ಕುಡಿದು, ಐಸ್‌ಕ್ಯೂಬ್‌ಗಳನ್ನು ು ಮೇಲೆ ಇರಿಸಿಕೊಂಡು ಓಟ ುವರೆಸುತ್ತಾರಲ್ಲ ಹಾಗಿತ್ತು ಕಾಂಗ್ರೆಗಳ ಓಟದ ಜನಜಂಗುಳಿಯಲ್ಲೇ ಪುಟ್ಟ ನೊಂದಿಗೆ ಸಾಗುತ್ತಿದ್ದ ಮಹಿಳೆಯೊಬ್ಬರು ಕಡೆ ನೋಡಿ ಪರಿಚಯದ ನಗೆ ಬೀರಿದರು. ಬಿಳಿಯ ಹಲ್ಲುಗಳಷ್ಟೇ ಮೊದಲು ಕಾಣಿಸಿತ್ತು. ೋಡಿದಾಗ ಅದು ಮಾಜಿ ಸಂಸದೆ ನಿಯ ಮುಖ! ಕಬ್ಬಿಣದ ಅದಿರಿನಂತೆ ದ್ದ ತೇಜಸ್ವಿನಿ ಒಂದು ವಾರ ಕಾಲ ಬಿಸಿಲಲ್ಲಿ ನಡೆದು ಸಂಸ್ಕರಣೆಯಾದ ನಂತರ ಕಪ್ಪು ತಿರುಗುವ ಕಬ್ಬಿಣದಂತೆಯೇ ಕಪ್ಪಾಗಿ ದ್ದರು.

ಂಚೆ ಉಟ್ಟು ನಡೆದುಬಂದ ವಿರಕ್ತ ರಣಿ ಮಹಿಮಾ ಪಟೇಲ್ ಅಲ್ಲೇ ಕಂಡರು. ಗೆ ಜೇನ್ಸ್ ತೊಟ್ಟು ಹ್ಯಾಟ್ ಧರಿಸಿದ್ದ ಶಾಸಕ ೇಷ ಲಾಡ್ ಬಂದರು. ಅವರನ್ನೆಲ್ಲಾ ಾಡಿಸುತ್ತಾ ನಾವೂ ಪಾದಯಾತ್ರಿಗಳೊಂದಿಗೆ ಾಡಗಿದೆವು. ಆಗ ರಸ್ತೆ ಬದಿಯಲ್ಲಿ ಭಾರತದ ಿದ್ದಿದು ಹಿರಿಯ ಮಹಿಳೆಯೊಬ್ಬರು ನಿಂತಿದ್ದು ತು. ಅಚ್ಚುಕಟ್ಟಾದ ಬಳಿ ಕಾಟನ್‌ಸೀರೆ ಉಟ್ಟು ಗುತ್ತಾ ಹಾಗೆ ನಿಂತಿದ್ದವರು ಮಾಜಿ ಭಾ ಸದಸ್ಯೆ ಬಿಂಬಾ ರಾಯ್ಕರ್. ತಮ್ಮ ಯ ಕೆರಿಯರ್ ಒಂದು ರೀತಿ ಈಗಾಗಲೇ ುಹೋಗಿದ್ದಾಗಲೂ ಸದ್ಯದ ಭವಿಷ್ಯದಲ್ಲಿ ., ಎಂ.ಎಲ್.ಸಿ ಆಗುವ ಸಾಧ್ಯತೆ ್ದಾಗಲೂ ಬಿಂಬಾ ತಾವೂ ಸಹ ಯಾತ್ರಿಯಾಗಿದ್ದರು.

ದೊಂದು ರೀತಿ ವೈಯಕ್ತಿಕ ಲಾಭ-ನಷ್ಟಗಳ ಾರ ಮೀರಿದ ನಡವಳಿಕೆ.

ಂಗ್ರೆಸ್ಸಿಗರ ಈ ಪಾದಯಾತ್ರೆಯೂ ಎರಡು ು ವಿನಿಮಯದಂತಿತ್ತು. ಒಂದು ಮಾನ್ಯರು ಅನೇಕ ರಾಜಕೀಯ ನಾಯಕರನ್ನು ಾಬದರಾಗಿ ನೋಡಿದರು. ಮತ್ತೊಂದೆಡೆ ಕಾಂಗ್ರೆಸ್ ಲೀಡರ್‌ಗಳೂ ಜನರೊಂದಿಗೆ ಾಮುಖಿಯಾಗುತ್ತಿದ್ದರು. ಇದನ್ನೆಲ್ಲಾ ುತ್ತಾ ಓಡಾಡುತ್ತಿದ್ದ ನಮ್ಮ ತಂಡವನ್ನು ಯುವ ಕಾಂಗ್ರೆಸ್ ಕಾರ್ಯಕರ್ತರ ೊಂದು "ನೀವು ಚೆಡ್ಡಿಗಳಾ?" ಎಂದು ಗೇಲಿ ವಂತೆ ಪ್ರಶ್ನಿಸಿತು. ಅವರಿಗೆ ನಾವೇನೂ ಸಲಿಲ್ಲ, ಆದರೂ ಆ ಪ್ರಶ್ನೆಯಿಂದ ನಮಗೆ ಯಾಗಿತ್ತು, ಸಾಧಾರಣ ಕಾಂಗ್ರೆಸ್ ಕರ್ತರಿಗೂ ಈಗ ಚೆಡ್ಡಿಗಳೆಂದರೆ ಯಾರು ುದು ಅರ್ಥವಾಗಿದೆಯಲ್ಲ ಎನ್ನುವ ಾನ ಅದು.

ಾದಯಾತ್ರೆಯಿಂದ ಹಿಂತಿರುಗಿ ಬರುತ್ತಿದ್ದಾಗ ತಂಡದ ಲಕ್ಷ್ಮೀಪತಿ.

ಿದ್ದರಾಮಯ್ಯ ಕಾಂಗ್ರೆಸ್ಸಿನ ನಾಯಕರಾಗಿ ಆಗುತ್ತಿದ್ದಾರೆ. ಈ ಪಾದಯಾತ್ರೆ ಮೂಲಕ ೊಳಗೆ ನಾಳೆ ಹುಟ್ಟಬಹುದಾಗಿದ್ದ ತಪನ್ನು ಸಿದ್ದು ಈಗಲೇ ನಿವಾರಿಸಿಕೊಂಡಿದ್ದಾರೆ" ು.

ುಗೂ ಅದು ನಿಜ ಅನ್ನಿಸಿತು. ಅಷ್ಟೇ ಅಲ್ಲ, ಾದಯಾತ್ರೆಯ ಸೈಡ್ ಎಫೆಕ್ಟ್ ಏನೆಂದರೆ... ಿ ಶ್ರೀರಾಮುಲುನ ಕನ್ನಡ ಭಾಷೆಯೂ ುತ್ತಿದೆ... ಅನಿಸಿತು.

ಬಳ್ಳಾರಿಗೆ ಬರ್‍ತಾರೆ ಏನ್ ಮಾಡ್ತೀರೋ..?



"ಬಳ್ಳಾರಿಗೆ ಬನ್ನಿ, ನೋಡ್ಕೋತೀವಿ" ಎಂದು ಪೊಗರಿನ ಮಾತಾಡಿದ್ದ ರೆಡ್ಡಿ ಗ್ಯಾಂಗ್‌ಗೆ ಮುಖಭಂಗವಾಗಲು ಇನ್ನೇನು ಮೂರು ದಿನವಷ್ಟೇ ಬಾಕಿ.

ಕಳೆದ ಜುಲೈ ಮಧ್ಯಭಾಗದಲ್ಲಿ ಇಡೀ ರಾಜ್ಯದ-ದೇಶದ ಜನ ಗಮನಿಸುತ್ತಿದ್ದಾರೆಂಬುದನ್ನು ಕೇರ್ ಮಾಡದೆ ಈ ರೆಡ್ಡಿಗಳು "ತಾಕತ್ತಿದ್ದರೆ ಬಳ್ಳಾರಿಗೆ ಬನ್ನಿ, ಅಲ್ಲಿ ನೋಡ್ಕೋತೀವಿ" ಎಂದು ಬೆದರಿಕೆ ಹಾಕಿದ್ದರು. ಈ ಧಮಕಿಯ ಮಾತು ಕಾಂಗ್ರೆಸ್‌ನವರಿಗೆ ಹಾಕಿದ್ದಾದರೂ ಅದು ಅಷ್ಟು ಮಾತ್ರವಲ್ಲದೆ ಇಡೀ ಪ್ರಜಾಪ್ರಭುತ್ವಕ್ಕೆ ಹಾಕಿದ ಸವಾಲಿನಂತಿತ್ತು.

ಅವತ್ತು ಬೀದಿ ರೌಡಿಗಳಂತೆ ಕಿರುಚಿದ್ದ ರೆಡ್ಡಿಗಳ ಕಪಾಳಕ್ಕೆ ಹೊಡೆಯುವಂತೆ ಕಾಂಗೆಸ್‌ನವರು ಹಾಗೂ ಜನಸಾಮಾನ್ಯರು ಸಿದ್ದರಾಮಯ್ಯ ನೇತೃತ್ವದಲ್ಲಿ ಬಳ್ಳಾರಿಗೇ ಕಾಲಿಡುತ್ತಿದ್ದಾರೆ.

ಈ ರೆಡ್ಡಿಗಳು 'ಈಗ ಏನ್ ಮಾಡ್ಕೋತಾರೆ?'

ಏನು ಮಾಡಲು ಸಾಧ್ಯ!

ಈ ದುರುಳ ರೆಡ್ಡಿಗಳ ಅಹಂಕಾರವನ್ನು ಅಡಗಿಸಲು ಎಲೆಕ್ಷನ್‌ಗಳಿಂದ ಅಸಾಧ್ಯವಾಗಿತ್ತು, ಕಾಯ್ದೆ-ಕಾನೂನುಗಳಿಂದಲೂ ಸಾಧ್ಯವಿರಲಿಲ್ಲ, ಮುಖ್ಯಮಂತ್ರಿ ಯಡ್ಡಿ-ಆರ್‌ಎಸ್‌ಎಸ್ ಚೆಡ್ಡಿಗಳಿಂದಲೂ ಆಗಿರಲಿಲ್ಲ,

ಅದೀಗ ನಮ್ಮ ಕಣ್ಣೆದುರೇ ಸಾಧ್ಯವಾಗುತ್ತಿದೆ.

ಕೈಲಾಗದವ ಮೈ ಪರಚಿಕೊಂಡ

ಈಗ ಮೊಣಕಾಲ್ಮೂರಿನಲ್ಲಿರುವ ಪಾದಯಾತ್ರೆ ರಾಮಪುರ ಹಾಗೂ ಆಂಧ್ರ ಗಡಿ ದಾಟಿ ಬಳ್ಳಾರಿ ತಲುಪಲಿದೆ. ಯಾವಾಗ ಕಾಂಗ್ರೆಸ್ ಪಾದಯಾತ್ರೆಯ ದಾಳಿಯನ್ನು ನಿಲ್ಲಿಸುವುದು ಅಸಾಧ್ಯ ಎಂದು ಗೊತ್ತಾಯಿತೊ ಅವತ್ತಿನಿಂದಲೇ ರೆಡ್ಡಿ ಗ್ಯಾಂಗ್‌ನಲ್ಲಿ ತಳಮಳ ಶುರುವಾಗಿಬಿಟ್ಟಿತು. ಆ ತಲೆಕೆಟ್ಟ ಮನಸ್ಥಿತಿಯಲ್ಲೇ ಅವರು ತಮ್ಮ ಚಾಕರ ರಾಮುಲುವನ್ನು ಹಿಡಿತರಿಸಿ ಆತನ ತಲೆ ಬೋಳಿಸಿ ಬೀದಿ ಬೀದಿಯಲ್ಲಿ ಓಡಾಡಲು ಬಿಟ್ಟಿದ್ದಾರೆ. ಇದೊಂದು ರೀತಿಯ ಹುಚ್ಚುತನ. ಆದರೆ ಇವರೆಂಥ ಹೀನಬುದ್ಧಿಯ ಜನರೆಂದರೆ ಬಳ್ಳಾರಿಯ ಸಮಸ್ತ ಲಾಡ್ಜ್‌ಗಳ ರೂಂಗಳನ್ನು ಆಗಸ್ಟ್ 8-9 ಕ್ಕೆ ಬುಕ್ ಮಾಡಿಕೊಂಡು ಬಿಟ್ಟಿದ್ದಾರೆ. ಸಮಾವೇಶಕ್ಕೆಂದು ಬರುವ ಜನರಿಗೆ ಉಳಿಯಲು ರೂಂಗಳು ಸಿಗಬಾರದು, ಊಟ, ಸ್ನಾನ, ನೀರು ಏನೂ ಸಿಗದೆ ಪರದಾಡಲಿ ಎನ್ನುವ ವಿಕೃತಿ ಅವರದ್ದು. ಅದಷ್ಟೇ ಅಲ್ಲದೆ ಬಳ್ಳಾರಿ ಟೌನಿನ ಪ್ರಮುಖ ಸ್ಥಳಗಳಲ್ಲಿ ಕಾಂಗ್ರೆಗಳ ಬ್ಯಾನರ್, ಕಟೌಟ್‌ಗಳನ್ನು ನಿಲ್ಲಿಸಲು ಅವಕಾಶವಿರದಂತೆ ಎಲ್ಲೆಡೆ ರಾಮುಲುನ ಕಟೌಟ್‌ಗಳನ್ನು ಈಗಾಗಲೇ ತುಂಬಿಬಿಟ್ಟಿದ್ದಾರೆ. ಬಳ್ಳಾರಿ ಈಗ ಅಕ್ಷರಶಃ ಕುದಿಯುತ್ತಿರುವ ಎಣ್ಣೆಯ ಬಾಂಡಲಿಯಂತಾಗಿದೆ. ಅದರಲ್ಲಿ ಮುಳುಗಿರುವವರಲ್ಲಿ ಸೀದು ಕರಕಲಾಗುವವರು ಯಾರು, ಬೆಂದು ಪಕ್ವವಾಗಿ ತೇಲುವವರ್‍ಯಾರೆಂಬುದನ್ನು ತಿಳಿಯಲು ಹೆಚ್ಚು ದಿನ ಕಾಯಬೇಕಾಗಿಲ್ಲ.

ಒಂಟಿ ಪಿಶಾಚಿ ರೆಡ್ಡಿ

ಕಳೆದ ತಿಂಗಳು ವಿಧಾನಸಭಾ ಅಧಿವೇಶನ ಶುರುವಾದಾಗ, ಅಕ್ರಮ ಗಣಿಗಾರಿಕೆಯ ವಿಚಾರದ ಗದ್ದಲವೆದ್ದಾಗ ಕಾಂಗ್ರೆಸ್-ಜೆಡಿಎಸ್ ವಿರುದ್ಧ ಇಡೀ ಬಿಜೆಪಿ ಪಾಳಯ ಒಗ್ಗಟ್ಟಾಗಿಯೇ ಇತ್ತು, ಆದರೆ ಯಾವಾಗ ರೆಡ್ಡಿ ಗ್ಯಾಂಗ್ ಬೀದಿಗಳಂತೆ ಅಬ್ಬರಿಸಿದರೋ ಆ ಕ್ಷಣವೇ ಬಿಜೆಪಿಗಳಿಗೂ ಇಕ್ಕಟ್ಟಾಗಿ ಹೋಯಿತು. ಕಾಂಗ್ರೆಸ್ ಪಾದಯಾತ್ರೆ ಹೊರಟ ನಂತರ ಆಗಿರುವ ಬೆಳವಣಿಗೆಗಳನ್ನು ಆಧರಿಸಿ ಹೇಳುವುದಾದರೆ ಆಳುವ ಬಿಜೆಪಿಯೊಳಗೆ ಈಗ ಎರಡು ಪಾಲಿಸಿ ಇದ್ದಂತಿದೆ.

ಒಂದು ರೆಡ್ಡಿಗಳ ವಿರುದ್ಧ ಕಾಂಗ್ರೆಸ್‌ನ ದಂಡಯಾತ್ರೆಯನ್ನು ರೆಡ್ಡಿಗಳೇ ತಮ್ಮ ಸ್ವಂತ ಬಲದ ಮೇಲೆ ಎದುರಿಸಲಿ ಎನ್ನುವ ನೀತಿ. ಇದರಲ್ಲಿ ರೆಡ್ಡಿಗಳಿಗೆ ಒದೆ ಬಿದ್ದು ಕೊಂಚ ದುರ್ಬಲರಾದರೆ ಅಲ್ಲಿಂದಾಚೆಗೆ ಅವರನ್ನು ಪಳಗಿಸುವುದು ಸುಲಭ ಎನ್ನುವ ಲೆಕ್ಕಾಚಾರ ಬಿಜೆಪಿಗಿದೆ. ಇನ್ನೊಂದು ನೀತಿ ಏನೆಂದರೆ ಕಾಂಗ್ರೆಸ್ಸಿಗರ ಪಾದಯಾತ್ರೆಯಿಂದ ಬರೀ ರೆಡ್ಡಿಗಳದ್ದು ಮಾತ್ರವಲ್ಲ, ಬಿಜೆಪಿಯ ಮಾನ ಮರ್ಯಾದೆಯೂ ಹರಾಜಾಗುತ್ತಿರುವುದರಿಂದ ಅದನ್ನು ಉಳಿಸಿಕೊಳ್ಳಲು ಪ್ರಯತ್ನಿಸಬೇಕೆಂಬುದು. ಈ ತಂತ್ರದ ಭಾಗವಾಗಿಯೇ ಬಿಜೆಪಿ ಸಮಾವೇಶಗಳನ್ನು ಮಾಡಲು ಹೊರಟಿದೆ. ಬಿಜೆಪಿಗಳ ಈ ದ್ವಿಮುಖ ನೀತಿಯಲ್ಲಿ ಯಾವುದು ಸಕ್ಸಸ್ ಆದರೂ ಕೊನೆಗೆ ಲಾಸ್ ಆಗುವುದು ರೆಡ್ಡಿಗಳಿಗೆ ಮಾತ್ರ. ಇದನ್ನು ಅರ್ಥ ಮಾಡಿಕೊಂಡಿರುವ ರೆಡ್ಡಿ ಗ್ಯಾಂಗ್‌ಗೆ ಈಗ ಯಡ್ಡಿ ಕಂಡರೆ ಕುದಿಕುದಿಯುವ ರೋಷ. ಆದರೆ ಏನು ಕಿಸಿಯಲಾಗದ ಅಸಹಾಯಕತೆಯೂ ಅವರನ್ನು ಬಾಧಿಸುತ್ತಿದೆ. ಇದರೊಂದಿಗೆ ಆರ್‌ಎಸ್‌ಎಸ್‌ನ ಭ್ರಷ್ಟ ನಾಯಕ ಮೈ.ಚ. ಜಯದೇವ್ ಗುಟುರು, ನರ್ಸ್ ರೇಣುಕಾಚಾರ್ಯನ ಗೇಲಿಯ ಮಾತುಗಳೂ ರೆಡ್ಡಿ ಕ್ಯಾಂಪಿನೊಳಗೆ ಕಿರಿಕಿರಿ ಹುಟ್ಟಿಸುತ್ತಿವೆ. ಇದೆಲ್ಲದರಿಂದ ಬೇಸುತ್ತಿರುವ ರೆಡ್ಡಿಗಳಿಗೆ ಈಗ ತಮ್ಮ ಬಳ್ಳಾರಿ ಕೋಟೆ ಉಳಿಸಿಕೊಂಡರೆ ಸಾಕಪ್ಪ ಎನ್ನುವಂತಾಗಿದೆ.

ಆದರೆ ಇಡೀ ಬಳ್ಳಾರಿಯೇ ಅವರಪ್ಪನ ಮನೆಯ ಆಸ್ತಿಯೇನೋ ಎನ್ನುವಂತೆ 'ಬಳ್ಳಾರಿಗೆ ಬನ್ನಿ ನೋಡ್ಕೋತೀವಿ' ಅಂದಿದ್ದರಲ್ಲ, ಇಂಥ ಮಾತು ಅಂದು ಬಿಡುವುದು ಸಲೀಸು, ಆದರೆ ಆಡಿದ ಮಾತನ್ನು ದಕ್ಕಿಸಿಕೊಳ್ಳಬೇಕೆಂದರೆ ಅಷ್ಟು ಸಲೀಸಲ್ಲ. ಈ ಸವಾಲನ್ನೆತ್ತಿಕೊಂಡಿರುವ ಸಿದ್ದರಾಮಯ್ಯ ನಾಳಿದ್ದು ಆಗಸ್ಟ್ 9ರಂದು ಬಳ್ಳಾರಿಗೇ ಬರುತ್ತಿದ್ದಾರೆ. ಅವರ ಹಿಂದೆ ಕನಿಷ್ಠ ಎರಡು ಲಕ್ಷ ಜನರೂ ಲಗ್ಗೆ ಹಾಕುತ್ತಿದ್ದಾರೆ.



ತಾಕತ್ತಿದ್ದರೆ ಬಳ್ಳಾರಿಗೆ ಬನ್ನಿ ಅಂದಿದ್ದನಲ್ಲವೆ ಜನಾರ್ದನ ರೆಡ್ಡಿ? ಈಗ ಸಿದ್ದರಾಮಯ್ಯ ಬಂದೇ ಬರುತ್ತಿದ್ದಾರೆ.

'ಏನು ಮಾಡ್ಕೋತೀರೊ' ಎಂದು ಜನ ಕೇಳುತ್ತಿದ್ದಾರೆ.

ಉತ್ತರಿಸುವ ತಾಕತ್ತು ಅವನಿಗಿದೆಯಾ? ●


ಬಳ್ಳಾರಿಯೆಂಬ ಕ್ರೈಂ ನಗರ

ಕೊನೆಗೂ ಕಾಂಗ್ರೆಸ್ ಎಚ್ಚೆತ್ತುಕೊಂಡು 'ನಾಡ ರಕ್ಷಣೆಗೆ ನಡಿಗೆ' ಮೂಲಕ ಬಳ್ಳಾರಿಯ ಗಣಿಕಳ್ಳರ ವಿರುದ್ಧ ಸಮರ ಸಾರಿದೆಯಷ್ಟೇ. ಇದರಿಂದ ಬೆಚ್ಚಿಬಿದ್ದಿರುವ ಬಳ್ಳಾರಿಯ 'ಅಡವಿದೊಂಗಲು'ಗಳು ತಮ್ಮ 'ಚೇಲಾ' ಶ್ರೀರಾಮುಲುವಿಗೆ ಬೋಳು ಹೊಡೆಸಿ 'ಸ್ವಾಭಿಮಾನ ಯಾತ್ರೆ' ಮಾಡುತ್ತಿವೆ. ತಾವೆಲ್ಲ ಬಳ್ಳಾರಿ ಇಂಪ್ರೂವ್ ಮಾಡಿದ್ದೇವೆಂದು ಹಾರಾಡುತ್ತಿವೆ.

ನಿಜಕ್ಕೂ ಇವತ್ತು ಬಳ್ಳಾರಿ ಅಭಿವೃದ್ಧಿ ಆಗಿದೆಯೇ? ಅಲ್ಲಿ ನಿತ್ಯ ನಡೆಯುವ ಕ್ರೈಂಗಳ ಹಿಂದೆ ಈ ರೆಡ್ಡಿ-ರಾಮುಲುಗಳ ಅಭಯಹಸ್ತವೇ ಇರುವುದರಿಂದ ಅಲ್ಲಿ 'ಪಾಪಿಗಳ ಲೋಕ'ದ ಪರಮ ಚಂಡಾಳರನ್ನು ಪೊಲೀಸರು ಮುಟ್ಟುತ್ತಲೇ ಇಲ್ಲ.

ಬಳ್ಳಾರಿಯಲ್ಲಿವತ್ತು ಜನಸಾಮಾನ್ಯರು ನ್ಯಾಯಕ್ಕಾಗಿ ಧ್ವನಿ ಎತ್ತುವುದೇ ಅಪರಾಧವಾಗಿದೆ. ಬಳ್ಳಾರಿ ಲೋಕಲ್‌ನಲ್ಲಿ ನಿತ್ಯ ನಡೆಯುವ ಕ್ರೈಂಗಳ ಹಿಂದೆ ರೆಡ್ಡಿ-ರಾಮುಲುಗಳ ಭಂಟರೇ ಇರುತ್ತಾರೆ. ಪೊಲೀಸರು ಇವರನ್ನು ಮುಟ್ಟುವುದೇ ಇಲ್ಲ.

ಕಳೆದ ವಾರವಷ್ಟೇ ಬಳ್ಳಾರಿಯಲ್ಲಿ ಒಂದು ಮಗುವಿನ 'ನರಬಲಿ' ಜರುಗಿತು. ಇದರ ಹಿಂದೆ ಬಳ್ಳಾರಿಯ 'ಪ್ರತಿಷ್ಠಿತ' ಗಣಿಮಾಲೀಕರ ಕೈವಾಡವಿದೆ ಎಂಬ 'ಮಾತು' ಪ್ರಚಲಿತದಲ್ಲಿದೆ. ಆದರೆ ಪೊಲೀಸರು ಇಲ್ಲಿಯವರೆಗೆ ಯಾವ



ಕ್ರಮವನ್ನೂ ಕೈಗೊಂಡಿಲ್ಲ. ತಮ್ಮ ಗಣಿ ಸಾಮ್ರಾಜ್ಯ ಉಳಿಸಿಕೊಳ್ಳಲು ಇಂಥದೊಂದು ನರಬಲಿ ಅವಶ್ಯ ಎಂದು ನಂಬಿದ ಮೂರ್ಖ ಗಣಿ ಮಾಲೀಕರು ಈ ನರಬಲಿಗೆ ಕೈಹಾಕಿದ್ದಾರೆ.

ಮತ್ತೆ ಕಳೆದ ವಾರವಷ್ಟೇ ಸುಧಾಕರ್ ಎಂಬ ಮೈನಿಂಗ್ ಟ್ರಾನ್ಸ್‌ಪೋರ್ಟ್ ಉದ್ಯಮಿಯ ಕೊಲೆಯಾಗಿತ್ತು, ಇಲ್ಲೂ ಯಾರ ಬಂಧನವೂ ಆಗಿಲ್ಲ. ಅಂದರೆ ಮತ್ತದೇ ರೆಡ್ಡಿ-ರಾಮುಲುಗಳ ಕೈವಾಡ!

ಕಳೆದ ತಿಂಗಳು ಪೊಲೀಸ್ ಕಾನ್ಸ್‌ಟೇಬಲ್ ಒಬ್ಬ ತನ್ನ ಪ್ರಿಯತಮೆ (ಭಾವಿ ಪತ್ನಿ)ಯೊಂದಿಗೆ ವಾಕ್ ಹೋಗುತ್ತಿದ್ದಾಗ ಡ್ರೀಮ್ಸ್ ಸ್ಕೂಲ್ ಸಮೀಪ ಅಡ್ಡಹಾಕಿದ ರಾಮುಲು ಭಂಟರು ಆ ಹುಡುಗಿಯನ್ನು ಹೊತ್ತೊಯ್ದು ರೇಪ್ ಮಾಡಿದರು. ಮಹಾನಂದಿಪಟ್ಟಣಂ ಎಂಬ ಏರಿಯಾದ ಈ ರೇಪಿಸ್ಟರು ರಾಮುಲುನ ಎಂಜಲು ತಿಂದು ಬದುಕುವವರೇ ಆಗಿದ್ದಾರೆ. ಪೊಲೀಸರ ಕೈಗೆ ಸಿಕ್ಕಿಬಿದ್ದ ಈ ರೇಪಿಸ್ಟರು ತಾವು 15–20 ರೇಪ್ ಮಾಡಿದನ್ನು ಒಪ್ಪಿಕೊಂಡಿದ್ದಾರೆ. ಆದರೆ ಇವರ ರಕ್ಷಣೆಗೆ ರಾಮುಲು ನಿಲ್ಲುವುದರಿಂದ ಈ ಪಾಪಿಗಳು ಸೇಫಾಗಿ ತಿರುಗುತ್ತಾ, ಕಂಡಕಂಡ ಕೂಲಿ ಹೆಣ್ಣುಗಳ ಮೇಲೆ ದೌರ್ಜನ್ಯ ನಡೆಸುತ್ತಲೇ ಇದ್ದಾರೆ.

ಮೂಡಿಗೆರೆ: ಶಿಕ್ಷಣ ಇಲಾಖೆಯ ಹೆಗ್ಗಣ ಶನಿ ಶರತ್ಚಂದ್ರ!



ಮೂಡಿಗೆರೆಗೆ ಅದೇನು ಶಾಪವೋ ಗೊತ್ತಿಲ್ಲ, ಶರತ್ಚಂದ್ರನೆಂಬ ಧನದಾಹಿ ಶಿಕ್ಷಣಾಧಿಕಾರಿ ಈ ತಾಲ್ಲೂಕಿಗೆ ಕಾಲಿಟ್ಟ ಬಳಿಕ ಬಹುತೇಕ ಶಾಲೆಗಳಲ್ಲಿ ಹೆಗ್ಗಣಗಳ ಕಾಟ ಶುರುವಾಗಿದೆ. ಎಂಎಲ್ಎಗೆ ಮೂರು ಲಕ್ಷ, ಜಿ.ಪಂ. ಅಧ್ಯಕ್ಷರಿಗೆ ಮತ್ತು ಡಿಡಿಪಿಐಗೆ ತಲಾ ಒಂದೊಂದು ಲಕ್ಷ, ಇಲಾಖೆ ತಪಾಸಣೆಗೆ ಬರುವ ಅಧಿಕಾರಿಗಳಿಗೆ, ಮಾಹಿತಿ ಕೇಳಿ ಎದುರಾಡುವವರಿಗೆ, ಪಿಳ್ಳೆ ನೆಪ ಹುಡುಕಿ ಎಗರಾಡುವವರಿಗೆ ತಲಾ ಐವತ್ತು ಸಾವಿರ... ಹೀಗೆ ಉದ್ದುದ್ದ ಪಟ್ಟಿ ಮಾಡಿಟ್ಟು ವಿವಿಧ ಶಾಲೆಗಳಿಂದ ಈತ ಸುಲಿಯುತ್ತಿರುವ ಪರಿಯಂತೂ ಭೀಕರ.

ಶರತ್ಚಂದ್ರ ಮೂಲತಃ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರದವನು. ಮೂಡಿಗೆರೆಗೆ ಬಂದ ಹೊಸತರಲ್ಲಿ ಶಾಸಕ ಡಿ.ಎನ್. ಜೀವರಾಜ್‌ನ ದೋಸ್ತು ಸಿ.ಟಿ. ರವಿಯ ಪರಮಾಪ್ತ ಎಂ.ಪಿ. ಕುಮಾರಸ್ವಾಮಿಗೆ ನಂಬಿಕಸ್ತ ಅಂತ ಪೋಸು ಕೊಡಹತ್ತಿದ. ನಂತರ ಕಸುಬುದಾರಿಕೆ ಶುರುವಿಟ್ಟ ಶರತ್ಚಂದ್ರ ಸೋಮಾರಿ ಶಿಕ್ಷಕರಿಂದ ಅನಾಮತ್ತು ಮೂವತ್ತು ಸಾವಿರ ಪೀಕಿಕೊಂಡು ಬಿಆರ್‌ಸಿ ಮತ್ತು ಸಿಆರ್‌ಸಿಗಳಾಗಿ ನೇಮಿಸಿದ. ಇವರಲ್ಲಿ ಚಂದ್ರಪ್ಪ ಎಂಬಾತ ರಾಜ್ಯ ಮಟ್ಟದ ದಿನ ಪತ್ರಿಕೆಯೊಂದಕ್ಕೆ ವರದಿಗಾರನಾಗಿದ್ದಾನೆ. ಈತ ದಿನವಿಡೀ ಸಭೆ ಸಮಾರಂಭಗಳಲ್ಲಿ ಫೋಟೋ ಕ್ಲಿಕ್ಕಿಸುತ್ತಾ ಕಾಲ ಕಳೆಯುತ್ತಾನೆ. ಸಂಪನ್ಮೂಲ ಕೇಂದ್ರಕ್ಕೆ ತುರಿಕೊಂಡಿರುವ ಬಹುತೇಕರಿಗೆ ಪಾಠ ಹೇಳಿಕೊಡುವ ತಾಕತ್ತಿಲ್ಲ, ಶಾಲೆಗಳಿಗೆ ಭೇಟಿ ಕೊಡುವ ಹಕೀಕತ್ತೂ ಇಲ್ಲ.

ಮೂಡಿಗೆರೆ ಬಾಲಕರ ಪದವಿ ಪೂರ್ವ ಕಾಲೇಜು ಹೈಸ್ಕೂಲು ವಿಭಾಗದ ಹಿಂದಿ ಶಿಕ್ಷಕ ಕಂ ಕ್ಲಸ್ಟರ್ ಶಿಕ್ಷಣಾಧಿಕಾರಿಯಾಗಿದ್ದ ರಮೇಶಪ್ಪ ಎಂಬಾತ ಏ.೨೦ ರಿಂದ ಮೇ.೨೫ರವರೆಗೆ ಕಾರಣವಿಲ್ಲದೇ ಗೈರುಹಾಜರಿಯಾದರೂ ಮಾಸಿಕ ವೇತನ ಯಥಾಪ್ರಕಾರ ಹರಿದುಹೋಗಿದೆ. ಈ ರಮೇಶಪ್ಪ ಇಬ್ಬರು ಹೆಂಡಿರ ಮುದ್ದಿನ ಗಂಡ ಮತ್ತು ಮೂವರು ಮಕ್ಕಳ ತಂದೆ. ಒಬ್ಬಳನ್ನು ವರಿಸಿ ಇಬ್ಬರು ಮಕ್ಕಳಾದ ಬಳಿಕ ಫ್ಯಾಮಿಲಿ ಪ್ಲಾನಿಂಗ್‌ಗೆ ಒಳಪಡುವ ಶಿಕ್ಷಕರಿಗೆ ಸರಕಾರ ನೀಡುವ ಮಾಸಿಕ ಭತ್ಯೆಯನ್ನು ನಿಯಮಬಾಹಿರವಾಗಿ ಈತ ಪಡೆಯುತ್ತಿದ್ದಾನೆ.

ಸೌಭಾಗ್ಯ ಎಂಬ ಬಗ್ಗಸಗೋಡು ಶಾಲಾ ಮುಖ್ಯ ಶಿಕ್ಷಕಿ ಶಾಲೆಯಲ್ಲಿ ಕನ್ನ ಕೊರೆದು ಸ್ಥಳೀಯರಿಗೆ ಸಿಕ್ಕಿಹಾಕಿಕೊಂಡಾಗ ಶರತ್ಚಂದ್ರ ಮತ್ತು ಅಕ್ಷರ ದಾಸೋಹದ ಸಂಯೋಜಕ ರುದ್ರಪ್ಪ ಖುದ್ದಾಗಿ ಹೋಗಿ ಆಕೆಯನ್ನು ಬಿಡಿಸಿ ಬದುಕಿಸಿದ್ದ. ಕಳಸ ಶಾಲೆಯ ಶಿಕ್ಷಕ ಕಲ್ಲೇಶಪ್ಪ ಎಂಬಾತ ವಿದ್ಯಾರ್ಥಿಗಳಿಲ್ಲದೆ ಮುಚ್ಚಿರುವ ಪಕ್ಕದ ಹೊಸೂರು ಸರಕಾರಿ ಕಿ.ಪ್ರಾ. ಶಾಲೆಯ ಎಸ್‌ಡಿಎಂಸಿ ಖಾತೆಯಲ್ಲಿದ್ದ ಹದಿನೈದು ಸಾವಿರ ಹಣವನ್ನು ನಕಲಿ ಸಹಿ ಬಳಸಿ ಪಡೆದಿದ್ದ. ನಂಜುಂಡನೆಂಬ ಶಿಕ್ಷಕ ದಿಣ್ಣೇಕೆರೆ ಶಾಲಾ ಕಟ್ಟಡದ ಕಾಮಗಾರಿ ನಡೆಸಿದ್ದ. ಬೆಟ್ಟದಮನೆ ಶಾಲೆಗೆ ನಂಜುಂಡನೆಂಬ ಮತ್ತೊಬ್ಬ ಶಿಕ್ಷಕ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಹಾಜರಾಗಿಲ್ಲ, ಅಂಗಡಿ ಶಾಲೆಯ ವಿಠ್ಠಲ ಮೂರ್ತಿ, ಬಿಳ್ಳೂರು ಶಾಲೆಯ ಕೆ.ಎಂ. ರವಿ ಕರ್ತವ್ಯಕ್ಕೆ ಹಾಜರಾಗದೆ ಮಾಸಿಕ ವೇತನವನ್ನು ಅಡೆತಡೆಯಿಲ್ಲದೆ ಪಡೆಯುತ್ತಿರುವ ಮರ್ಮ ತಿಳಿಯಬೇಕಿದೆ.

ಶಾಲೆಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಗಮನಿಸಿದರೆ ದಿಗಿಲಾಗುತ್ತದೆ. ಚಿಣ್ಣರ ಅಂಗಳ ಕಾರ್ಯಕ್ರಮದ ಎಪ್ಪತ್ತೈದು ಸಾವಿರ ಮೊತ್ತ ಸಂಪೂರ್ಣ ಮುಳುಗಡೆಯಾಗುತ್ತಿದೆ. ಇದಕ್ಕಾಗಿ ಶಾಲೆ ಬಿಟ್ಟವರ ಬದಲು ಶಾಲೆಗಳಲ್ಲಿ ದಾಖಲಾತಿ ಹೊಂದಿರುವ ಮಕ್ಕಳನ್ನು ಕುಳ್ಳಿರಿಸಿ ಯಾಮಾರಿಸುತ್ತಿದ್ದಾರೆ. ದಲಿತ ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್, ಶಾಲಾ ಬ್ಯಾಗ್ ವಿತರಣೆಯಲ್ಲಿ ಖೊಟ್ಟಿ ಕೊಟೇಶನ್ ತಂದಿಟ್ಟು ಸಂಪೂರ್ಣ ಅಕ್ರಮ ನಡೆಸಲಾಗಿದೆ.

ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ಎಂಬ ಸರ್ಕಾರದ ಭರವಸೆ ಹೆಗ್ಗಣಗಳ ಪಾಲಾಗುತ್ತಿದೆ. ಹಳಿಕೆ ಮತ್ತು ಗೋಣಿಬೀಡು ಪ್ರಾಥಮಿಕ ಶಾಲೆಗಳಲ್ಲಿ ಮುಖ್ಯ ಶಿಕ್ಷಕರು ಕಳೆದ ವರ್ಷದ ವಿದ್ಯಾರ್ಥಿ ವೇತನವನ್ನು ಮುಳುಗಿಸಿದ್ದಾರೆ. ಶಾಲೆಗಳು ಮತ್ತು ಹೈಸ್ಕೂಲುಗಳಲ್ಲಿ ಕ್ಯಾಶ್‌ಬುಕ್, ಪಾಸ್‌ಬುಕ್, ಓಚರ್‌ಗಳು ಒಂದಕ್ಕೊಂದು ತಾಳೆಯಾಗುತ್ತಿಲ್ಲ. ಹಲವಾರು ವರ್ಷಗಳಿಂದ ಕೆಲವು ಶಾಲೆಗಳಲ್ಲಿ ಇಲಾಖೆ ತಪಾಸಣೆ ನಡೆದಿಲ್ಲ, ಗೋಣಿಬೀಡು ಮತ್ತಿತರ ಕೆಲವು ಶಾಲೆಗಳಲ್ಲಿ ಹಿರಿಯ ಅಧಿಕಾರಿಗಳ ಭೇಟಿಯ ವರದಿ ಪುಸ್ತಕದ ಹಾಳೆಗಳನ್ನು ಹರಿದು ಹಾಕಿರುವುದು ಕಂಡು ಬಂದಿದೆ. ಜಾವಳಿ ಮತ್ತು ಚಿನ್ನಿಗಾ ಸಹಿ.ಪ್ರಾ. ಶಾಲೆಯಲ್ಲಿ ಅವ್ಯವಹಾರ ನಡೆದಿದ್ದು ಐದು ಸಾವಿರ ನುಂಗಿದ ಬಳಿಕ ಶರತ್ಚಂದ್ರ ತಪಾಸಣಾ ವರದಿಗೆ ಸಹಿ ಮಾಡಿದ್ದಾನೆ.

ತಿಂಗಳ ಹಿಂದೆ ಶಿಕ್ಷಕರ ನಿಯೋಜನೆಗೆ ಕೌನ್ಸಲಿಂಗ್ ನಡೆಸಲಾಗಿತ್ತು, ಆಕಾಂಕ್ಷಿಗಳಿಂದ ತಲಾ ಐದರಿಂದ ಹತ್ತು ಸಾವಿರ ಹಣವನ್ನು ಕಚೇರಿಯ ಕೆಲಸಗಾರ ಈಶ್ವರ ಎಂಬಾತನಿಂದ ವಸೂಲಿ ಮಾಡಿಸಿದ ನಂತರವೇ ಶರತ್ಚಂದ್ರ ನಿಯೋಜನೆ ಮಾಡಿದ್ದಾನೆ. ಹಣ ಕೊಡಲು ಒಪ್ಪದ ಶಿಕ್ಷಕರಿಗೆ ನೋಟೀಸ್ ಜಾರಿಗೊಳಿಸಿ ಸತಾಯಿಸುತ್ತಿರುವ ಅನೇಕ ದಾಖಲಾತಿಗಳಿವೆ. ಗಂಭೀರ ಆರೋಪಗಳಿರುವ ಶಿಕ್ಷಕರಿಂದ ಸುಂಕ ಪಡೆದು ಮತ್ತದೇ ದಾರಿಗೆ ಕಳಿಸುತ್ತಿದ್ದಾನೆ.

ಇವತ್ತಿಗೂ ಬಿಆರ್‌ಸಿಯಿಂದ ನೀಡುವ ತರಬೇತಿಗಳಲ್ಲಿ ಶಿಕ್ಷಕರಿಗೆ ಸರಿಯಾದ ರೀತಿಯಲ್ಲಿ ಭತ್ಯೆಗಳನ್ನು ಒದಗಿಸುತ್ತಿಲ್ಲ, ಎಸ್‌ಎಸ್‌ಎ ಹಣವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಶಾಲೆಗಳಲ್ಲಿ ನಡೆಸಲಾಗುವ ಕ್ರೀಡಾಕೂಟಗಳಿಗೆ ಒದಗಿ... ಹಣಕಾಸಿನ ದುರುಪಯೋಗ ನಡೆಯುತ್ತಿದೆ. ಉಳಿ... ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ಬಡ ವಿದ್ಯಾರ್ಥಿ... ತಟ್ಟೆಯಿಂದ ಅನ್ನವನ್ನು ಕದಿಯುತ್ತಿದ್ದಾರೆ. ಬಿಸಿಯೂ... ಪರಿಕರ ಖರೀದಿಯಲ್ಲಿ ಖೊಟ್ಟಿ ಕೊಟೇಶನ್ ತಯಾ... ಲಾಗಿದೆ. ಬಹುತೇಕ ಎಲ್ಲಾ ಕೊಟೇಶನ್‌ಗಳಲ್ಲಿಯೂ ಒ... ತರಹದ ಬರಹಗಳಿವೆ. ಆಹಾರ ಪದಾರ್ಥಗಳ ಖರೀದಿ... ಅಕ್ರಮ ನಡೆಯುತ್ತಿದೆ. ಹೀಗೆ ಶಾಲೆಗಳಲ್ಲಿ ಶಿಕ್ಷಕರು ಲಕ್ಷಾಂ... ರೂ.ಗಳನ್ನು ಸ್ವಾಹ ಮಾಡಲು ಶರತ್ಚಂದ್ರ ಕುಮ್ಮ... ನೀಡುತ್ತಾನೆ. ಕಳೆದ ವರ್ಷ ಇಂತಹ ಅನೇಕ ಆರೋಪಗಳ... ಮಾಡಿದ್ದ ಶಿಕ್ಷಕರ ಸಂಘದ ಅಧ್ಯಕ್ಷ ತೇಜಸ್, ಕಾರ್ಯದ... ಬಸವರಾಜು ಮತ್ತು ಜಿಲ್ಲಾ ಸಂಘದ ಉಪಾಧ್ಯಕ್ಷ ಭುವನೆ... ಎಂಬವರನ್ನು ಅವಮಾನತುಗೊಳಿಸಿದ್ದ. ತನ್ನ ವಿರ... ಎಗರಾಡುವವರನ್ನು ಇದೇ ರೀತಿಯಲ್ಲಿ ಶಿಕ್ಷಿಸುವುದ... ಬೆದರಿಸುವುದು ಮುಂದುವರಿದಿದೆ.

ಒಕ್ಕಳ್ಳಿ ಶಾಲಾ ಶಿಕ್ಷಕ ಸಣ್ಣನಿಂಗಾ ನಾಯ್ಕ 200... ಮೇ 22ರಿಂದ 27ರವರೆಗೆ ಕೊಟ್ಟಿಗೆಹಾರದಲ್ಲಿ ನ... ನಲಿಕಲಿ ತರಬೇತಿ ಕಾರ್ಯಕ್ರಮದಲ್ಲಿ ಹಾಜರಾಗಿದ್ದ. ಅ... ವೇಳೆ ಮೈಸೂರಿನ ಕಾಲೇಜೊಂದರಲ್ಲಿ ನಡೆದ ಪ... ಪರೀಕ್ಷೆ ಬರೆದು ಉತ್ತೀರ್ಣನಾಗಿದ್ದಾನೆ. ಏಕಕಾಲದಲ್ಲಿ ಬ... ವ್ಯಕ್ತಿ ಎರಡು ಕಾರ್ಯಗಳನ್ನು ನಿರ್ವಹಿಸಲು ಹ... ಸಾಧ್ಯವಾಯಿತೆನ್ನುವುದನ್ನು ಆತನೇ ಖುದ್ದಾಗಿ ಹೇಳಬೇಕಾಗಿ... ತರಬೇತಿಗೆ ಹಾಜರಾಗಿದ್ದಕ್ಕೆ ಈತನಿಗೆ ಶಿಕ್ಷಣ ಇಲಾಖೆ... ಇ.ಎಲ್ ಭತ್ಯೆಯನ್ನು ನೀಡಿ ಸಲುಹಿದೆ.

ಎಂ.ಕೆ.ಶ್ರೀನಿವಾಸ್ ಎಂಬಾತ 2008ರ ಟಿಸಿ... ಪರೀಕ್ಷೆಯನ್ನು ಬೆಂಗಳೂರಿನಲ್ಲಿ ಬೇರೊಬ್ಬನಿಂದ ಬರೆ... ಅಂತಿಮ ದಿನ ಆ.20ರಂದು ತಪಾಸಣೆ ನಡೆ... ಅಧಿಕಾರಿಗಳಿಗೆ ಪರೀಕ್ಷೆ ಬರೆಯುತ್ತಿರುವುದು ನಕಲಿ ... ಎಂಬ ವಿಷಯ ಬಹಿರಂಗವಾಗಿ ಶ್ರೀನಿವಾಸನನ್ನು ಡಿಬಾ... ಮಾಡಲಾಗಿತ್ತು. ಆದರೆ ಶ್ರೀನಿವಾಸ ಮಾತ್ರ ಟಿಸಿ... ಪಾಸು ದೃಢೀಕರಣ ಪತ್ರ ತಂದಿದ್ದ. ಪರೀಕ್ಷೆ ಬರೆಯ... ಕುಳಿತಿದ್ದವನಿಗೆ ಎರಡು ವರ್ಷಗಳ ಕಾಲ ಜೈಲು ... ವಿಧಿಸಲಾಗಿತ್ತಾದರೂ ಅದೇ ಸಮಯದಲ್ಲಿ ಶ್ರೀನಿ... ಬಣಕಲ್ ಬಳಿಯ ಹಳೇಹಳ್ಳಿ ಶಾಲೆಯಲ್ಲಿ ಶಿಕ್ಷಕ ವೃತ್ತಿಯ... ಪ್ರಾರಂಭಿಸಿದ್ದ!

ಈ ಎಲ್ಲಾ ಪ್ರಕರಣಗಳ ರೂವಾರಿಯಾಗಿರುವ ಶರತ್... ಶಿಕ್ಷಣ ಇಲಾಖೆಯಲ್ಲಿ ಪಸಂದಾಗಿ ಭೋಜನಕ್ಕೆ ಕುಳಿತಿದ... ಈತನನ್ನು ಹೀಗೇ ಬಿಟ್ಟರೆ ಈ ವ್ಯಾಪ್ತಿಯ ಶಾಲೆಗ... ಹೆಗ್ಗಣಗಳ ಗುಡಾಣವಾಗುವುದು ಖಚಿತ.

• ಅಜೀಜ್ ಕಿರುಗುಂ...

ಕೊಳ್ಳೇಗಾಲ: ಕುರುಬನಕಟ್ಟೆ ಮಠದಲ್ಲೊಬ್ಬ ಕಳ್ಳ ರೇಚಣ್ಣ!




ಚೆನ್ನಲಿಂಗಯ್ಯ ಗದ್ದುಗೆಯ ಇಂದಿನ ಚಿತ್ರ...

ಧರೆಗೆ ದೊಡ್ಡವರು ಮಠದ ಕೊಳ್ಳೇಗಾಲ ಶಾಖೆಯಾದ ಕುರುಬನಕಟ್ಟೆ ಗದ್ದಿಗೆ ಮಠ ಕುತಂತ್ರಿಗಳ ಅಖಾಡದಂತಾಗಿದೆ. ಪೂಜೆ, ಪುನಸ್ಕಾರಗಳಲ್ಲಿ ತಲ್ಲೀನರಾಗಬೇಕಿದ್ದ ಇಲ್ಲಿನ ಕೆಲ ಪೂಜಾರಿಗಳು ಹಣ ಹೊಡೆಯುವ ಹಪಾಹಪಿಯಿಂದ ಕುದಿಯ ಹತ್ತಿದ್ದಾರೆ. ರೇಚಣ್ಣನೆಂಬ ಕಳ್ಳ ಪೂಜಾರಿ ಈ ದುಷ್ಟ ಕೆಲಸದ ಸಾರಥ್ಯ ವಹಿಸಿಕೊಂಡು ಮಠದ ಪಾವಿತ್ರ್ಯಕ್ಕೆ ಮಸಿ ಬಳಿಯುತ್ತಿದ್ದಾನೆ.

ಕೊಳ್ಳೇಗಾಲ ತಾಲ್ಲೂಕಿನಾದ್ಯಂತ ಕುರುಬನಕಟ್ಟೆಯ ಚೆನ್ನಯ್ಯ-ಲಿಂಗಯ್ಯರ ಗದ್ದಿಗೆಗೆ ಪೂಜ್ಯ ಸ್ಥಾನಮಾನವಿದೆ. ತೀರಾ ಬಡಬಗ್ಗರಲ್ಲೂ ಸಹ 'ಇದು ನಮ್ಮ ಮಠ' ಎಂಬಂಥ ಸ್ವಾಭಿಮಾನವನ್ನೂ ಹುಟ್ಟಿಸಿದೆ. ಧರೆಗೆ ದೊಡ್ಡವರು ಮಹಾಸಂಸ್ಥಾನ ಮಠದ ಐದು ಶಾಖೆಗಳಲ್ಲಿ ಒಂದಾದ ಈ ಮಠ ಅಪಾರ ಭಕ್ತ ಸಮೂಹವನ್ನೂ ಹೊಂದಿದೆ. ಹೀಗೆ ಈ ಮಠವನ್ನು ಜನಪರಗೊಳಿಸಿದ್ದರ ಹಿಂದೆ ಮಹಾಸಂಸ್ಥಾನದ ಆಡಳಿತಾಧಿಕಾರಿಯಾಗಿದ್ದ ದಿವಂಗತ ಬಿ.ಎಲ್. ಸದಾನಂದರಾಜೇ ಅರಸ್‌ರ ಶ್ರಮ ದೊಡ್ಡದಿದೆ.

ದುರಂತವೆಂದರೆ, ಇದೀಗ ಮಠದ ಮುಖ್ಯ ಪೂಜಾರಿಯಾಗಿರುವ ಕಳ್ಳ ರೇಚಣ್ಣ ಮೇಲ್ಕಂಡ ಇತಿಹಾಸಕ್ಕೆ ಕೆಸರೆರಚಲು ನಿಂತಿದ್ದಾನೆ. ಸದಾನಂದರಾಜೇ ಅರಸರು ಮಠ ಕಟ್ಟಿದ ಬಳಿಕ ಕೆಂಪನಪಾಳ್ಯದ ಮಹದೇವಪ್ಪ ಎಂಬವರನ್ನು ಪೂಜಾರಿಕೆಗೆ ನೇಮಿಸಿದ್ದರು. ಮಹದೇವಪ್ಪ ಸಹಾಯಕ್ಕಿರಲಿ ಅಂತ ತನ್ನ ಹಿರೇಮಗ ರೇಚಣ್ಣನನ್ನು ಹತ್ತಿರ ಬಿಟ್ಟುಕೊಳ್ಳಲಾರಂಭಿಸಿದರು.

ಹುಟ್ಟಾ ವಂಚಕನಾದ ರೇಚಣ್ಣನ ಮಿದುಳು ಪೂಜಾರಿಕೆಯ ಕಡೆ ಸ್ಪಂದಿಸಲಿಲ್ಲ, ಬದಲಾಗಿ ತಣ್ಣಗೆ ಕುತಂತ್ರ ಹೆಣೆಯಲಾರಂಭಿಸಿತು! ಇದಕ್ಕೆ ಸರಿಯಾಗಿ ಮಹದೇವಪ್ಪನವರೂ ಕಾಲವಾದರು. ಆದಾಗಲೇ ಮಠದ ವಸ್ತುಗಳನ್ನು ಕದ್ದು ಕೆಲ ಬಾರಿ ಸಿಕ್ಕಿಬಿದ್ದಿದ್ದ ರೇಚಣ್ಣ ತಂದೆಯ ಸ್ಥಾನವನ್ನು ಆಕ್ರಮಿಸಿಕೊಂಡ. ಇದಾಗಿ ಕೆಲ ಕಾಲದ ಬಳಿಕ ಸದಾನಂದರಾಜೇ ಅರಸರೂ ತೀರಿಕೊಂಡರು.



ಸದಾನಂದರಾಜೆ ಅರಸ್




ವರುಣಲಿಂಗರಾಜೆ ಅರಸ್

ನಂತರ ತಿರಬೋಕಿ ರೇಚಣ್ಣನ ದಂಧೆ-ದಗಲ್ಬಾಜಿಗಳಿಗೆ ಯಾವ ಅಡೆತಡೆಯೂ ಇಲ್ಲದಂತಾಯ್ತು, ಮಠಕ್ಕೆ ಬರುವ ಭಕ್ತರನ್ನು ತರಹೇವಾರಿ ರೀತಿಯಲ್ಲಿ ಸುಲಿಯಲು ಶುರುವಿಟ್ಟ. ಅಷ್ಟೇ ಅಲ್ಲದೆ ಹುಂಡಿಗೂ ಡಿಫರೆಂಟ್ ಆಗಿ ಕನ್ನ ಕೊರೆಯಹತ್ತಿದ. ಹುಂಡಿಯ ಕಿಂಡಿಗೆ ಬಟ್ಟೆ ತುರುಕಿ ದುಡ್ಡು ಒಳಹೋಗದಂತೆ ತಡೆಯುತ್ತಿದ್ದ ಕ್ರಿಮಿನಲ್ ರೇಚಣ್ಣ ದಿನಂಪ್ರತಿ ಜೋಳಿಗೆ ತುಂಬಿಕೊಳ್ಳಲಾರಂಭಿಸಿದ.

ಹೀಗೆ ಕಳ್ಳ ಹಣದ ರುಚಿ ಹತ್ತಿಸಿಕೊಂಡ ರೇಚಣ್ಣ ವಂಚನೆಯನ್ನು ಪೂಜಾ ವಿಧಿವಿಧಾನಗಳವರೆಗೂ ವಿಸ್ತರಿಸಿಕೊಂಡ. ಈತ ಪೂಜೆ ಮಾಡುವ ತೋರುಗದ್ದಿಗೆ ಮಠದೊಳಗೆ ಕೇವಲ ನಿಂಬೆಹಣ್ಣು ಮಂತ್ರಿಸಿ ಕೊಡುವುದಕ್ಕೇ ನೂರಾರು ರೂಪಾಯಿ ಕೀಳಲು ಶುರುವಿಟ್ಟ. ಇನ್ನು ಕಾಯಿ ಒಡೆಯುವುದರಿಂದ ಹಿಡಿದು, ಯಂತ್ರ ಕಟ್ಟಿಸಿಕೊಳ್ಳುವ ಆಚರಣೆಯವರೆಗೆ ಪ್ರತಿಯೊಂದರಲ್ಲೂ ಹಣ ಕೀಳತೊಡಗಿದ. ಇನ್ನು ಆಡಳಿತ ಮಂಡಳಿಯನ್ನೂ ಲೆಕ್ಕಿಸದೆ ಕೊಳ್ಳದೆ ಚಪ್ಪಲಿ ಕಾವಲಿಗೆ ಹಾಗೂ ವಾಹನ ನಿಲುಗಡೆಗೂ ಕೂಪನ್ ನಿಗದಿಪಡಿಸಿ ಸುಲಿಗೆ ಮಾಡುತ್ತಿದ್ದಾನೆ.

ಇಂಥ ಕಳ್ಳ ಪೂಜಾರಿ ರೇಚಣ್ಣ ಮಠದ ಹಣ ಕದ್ದು ಕದ್ದೇ ಲಕ್ಷಾಂತರ ರೂ.ಗಳಿಗೆ ಒಡೆಯನಾಗಿದ್ದಾನೆ. ಹಣದ ಹಿಂದೆ ಬಿದ್ದ ಮನುಷ್ಯ ಎಂಥಾ ಕೀಳು ಮಟ್ಟಕ್ಕಿಳಿಯಲೂ ಹೇಸುವುದಿಲ್ಲ ಅಂತೊಂದು ಮಾತಿದೆ. ಇದಕ್ಕೆ ಪಕ್ಕಾ ಉದಾಹರಣೆಯಂತಿರುವ ರೇಚಣ್ಣ ತನ್ನಪ್ಪನ ಫೋಟೋ ಇಟ್ಟು, ಅದಕ್ಕೊಂದು ಪೂಜೆ ಅಂತ ಫಿಕ್ಸ್ ಮಾಡಿ ಅದರಲ್ಲೂ ದುಡ್ಡೆಸಲು ಹೊಗುತ್ತಿದ್ದಾನೆ!



ರೇಚಣ್ಣ

ಆದರೀತನಿಗೆ ಹೊಸದಾಗಿ ಆಡಳಿತಾಧಿಕಾರಿಯಾಗಿ ಬಂದ ವರುಣ್ ಲಿಂಗರಾಜೇ ಅರಸ್ ಅಡ್ಡಗಾಲಾಗಿ ಪರಿಣಮಿಸಿದ್ದಾರೆ. ಈ ವರುಣ್ ಸದಾನಂದರಾಜೇ ಅರಸ್‌ರ ಮಗ. ತಂದೆಯ ಕಾಲಾನಂತರ ಆಡಳಿತ ಚುಕ್ಕಾಣಿ ಹಿಡಿದ ವರುಣ್‌ಗೀಗ ಕಳ್ಳ ಪೂಜಾರಿ ರೇಚಣ್ಣನ ಆಟಾಟೋಪದಿಂದ ಮಠವನ್ನು ಕಾಪಾಡುವುದೇ ಸವಾಲಾಗಿ ಪರಿಣಮಿಸಿದೆ. ಕಳ್ಳ ಕಾಸಿನಿಂದ ಕೊಬ್ಬಿ ಹೋಗಿರುವ ರೇಚಣ್ಣ ವರುಣ್ ವಿರು... ದಿನನಿತ್ಯ ಪಿತೂರಿ ನಡೆಸುತ್ತಾ ಇಲ್ಲಸಲ್ಲದ... ಹಬ್ಬಿಸುತ್ತಾ ತಿರುಗಾಡಹತ್ತಿದ್ದಾನೆ.

ಈ ಮಠದ ಅಗಾಧ ಆಮದನಿ ನೋ... ಕಂಗಾಲಾಗಿರುವ ರೇಚಣ್ಣ ಅದೆಲ್ಲವನ್ನು ತ... ತಿರುಗಿಸಿಕೊಳ್ಳಲು ಹವಣಿಸುತ್ತಿದ್ದಾನೆ. ತಾ.ಪ... ಸದಸ್ಯನಾಗಿರುವ ಪುಟ್ಟಣ್ಣನೆಂಬ ಸ್ವಜಾ... ಬಂಧುವನ್ನು ಮುಂದಿಟ್ಟುಕೊಂಡು ಸ್ಕೆ... ಅನ್ನೂ ಸಿದ್ಧಪಡಿಸುತ್ತಿದ್ದಾನೆ. ಮಠವನ್ನು ಇಬ... ಮಾಡುವುದು ಅಥವಾ ಆಡಳಿತ ಮಂಡ... ಯನ್ನು ಪಕ್ಕಕ್ಕೆ ಸರಿಸಿ ತಾನೇ ಇಡೀ ಮಠ... ಮೇಲೆ ಹಿಡಿತ ಸಾಧಿಸುವುದು ಈತ... ಪ್ರಮುಖ ಅಜೆಂಡಾ.

ಇದರನ್ವಯ ರೇಚಣ್ಣ ತನ್ನ ದುಷ್ಕೃತ... ಸಾಥ್ ನೀಡುವ ಘಟಿಂಗ ಪೂಜಾರಿಗಳ... ಮಠದೊಳಕ್ಕೆ ಬಿಟ್ಟುಕೊಳ್ಳುತ್ತಿದ್ದಾನೆ. ರೇಚ... ತನ್ನ ಸಹೋದರರಾದ ನಟರಾಜು ಹಾಗ... ಮಲ್ಲಿರಾಜು ಎಂಬಿಬ್ಬರನ್ನು ತೋರುಗದ್ದಿ... ಹಾಗೂ ಚನ್ನಲಿಂಗಯ್ಯರ ಗದ್ದಿಗೆಗೆ ಪೂಜಾರಿ... ಮಾಡಲು ನೇಮಿಸಿದ್ದಾನೆ. ಇಡೀ ಮಠದಲ್ಲಿ ತನ್ನ ಅಧಿಪ... ಸಾಧಿಸು ವುದು ಇದೆಲ್ಲದರ ಹಿಂದಿರುವ ಹುನ್ನಾರ.

ಇದೆಲ್ಲದರಿಂದಾಗಿ ಮಠದೊಳಗಿನ ಧಾರ್ಮಿ... ವಾತಾವರಣ ಮರೆಯಾಗುತ್ತಿದೆ. ಭಕ್ತರ ಹಣವೂ ... ರೇಚಣ್ಣನ ತಿಜೋರಿ ಸೇರುತ್ತಿದೆ. ವಿಪರ್ಯಾಸವೆಂದ... ಪಾಪದ ಭಕ್ತರಿಗೆ ಈ ಹುನ್ನಾರಗಳು ಅರ್ಥವಾಗುತ್ತಿ... ಇನ್ನೂ ಅದು ಅರ್ಥವಾಗದೇ ಹೋದರೆ, ಕಳ್ಳ ಪೂಜಾ... ರೇಚಣ್ಣನ ಬುಡಕ್ಕೊಂದು ಹೊರ ಹಾಕದಿದ್ದರೆ, ಕುರುಬ... ಕಟ್ಟೆ ಗದ್ದಿಗೆ ನಾಮಾವಶೇಷಗೊಳ್ಳುವುದು ಖಚಿತ!


• ಕೊಳ್ಳೇಗಾಲ ಚಿಕ್ಕಮಾಲಿ...



ಭಕ್ತರಿಗೆ ನಿಂಬೆಯನ್ನು ಮಂತ್ರಿಸಿ ಕೊಡುತ್ತಿರುವ ರೇಚಣ್ಣ...

ಬಾಗಲಕೋಟೆ: ನಿರಾಣಿ, ಕಾರಜೋಳ ಸಾಮ್ರಾಜ್ಯದಲ್ಲಿ ದಲಿತರು ಕಾಲಕಸ

ಬಾಗಲಕೋಟೆ ಜಿಲ್ಲೆಯ ಬಹುತೇಕ ಹಳ್ಳಿಗಳಲ್ಲೀಗ ದಲಿತರ ಮೇಲೆ ವ್ಯಾಪಕವಾಗಿ ದೌರ್ಜನ್ಯಗಳು ನಡೆಯುತ್ತಿವೆ. ಸುಮಾರು ಹಳ್ಳಿಗಳಲ್ಲಿ ದಲಿತ ಕುಟುಂಬಗಳಿಗೆ ಬಹಿಷ್ಕಾರ ಹಾಕಲಾಗಿದೆ. ಸವರ್ಣೀಯ ಹುಡುಗಿಯರ ಜೊತೆ ಪ್ರೀತಿ ಮಾಡಿದ್ದಕ್ಕೆ ದಲಿತ ಯುವಕರ ಕೊಲೆಗಳಾಗಿವೆ. ಅಷ್ಟೇಕೆ, ಆಕಸ್ಮಿಕವಾಗಿ ಸವರ್ಣೀಯ ಹೆಣ್ಣುಮಗಳಿಗೆ ಕೈ ತಾಗಿಸಿದ್ದಕ್ಕೂ ದಲಿತರ ಮೇಲೆ ಹಲ್ಲೆಗಳು ಜರುಗುತ್ತಿವೆ.



ಚುನಾವಣೆಯಲ್ಲಿ ಸಂಪೂರ್ಣವಾಗಿ ತನ್ನನ್ನು ಬಿಜೆಪಿಗೆ ಸಮರ್ಪಿಸಿಕೊಂಡ ಬಾಗಲಕೋಟೆ ಜಿಲ್ಲೆಯ ನಿತ್ಯ ಕತೆಯಿದು. ಇಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆಸುತ್ತಿರುವ ಪಾಳೇಗಾರ ಮೇಲ್ಜಾತಿಗಳವರನ್ನು ಪೊಲೀಸರು ಮುಟ್ಟುವುದಿಲ್ಲ, ಏಕೆಂದರೆ ಕೈಗಾರಿಕಾ ಸಚಿವ, ಬೀಳಗಿ ಶಾಸಕ ಮುರುಗೇಶ ನಿರಾಣಿಯ ಜಾತಿಪ್ರೇಮ, ದಲಿತ ದ್ವೇಷಗಳೇ ಹಾಗಿವೆ. ಆದರೆ ದಲಿತರ ಪರ ನಿಲ್ಲಬೇಕಾಗಿದ್ದ ಜಿಲ್ಲಾ ಉಸ್ತುವಾರಿ ಸಚಿವ, ಸ್ವತಃ ದಲಿತನೂ ಆಗಿರುವ ಗೋವಿಂದ ಕಾರಜೋಳ ಎಂಬ ಅಸಮಾನಗೇಡಿ ನಿರಾಣಿಯ ಆಟಾಟೋಪಗಳಿಗೆಲ್ಲ ಮೌನ ಸಮ್ಮತಿ ನೀಡುತ್ತಾ ದಲಿತದ್ರೋಹಿಯಾಗುತ್ತಿದ್ದಾನೆ.

ಹೀಗೆ ಈ ನಿರಾಣಿ, ಕಾರಜೋಳರ ಚಡ್ಡಿ ಸಾಮ್ರಾಜ್ಯದಲ್ಲಿ ನಡೆಯುತ್ತಿರುವ ದಲಿತ ದೌರ್ಜನ್ಯಗಳ ಪೈಕಿ ಕೆಲವನ್ನಿಲ್ಲಿ ದಾಖಲಿಸಿದ್ದೇವೆ.

ಬೀಳಗಿ: ದಲಿತನ ಕೊಲೆ

ಇತ್ತೀಚೆಗಷ್ಟೇ ನಿರಾಣಿಯ ಬೀಳಗಿ ತಾಲ್ಲೂಕಿನ ಯತ್ನಟ್ಟಿ ಗ್ರಾಮದಲ್ಲಿ ನಾಗಪ್ಪ ಮಾದರ ಎಂಬ ದಲಿತನನ್ನು ಮೇಲ್ಜಾತಿಯ ಬಿಜೆಪಿ ಕಾರ್ಯಕರ್ತರು ಕೊಂದು ಹಾಕಿ, ತಾವೇ ಕೊಂದದ್ದಾಗಿ ಬಹಿರಂಗವಾಗಿ ಹೇಳಿಕೊಂಡು ತಿರುಗಿದರೂ ಪೊಲೀಸರು ಆರೋಪಿಗಳ ತಂಟೆಗೆ ಹೋಗಲಿಲ್ಲ. ಕೊಲೆಯಾದ ನಾಗಪ್ಪ ಮಾದರನ ತಂಗಿ ನಿಜಲಿಂಗವ್ವ ಎಂಟು ಜನರ ವಿರುದ್ಧ ದೂರು ನೀಡಿದ್ದರೂ, ನಿರಾಣಿಯ ಮನೆಯಾಳಂತಿರುವ ಇನ್ಸ್‌ಪೆಕ್ಟರ್ ಪಾಟೀಲ್ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಕಾರಣ ಪ್ರಮುಖ ಕೊಲೆ ಆರೋಪಿ ಹನುಮಂತ ಬುಗಡಿ ಬಿಜೆಪಿಯ ಪ್ರಮುಖ ಕಾರ್ಯಕರ್ತ!



ಸಂಗಮೇಶ್

ಹನುಮಂತ ಬುಗಡಿ ಮನೆಯಲ್ಲಿ ಕೆಲಸಕ್ಕಿದ್ದ ಮೃತ ನಾಗಪ್ಪ ಮಾದರನನ್ನು ಬುಗಡಿಯ ಮಗಳು ವಿಜಯಲಕ್ಷ್ಮಿ ಪ್ರೀತಿಸಿದ್ದಳು, ಇಬ್ಬರೂ ದೇಹಸುಖ ಪಡೆದಿದ್ದರು. ಇದು ಗೊತ್ತಾದ ಬುಗಡಿ ಮಗಳನ್ನು ನಾಗಪ್ಪ ಗಾಣಿಗೇರ ಅನ್ನೋನಿಗೆ ಮದುವೆ ಮಾಡಿದ. ನಂತರವೂ ವಿಜಯಲಕ್ಷ್ಮಿಯ ಹಳೆಯ 'ದೋಸ್ತಿ' ಮುಂದುವರೆದಿತ್ತು, ಇದು ಗೊತ್ತಾದ ಗಂಡ ನಾಗಪ್ಪ ಗಾಣಿಗೇರ ಮಾವ ಹನುಮಂತ ಬುಗಡಿ ಜೊತೆ ಸ್ಕೆಚ್ ರೂಪಿಸಿ ನಾಗಪ್ಪ ಮಾದರನನ್ನು ಕೊಚ್ಚಿ ಹಾಕಿಬಿಟ್ಟರು.



ರವಿಸೂರ್ಯನಾರಾಯಣ

ವಿಜಯಲಕ್ಷ್ಮಿ ಮೂಲಕ ಬಾದರದಿನ್ನಿ ಪುನರ್ವಸತಿ ಕೇಂದ್ರದ ಸಮೀಪದ ಕಟಕನಮಡಿಗೆ ನಾಗಪ್ಪ ಮಾದರನನ್ನು ಕರೆಸಿಕೊಂಡ ಬುಗಡಿಯ ತಂಡ ಆತನನ್ನು ಹಿಗ್ಗಾಮುಗ್ಗಾ ಥಳಿಸಿ ಹೆಣವಾಗಿಸಿ, ಆತನ ಶವವನ್ನು ಟ್ರ್ಯಾಕ್ಟರ್‌ನಲ್ಲಿ ಹೊತ್ತೊಯ್ದು ಕೊಲ್ಹಾರ ಕೃಷ್ಣಾ ನದಿಗೆ ಬಿಸಾಕಿದೆ. ಬುಗಡಿಯ ಈ ಕೊಲೆಗಡುಕ ತಂಡದಲ್ಲಿ ಅಳಿಯ ನಾಗಪ್ಪ ಗಾಣಿಗೇರ, ವಿಠ್ಠಲ ಗಾಣಿಗೇರ, ಸಂಗಪ್ಪ ತಮ್ಮಲ, ಸೋಮಪ್ಪ ಬುಗಡಿಗಳಿದ್ದರು.

ಈ ಕೊಲೆ ಕುರಿತು ಮಾದರನ ತಂಗಿ ನೀಡಿದ ದೂರಿಗೆ 'ಡೋಂಟ್ ಕೇರ್' ಅಂದ ಇನ್ಸ್‌ಪೆಕ್ಟರ್ ಪಾಟೀಲ್ ಹೇಳಿಕೇಳಿ ನಿರಾಣಿ ಸಹೋದರ, ಚಿಕ್ಕಹುಳ ಸಂಗಮೇಶ ನಿರಾಣಿಯ ಪರಮ ಚೇಲಾ. ಹೀಗಾಗಿ ಇವತ್ತು ಕೊಲೆಗಡುಕ ಬಿಜೆಪಿಯ ಕಾರ್ಯಕರ್ತರು ರಾಜಾರೋಷವಾಗಿ ತಿರುಗುತ್ತಿದ್ದಾರೆ. ದೂರು ನೀಡಿದ ಮೃತ ಮಾದರನ ತಂಗಿಗೂ ಈಗ ಜೀವಭಯ. ದಲಿತ ಮಂತ್ರಿ ಕಾರಜೋಳ್ ಎಂಬ ದಲಿತದ್ರೋಹಿ ನಿರಾಣಿಯ ಪವರ್ ಮುಂದೆ ಬಗ್ಗಿ ಸಲಾಮು ಹೊಡೆಯುತ್ತಾ ಕೂತರೆ ದಲಿತರಿಗೆ ರಕ್ಷಣೆ ನೀಡುವವರಾದರೂ ಯಾರು?

ಕೈ ಟಚ್ಚಾಗಿದ್ದಕ್ಕೆ ಮೈಗೆಲ್ಲ ಬಾಸುಂಡೆ

ಏನೋ ಅವಸರದಲ್ಲಿ ಸವರ್ಣೀಯ ಹೆಣ್ಣು ಮಗಳಿಗೆ ಕೈತಾಗಿದ ಕಾರಣಕ್ಕೆ ದಲಿತನೊಬ್ಬನ ಮೈತುಂಬಾ ಬಾಸುಂಡೆ ಏಳುವಂತೆ ಹೊಡೆದಿದ್ದಾರೆ ಮೇಲ್ಜಾತಿಯ ರಾಕ್ಷಸರು. ಇಲ್ಲೂ ಪೊಲೀಸರು ಗಪ್‌ಚುಪ್.

ಕಳೆದ ತಿಂಗಳು ಜಮಖಂಡಿ ತಾಲ್ಲೂಕಿನ ಮರಗುದ್ದಿ ಗ್ರಾಮದ ದಲಿತ ಹುಡುಗ ಬಸಪ್ಪ ಮಾದರ ಜಮಖಂಡಿಯಿಂದ ತನ್ನೂರಿಗೆ ರಾತ್ರಿ ಕೊನೆಯದಾಗಿ ಹೊರಡುವ ಆಟೋ ಹಿಡಿಯುವ ಭರದಲ್ಲಿ ಆತನ ಕೈ ಅಲ್ಲೇ ಕುಳಿತಿದ್ದ ನಾಯ್ಕರ್ ರತ್ನವ್ವ ಎಂಬಾಕೆಗೆ ತಾಗಿದೆಯಷ್ಟೇ. ಇದನ್ನೇ ಭಾರಿ ರಂಪ ಮಾಡಿದ ಮರಗುದ್ದಿಯ ಮೇಲ್ಜಾತಿಯವರು ಬಸಪ್ಪ ಮಾದರ ಮತ್ತು ಆತನ ಜೊತೆಗಿದ್ದ ಇನ್ನೊಬ್ಬ ದಲಿತ ಹನುಮಂತ ಕಡಕೋಳನಿಗೆ ಅಹೋರಾತ್ರಿ ಕಂಬಕ್ಕೆ ಕಟ್ಟಿ ಥಳಿಸಿ ಮೃಗತ್ವ ಮೆರೆದಿದ್ದಾರೆ. ಇದನ್ನು ಪ್ರಶ್ನಿಸಿದ್ದಕ್ಕೆ ದಲಿತರ ಎಂಭತ್ತು ಕುಟುಂಬಗಳಿಗೆ ಬಹಿಷ್ಕಾರ ಹಾಕಿದ್ದಾರೆ. ಈ ಬಗ್ಗೆ ವಿಚಾರಿಸಿ ಎಂದು ಎಸ್.ಪಿ. ಅಭಿಷೇಕ್ ಗೋಯಲ್‌ಗೆ ದಲಿತ ಸಂಘಟನೆಗಳು ಮನವಿ ಮಾಡಿದವು. ಆದರೆ ಮತ್ತೆ ನಿರಾಣಿಯ ಭೂತ ಅಡ್ಡ ಬಂತು. ಈ ಸಲ ನಿರಾಣಿಯ ಅಳಿಯ ಪ್ರಕಾಶ್ ರಾಮಗೊಂಡ ತಲೆ ಹಾಕಿ, ಎಸ್.ಪಿ. ಯವರು ವಿಚಾರಣೆ ಮಾಡದಂತೆ ತಡೆದುಬಿಟ್ಟ. ಕೊನೆಗೆ ರಾಜ್ಯಪಾಲರಿಗೆ ದೂರು ಹೋದ ನಂತರ, ಬೆಳಗಾವಿಯಿಂದ ತಂಡವೊಂದು ಬಂದು ವರದಿ ನೀಡಿತು. ಬಹಿಷ್ಕಾರ ನಡೆದಿರುವುದನ್ನು ಈ ವರದಿ ಎತ್ತಿ ತೋರಿಸಿದರೂ ಜಿಲ್ಲಾಡಳಿತ ಏನೂ ಮಾಡುತ್ತಿಲ್ಲ, ಬದಲಿಗೆ, ಮಹಿಳೆಯ ಮಾನಭಂಗಕ್ಕೆ ಯತ್ನಿಸಿದರು ಎಂದು ದೌರ್ಜನ್ಯಕ್ಕೀಡಾದ ಹುಡುಗರ ಮೇಲೆ ಕೇಸು ಜಡಿಯಲಾಗಿದೆ! ಈ ಕುರಿತು ಮತ್ತೊಬ್ಬ ನಿರಾಣಿ ಚೇಲಾ ಇನ್ಸ್‌ಪೆಕ್ಟರ್ ಸಂಕದನನ್ನು ಪ್ರಶ್ನಿಸಿದರೆ, "ಈ ಹೊಲ್ಯಾರೇ ಅಷ್ಟು ಬಡ್ಡಿ. ಅಟ್ರಾಸಿಟಿ ಕೇಸ್ ಹಿಡ್ದು ಆಟ ಆಡ್ತಾರ. ಮೊದ್ಲು ಅವು ಕಾಂಗ್ರೆಸ್, ಬಿಎಸ್‌ಪಿ ಬಿಟ್ಟು ಬಿಜೆಪಿ ಕಡೆ ಬಂದ್ರ ಅವ್ರಿಗೆ ಚಲೋ ಆಗ್ತೈತಿ" ಎಂದು ಚಡ್ಡಿ ಮಂತ್ರ ಜಪಿಸಿದ್ದಾನೆ. ಅಂದಂತೆ, ಜಮಖಂಡಿಯ ಎಂಎಲ್‌ಎ ಪಕ್ಕಾ ಆರೆಸ್ಸೆಸ್ ಚಡ್ಡಿ ಶ್ರೀಕಾಂತ್ ಕುಲಕರ್ಣಿ. ಇಲ್ಲಿ ಕೈ ತಾಗಿದರೂ ಮೈ ಮುರಿವ ಮನಸ್ಸುಗಳದ್ದೇ ಅಬ್ಬರ. ಕುಲಕರ್ಣಿ, ನಿರಾಣಿಗಳ ಈ ಪಕ್ಷಪಾತ ನೋಡಿಕೊಂಡು ಬದುಕುವ ಕಾರಜೋಳ್‌ಗೆ ಮರ್ಯಾದೆಯಂತೂ ಇಲ್ಲವೇ ಇಲ್ಲ.

ಬಹಿಷ್ಕಾರ ಎಂಬ ಅಸ್ತ್ರ


ಯಾವುದೇ ಜಾತಿ, ವ್ಯಕ್ತಿಗೆ ಸಾಮಾಜಿಕ ಬಹಿಷ್ಕಾರ ಹಾಕುವುದೇ ಕಾನೂನು ವಿರೋಧಿ ಆಚರಣೆ. ಆದರೆ ನಿರಾಣಿಯ ಬೀಳಗಿಯಲ್ಲಿ ಪ್ರಾಣಿಗಳಂತಾಗಿರುವ ದಲಿತರ ಮೇಲೆ ನಿತ್ಯವೂ ಬಹಿಷ್ಕಾರ ಹೇರಲಾಗುತ್ತಿದೆ.

ಬೀಳಗಿ ತಾಲ್ಲೂಕಿನ ಶಿರಗುಪ್ಪ ಗ್ರಾಮದ ಕೇರಿಯ ದಲಿತ ಹುಡುಗ ದ್ಯಾವಪ್ಪ ಮತ್ತು ಕುರುಬರ ಹುಡುಗಿ ತುಳಸವ್ವ ಲವ್ ಮಾಡಿ ಓಡಿಹೋದರು. ಇದು ದಲಿತರ ಸೊಕ್ಕು ಎಂದುಕೊಂಡ ಊರ ಜನ ಪ್ರೇಮಿಗಳಿಬ್ಬರನ್ನು ಎಳೆದು ತಂದು, ದಲಿತ ಹುಡುಗ ದ್ಯಾವಪ್ಪನನ್ನು ಹಿಗ್ಗಾಮುಗ್ಗಾ ಥಳಿಸಿದರಷ್ಟೇ ಅಲ್ಲ, ದ್ಯಾವಪ್ಪನ ಈ 'ಲವ್ ತಪ್ಪಿಗೆ' ಊರಿನ ಎಲ್ಲ (ಐವತ್ತು) ದಲಿತ ಕುಟುಂಬಗಳಿಗೆ ಬಹಿಷ್ಕಾರ ಹಾಕಿದರು. ಈ ಮಸಲತ್ತಿನ ಹಿಂದಿದ್ದವರು ನಿರಾಣಿಯ ಬಿಜೆಪಿ ಚೇಲಾಗಳಾದ ಶ್ರೀಮಂತ ಹಿರೇಮಠ ಮತ್ತು ರಾವುತಯ್ಯ ನಿಂಗೊಳ್ಳಿ ಎಂಬ ಮನೆಹಾಳರು. ಈಗಲೂ ಅಷ್ಟೇ, ಪೊಲೀಸರು ಬಹಿಷ್ಕಾರದ ಬೆಂಬಲಿಗರು! ಇದು ನಿರಾಣಿಯ ಪಾಳೇಗಾರಿಕೆ ರಾಜ್ಯ!



ಇನ್ನು ಬಾವಲತ್ತಿ ಎಂಬ ಗ್ರಾಮದಲ್ಲಿ ಒಂದಿಲ್ಲೊಂದು ಕಾರಣಕ್ಕೆ ದಲಿತರ ಮೇಲೆ ಬಹಿಷ್ಕಾರ ಬೀಳುತ್ತಲೇ ಇರುತ್ತದೆ. ಮೇಲ್ಜಾತಿಯವರ ಹೊಲದಲ್ಲಿ ಓಡಾಡಿದ್ದಕ್ಕೆ, ಸಂತೆಯಲ್ಲಿ ಮೊದಲಿಗೆ ತರಕಾರಿ ಬುಟ್ಟಿ ಮುಟ್ಟಿದ್ದಕ್ಕೆ, ಕೆರೆ ನೀರು ಕುಡಿದಿದ್ದಕ್ಕೆ, ಮೇಲ್ಜಾತಿಯ ಹೆಣ್ಮಗಳ ಪಕ್ಕ ನಿಂತಿದ್ದಕ್ಕೆ.... ಹೀಗೆ ಇಲ್ಲಿ ಬಹಿಷ್ಕಾರಗಳ ಮೇಲೆ ಬಹಿಷ್ಕಾರಗಳು ಜರುಗುತ್ತಲೇ ಇವೆ. ಇಲ್ಲಿ ಈ ತರಹದ ಪಾಳೆಗಾರಿಕೆ ನಡೆಸುತ್ತಿರುವವನು ನಿರಾಣಿಯ ಚಾಂಡಾಲ ಶಿಷ್ಯ ಮಹಾಂತೇಶ್ ಅಂಗಡಿ.


ಹಾಗೆಯೇ ಕೊಲೂರು ಎಂಬ ಪುಟ್ಟಹಳ್ಳಿಯಲ್ಲಿ ಒಂದಿಷ್ಟು ಭೂಮಿ ಹೊಂದಿರುವ ದಲಿತ ಕುಟುಂಬಗಳು ಸರ್ಕಾರದಿಂದ ಪಂಪ್‌ಸೆಟ್ ಸೌಲಭ್ಯ ಪಡೆದಿದ್ದವು. ಆದರೆ ಈ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಸಿಗದಂತೆ ಮೇಲ್ಜಾತಿಯವರು ಕುತಂತ್ರ ಮಾಡುತ್ತಲೇ ಇದ್ದಾರೆ. ಇದೇ ಗ್ರಾಮದಲ್ಲಿ ಬಿಜೆಪಿಯ ಚನ್ನವೀರಪ್ಪ ನಂದಶೆಟ್ಟಿ ಎಂಬಾತನ ಹೊಲದಲ್ಲಿ ಅಡ್ಡಾಡಿದ ತಪ್ಪಿಗೆ ಭೀಮಪ್ಪ ಬೀಳಗಿ ಎಂಬ ದಲಿತನನ್ನು ಹಿಡಿದು ಥಳಿಸಿದ್ದಲ್ಲದೇ, ಆತನ ಕುಟುಂಬದ ನಾಲ್ವರ ಮೇಲೆ 307 ಕೇಸ್ ಜಡಿದು, ಐದಾರು ತಿಂಗಳು ಜೈಲಿಗಟ್ಟಲಾಗಿತ್ತು. ದಲಿತ ಸಂಘಟನೆಗಳ ಒತ್ತಡಕ್ಕೆ ಮಣಿದು ನಂದಶೆಟ್ಟಿಯ ಮೇಲೆ ಕಾಟಾಚಾರಕ್ಕೆ ಅಟ್ರಾಸಿಟಿ ಕೇಸು ಹಾಕಿದ್ದಾರಷ್ಟೇ. ನಂದಶೆಟ್ಟಿ ಈಗಲೂ ದರ್ಪದಲ್ಲೇ ಓಡಾಡುತ್ತಿದ್ದಾನೆ. ಈ ಬಗ್ಗೆ ಡಿವೈಎಸ್‌ಪಿ ರವಿಸೂರ್ಯನಾರಾಯಣನಿಗೆ ಕೇಳಿದರೆ, "ನಾನೂ ದಲಿತನೇ ಸ್ವಾಮಿ. ಆದರಿಲ್ಲಿ ನನ್ನ ಕೈಕಟ್ಟಿ ಹಾಕಲಾಗಿದೆ" ಎಂದು ಗೋಗರೆಯುತ್ತಾನೆ.



ನಾಗಪ್ಪ

ಮತ್ತೂ ಒಂದು ಕೊಲೆ

ನಿರಾಣಿಯ ಈ ಕತ್ತಲ ರಾಜ್ಯದಲ್ಲಿ ಸಾಮಾನ್ಯ ದಲಿತರದು ಈ ಪಾಡಾದರೆ, ನಿರಾಣಿ ವಿರುದ್ಧ ರಭಸದ ರಾಜಕೀಯ ಮಾಡಿದ ದಲಿತರಿಗೆ ಸಾವೇ ಗತಿಯಾಗಿದೆ. ಕಳೆದ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಸರನಾಡಗೌಡರ ಪರ ಬಿರುಸಿನ ಪ್ರಚಾರ ಮಾಡಿದ್ದ ಮಲ್ಲಪ್ಪ ಭಾವಿ ಎಂಬ ಯುವಕನನ್ನು ನಡುರಸ್ತೆಯಲ್ಲೇ ರಾಡ್‌ನಿಂದ ಹೊಡೆದು ಕೊಲ್ಲಲಾಗಿದೆ.



ಸಿದ್ದು ದಿವಾನ್

ಬಾಗಲಕೋಟೆ ಎಂಬ ಬಿಜೆಪಿಯ ಬ್ರಾಹ್ಮಣ ರಾಜ್ಯದಲ್ಲಿ ನಿರಾಣಿ ಮತ್ತಾತನ ಮೇಲ್ಜಾತಿಯ ಪಾಳೇಗಾರರು ಹಳ್ಳಿಹಳ್ಳಿಗಳಲ್ಲಿ ದಲಿತ ದೌರ್ಜನ್ಯ ನಡೆಸುತ್ತಿದ್ದರೆ, ದಲಿತ ಮಂತ್ರಿ ಕಾರಜೋಳ್ ತನ್ನ ಪಾಲಿನದು ತಾನು ತಿಂದು, ತನ್ನ ಸಮಾಜದ ಬೆನ್ನಿಗೇ ಚೂರಿ ಇಕ್ಕುತ್ತಿದ್ದಾನೆ.

ಇಲ್ಲಿಯ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲೂ ಭಂಡ ಬಿಜೆಪಿ ಶಾಸಕರೇ ಇರುವಾಗ, ಸಂಸದನೂ ಚಡ್ಡಿಯೇ ಆಗಿರುವಾಗ, ಪೊಲೀಸಪ್ಪಗಳು ಪ್ಯಾಂಟು ಕಳಚಿಟ್ಟು ಖಾಕಿ ಚಡ್ಡಿ ಧರಿಸಿರುವಾಗ ದೌರ್ಜನ್ಯಕ್ಕೊಳಗಾಗುತ್ತಿರುವ ದಲಿತರು ಯಾರ ಮೊರೆ ಹೋಗಬೇಕು?

• ಮೇಘರಾಜ್

ಫೋಟೋ ತೆಗೆದವನಿಗೂ ಲಾತಾ


ಕೇವಲ ದಲಿತರ ಮೇಲಷ್ಟೇ ಅಲ್ಲ, ನಿರಾಣಿಯ ಕುಕೃತ್ಯಗಳನ್ನು ಬಯಲಿಗೆಳೆವ ಪತ್ರಕರ್ತರಿಗೂ ನಿರಾಣಿಯ ಗೂಂಡಾಪಡೆ ಲಾತಾ ನೀಡುತ್ತಿದೆ. ಇದಕ್ಕೆ ಇತ್ತೀಚೆಗೆ ಬಲಿಯಾಗಿದ್ದು ಮಹಾಂತೇಶ್ ಕಾರಜೋಳ್ ಎಂಬ ಹವ್ಯಾಸಿ ಪತ್ರಕರ್ತ. ನಿರಾಣಿಯ ಶುಗರ್ ಫ್ಯಾಕ್ಟರಿಯು ಕಾಲುವೆ ನೀರು ಕದಿಯುವುದರ ಫೋಟೋ ತೆಗೆದಿದ್ದಕ್ಕಾಗಿ ಈತ ಗೂಂಡಾಪಡೆಯಿಂದ ಹಲ್ಲೆಗೊಳಗಾಗಿ ಚಿಕಿತ್ಸೆ ಪಡೆಯುವಂತಾಯ್ತು. ಇಂತಹ ಹಲ್ಕಾ ಕೆಲಸಗಳಿಗೆ ನಿರಾಣಿಗೆ ಸಿದ್ದು ದಿವಾಣ ಎಂಬ ಪಕ್ಕಾ ಚಡ್ಡಿ ನೆರವಾಗುತ್ತಾನೆ. ಇನ್ನೊಂದು ಕಡೆ ಮಾಜಿ ಪತ್ರಕರ್ತ, ಹಾಲಿ ನಿರಾಣಿ ಪಿ.ಎ. ನಾಗರಾಜ ಜಮಖಂಡಿ ಹಲವು ಆಸೆಬುರುಕ ಲೋಕಲ್ ಪತ್ರಕರ್ತರಿಗೆ ಲ್ಯಾಪ್‌ಟಾಪ್ ನೀಡಿ, ನಿರಾಣಿ ಪರ ಬರೆಸುತ್ತಾನೆ.... ದಲಿತರಿಗೆ ದೋಖಾ, ವಂಚನೆ ಬಯಲಿಗೆಳೆದ ಪತ್ರಕರ್ತರಿಗೆ ಲಾತಾ...ಇದು ಮನೆಹಾಳ ಮುರುಗೇಶ್ ನಿರಾಣಿಯ ನಿಜವಾದ 'ಬಂಡವಾಳ'.....



ನಿಲ್ಲದ ಅಂಚೆಯಣ್ಣನ ಗೋಳು

ಇದು ರಾಯಚೂರಿನ 'ತಬರನ' ಕತೆ....

ಇದು ರಾಯಚೂರಿನ ಸೈಯ್ಯದ್ ಉಸ್ಮಾನ್ ಎಂಬ ವೃದ್ಧರ 'ತಬರನ ಕತೆ'. ಕಿವಿ, ಕಣ್ಣು, ಹೃದಯ ಹೀಗೆ ಎಲ್ಲ ಇಂದ್ರಿಯಗಳನ್ನೂ ಕಳೆದುಕೊಂಡ ದೆಹಲಿಯ ಅಂಚೆ ಇಲಾಖೆಯ ಅಧಿಕಾರಶಾಹಿಗೆ ಈ ವೃದ್ಧರ ಧ್ವನಿ ಕೇಳುತ್ತಲೇ ಇಲ್ಲ. 1964 ರಲ್ಲಿ ರಾಯಚೂರಿನ ಅಂಚೆ ಇಲಾಖೆಗೆ ಪ್ಯಾಕರ್ ಆಗಿ ಕೆಲಸಕ್ಕೆ ಸೇರಿದ ಸೈಯ್ಯದ್ ಉಸ್ಮಾನ್ 2003 ರಲ್ಲಿ ನಿವೃತ್ತರಾದಾಗಲೂ ಪ್ಯಾಕರ್ ಆಗಿಯೇ ಉಳಿದಿದ್ದರು. ಆ ಕಾಲದಲ್ಲೇ 12 ನೇ ಹಂತದ ಓದು ಮುಗಿಸಿದ್ದ ಅವರು ಸೇವೆಗೆಂದು ಪೋಸ್ಟ್ ಆಫೀಸ್ ಸೇರಿದರು. ಮುಂದೆ ಅವರ ಅರ್ಹತೆಗನುಗುಣವಾಗಿ ಅವರಿಗೆ ದಕ್ಕಬೇಕಾಗಿದ್ದ ಎಲ್ಲ ಪ್ರಮೋಷನ್‌ಗಳಿಂದಲೂ ಅವರನ್ನು ವಂಚಿಸುತ್ತಾ, ಶೋಷಿಸುತ್ತ ಬರಲಾಯಿತು. 1964 ರಿಂದ 1980 ರವರೆಗೆ ಅವರು ಹಲವಾರು ಪರೀಕ್ಷೆಗಳಲ್ಲಿ ಪಾಸಾಗುತ್ತ ಬಂದಿದ್ದರೂ ಅವರನ್ನು ಹುದ್ದೆ ಬಡ್ತಿಯಿಂದ ವಂಚಿಸಲಾಯಿತು. ನಿಷ್ಠಾವಂತ ನಿಸ್ವಾರ್ಥ ಕೆಲಸಗಾರರಾದ ಸೈಯ್ಯದ್ ಅವರು ಆರಂಭದಲ್ಲಿ ಐದು ಗಂಟೆ ಕೆಲಸ ಮಾಡಿದ್ದಾರೆ ಸಾಕಿತ್ತು; ಆದರೆ ಅವರು ದಿನಕ್ಕೆ 16 ಗಂಟೆಗಳ ಕಾಲ ಸೇವೆ ಮಾಡಿ ಕೃತಾರ್ಥತೆ ಅನುಭವಿಸಿದರು. ಆದರೆ ಇವರ ಹೆಚ್ಚಿನ ದುಡಿಮೆಯನ್ನು ಬೇರೊಂದು ಡಮ್ಮಿ ಹೆಸರಿಗೆ ವರ್ಗಾಯಿಸಿರಬಹುದಾದ ಅಂದಿನ ಅಂಚೆ ಅಧಿಕಾರಿಗಳು ಹೊಡೆಯುತ್ತ ಹೋಗಿರುವ ಸಾಧ್ಯತೆಗಳಿವೆ.




1966 ರಿಂದ 1980 ರವರೆಗೆ ಅವರು ಪೋಸ್ಟ್‌ಮ್ಯಾನ್ ಕ್ಲಾಸ್ 4 ಸ್ಟ್ಯಾಂಪ್‌ವೆಂಡರ್ ಪರೀಕ್ಷೆಗಳಿಗೆ ಹಾಜರಾಗುತ್ತ ಬಂದಿದ್ದು ಹಲವಾರು ಬಾರಿ ಪಾಸಾಗಿದ್ದಾರೆ. ಆದರೆ 5, 7 ನೇ ತರಗತಿ ಅರ್ಹತೆಯ ಅನೇಕ ಅಭ್ಯರ್ಥಿಗಳು ಈ ಪರೀಕ್ಷೆಗಳ ವಿಷಯಜ್ಞಾನ ಇರದಿದ್ದರೂ ಈ ಪರೀಕ್ಷೆಗಳಲ್ಲಿ ಪಾಸಾಗಿ ಪ್ರಮೋಶನ್ ಪಡೆಯುತ್ತ ಬಂದರು. ಆದರೆ ಅದ್ಯಾವ ಕಾರಣಕ್ಕೋ ಏನೋ ಸೈಯದ್‌ರಿಗೆ ಮಾತ್ರ ಶೋಷಿಸುತ್ತಲೇ ಬರಲಾಯಿತು.

ಹೀಗೆ ದುಡಿದು ಬಸವಳಿಯುತ್ತಲೇ ಬಂದ ಸೈಯದ್ 2003 ರಲ್ಲಿ ನಿವೃತ್ತರಾದರು. ಅವರು ಅಂಚೆ ಇಲಾಖೆಯ ಕಾಯಂ ಉದ್ಯೋಗಿಯಾಗಿ ಕೆಲಸಕ್ಕೆ ಸೇರದಿದ್ದುದರಿಂದ ಅಲ್ಪಸ್ವಲ್ಪ ನಿವೃತ್ತಿ ವೇತನದಿಂದಲೂ ವಂಚಿತರಾದರು. ಮುಂದೆ ಅವರು ತಮಗಾದ ಅನ್ಯಾಯದ ಕುರಿತು ಹಿರಿಯ ಅಧಿಕಾರಿಗಳಿಂದ ರಾಷ್ಟ್ರಪತಿ ಕಲಾಂರವರೆಗೆ ದೂರು ಸಲ್ಲಿಸುತ್ತ ಬಂದಿದ್ದಾರೆ. ಹಲವಾರು ಸಲ ಹಲವು ಹಿರಿಯ ಅಧಿಕಾರಿಗಳು ಮತ್ತು ಒಮ್ಮೆ ಕಲಾಂರವರು ಸೈಯದ್‌ರಿಗಾದ ಅನ್ಯಾಯ ಸರಿಪಡಿಸಲು ಸೂಚಿಸಿದರೂ ದೆಹಲಿ ಅಂಚೆ ದೊರೆಗಳಿಗೆ ಇದು ತಟ್ಟಲೇ ಇಲ್ಲ.

ಅರ್ಹತೆ, ಇಲಾಖಾ ಪರೀಕ್ಷಾ ಯಶಸ್ಸುಗಳಿದ್ದರೂ ಭಡ್ತಿಗಳಿಂದ ವಂಚಿತರಾದ ಸೈಯದ್‌ರಿಗೆ ಅಂಚೆ ಇಲಾಖೆಯ ಕಾನೂನಿನ ಪ್ರಕಾರ ನ್ಯಾಯ ಒದಗಿಸುವುದು ಅಸಾಧ್ಯವಿರಬಹುದು. ಆದರೆ ಅವರು ಇಲಾಖೆಯಲ್ಲಿ ಅನುಭವಿಸಿದ ಶೋಷಣೆ, ಅವರಿಗೆ ದೊರೆಯದ ಭಡ್ತಿ–ಇವೆಲ್ಲ ಮಾನವಹಕ್ಕುಗಳ ಉಲ್ಲಂಘನೆ ಮಾಡಿದಂತೆ ಅಲ್ಲವೆ?

ಈಗಲಾದರೂ ಅಂಚೆ ಇಲಾಖೆ ಎಚ್ಚೆತ್ತುಕೊಂಡು ಮಾನವೀಯ ನೆಲೆಯಲ್ಲಿ ಅವರ ಬದುಕಿಗೊಂದು ಸಣ್ಣ ಆಸರೆ ಕಲ್ಪಿಸಲಿ. ಅಂಚೆ ಇಲಾಖೆಗೆ ತನ್ನ ಜೀವನ ಸಮರ್ಪಿಸಿ, ಸದ್ಯ 70 ರ ವೃದ್ಧಾಪ್ಯದಲ್ಲಿರುವ ಸೈಯ್ಯದರ ನೋವನ್ನು ರಾಜ್ಯ ಅಂಚೆ ಇಲಾಖೆ ದೆಹಲಿಯ ಮುಖ್ಯ ಕಚೇರಿಗೆ ತಲುಪಿಸುವಂತಾಗಲಿ.

• ಮಲ್ಲನಗೌಡರ್



'ದೇಶಕಾಲ'ದ ಬೈಂಡುಗಳ ಒಳಗೆ ಅಡಗಿಕೊಂಡಿರುವ 'ಭೂತ'

ಪತ್ರಿಕೆಯ ಕಳೆದ ಸಂಚಿಕೆಯ ತಮ್ಮ ಬರಹದ ಮೊದಲಿಗೇ "ದೇಶಕಾಲವೆಂದರೆ ಅದರ ಬೈಂಡುಗಳ ಒಳಗಿರುವ ಬರಹಗಳಲ್ಲದೆ ಬೇರೆ ಏನೂ ಅಲ್ಲ" ಎಂದು ಗೆಳೆಯ ಜಿ. ರಾಜಶೇಖರ್ ಬರೆದಿದ್ದಾರೆ. ಸಮಸ್ಯೆ ಇರುವುದೇ ಇಲ್ಲಿ. 'ದೇಶಕಾಲ' ಎಂದರೆ ಅದರ ಬೈಂಡುಗಳ ಒಳಗೆ ಇರುವ ಬರಹವೂ ಹೌದು ಮತ್ತು ಅಷ್ಟೇ ಅಲ್ಲ. ಏಕೆಂದರೆ, ಒಂದು ಪತ್ರಿಕೆಯ ಒಳಗೆ ಇರುವ ಬರಹಗಳು ಅಂತಿಮವಾಗಿ ಅದರ ಸಂಪಾದಕರ 'ಆಯ್ಕೆ'ಯೂ ಹೌದು. ಯಾರನ್ನೆಲ್ಲ ಒಳಗೊಳ್ಳುತ್ತೀರಿ ಮತ್ತು ಯಾರಿಗೆ ಎಷ್ಟು ಪುಟಗಳನ್ನು ನೀಡುತ್ತೀರಿ ಎಂಬುದೂ ಒಂದು 'ಆಯ್ಕೆ'ಯೇ. ಇದು 'ಸೂಕ್ಷ್ಮ'ವಾದಷ್ಟೂ ಹೆಚ್ಚು ಅಪಾಯಕಾರಿ.

ಹೀಗೆ 'ಸೂಕ್ಷ್ಮ'ವಾಗಿ ಬರಹಗಾರರ ಒಳಗೇ ಒಂದು 'ಶ್ರೇಣೀಕೃತ ವ್ಯವಸ್ಥೆ'ಯನ್ನು ಜಾರಿಗೊಳಿಸಲು ಪ್ರಯತ್ನಿಸಿದ ಪತ್ರಿಕೆ 'ಸಾಕ್ಷಿ'. ಆ ದಿಕ್ಕಿನಲ್ಲಿ ಇದೀಗ ಸಾಗಲು ಯತ್ನಿಸುತ್ತಿರುವ ಪತ್ರಿಕೆ 'ದೇಶಕಾಲ'. ಕಾಲ ಮತ್ತು ಕಾರ್ಯತಂತ್ರಗಳು ಮಾತ್ರ ಬೇರೆ, ಅಷ್ಟೇ. 'ಸಾಕ್ಷಿ'ಯನ್ನು ಮಾದರಿಯಾಗಿ ಇಟ್ಟುಕೊಂಡಿದ್ದರಿಂದಲೋ ಏನೋ, ಅಂತಹ ಚಾರಿತ್ರಿಕ ಒತ್ತಡಗಳು ಇಲ್ಲದಿದ್ದರೂ 'ದೇಶಕಾಲ' ಅದೇ ದಾರಿಯಲ್ಲಿ ಸಾಗುತ್ತಿರುವುದು ಒಂದು ಅಚ್ಚರಿಯ ವಿದ್ಯಮಾನ.

'ಸಾಕ್ಷಿ' ಎಷ್ಟು ದೊಡ್ಡ ಪತ್ರಿಕೆಯೇ ಆದರೂ ಗೋಪಾಲಕೃಷ್ಣ ಅಡಿಗರು ಎಷ್ಟು ದೊಡ್ಡ ಕವಿಯೇ ಆದರೂ, ಆ ಕಾಲದ 'ಸಣ್ಣತನ'ಗಳಿಂದ ಹೊರತಾಗಿರಲಿಲ್ಲ. ಈ ಸಣ್ಣತನವನ್ನು 'ಸಾಕ್ಷಿ' ಪತ್ರಿಕೆಯ ಮೊದಲ ಸಂಚಿಕೆಯಿಂದಲೇ ನೋಡಬಹುದು. ಕುವೆಂಪು ಅವರ ಸುತ್ತ ವಂದಿಮಾಗಧರ ಗುಂಪೊಂದು ಬೆಳೆದುದನ್ನು ನೋಡಿ ತಪ್ತರಾಗಿದ್ದ ಅಡಿಗರು, 'ಕುವೆಂಪು ಕವಿ ಎನ್ನುವುದಾದರೆ ನಾನು ಕವಿಯೇ ಅಲ್ಲ' ಎಂದಿದ್ದ ಕಾಲ ಅದು. ಅಡಿಗರಿಗೆ ಕುವೆಂಪು ಅವರ ಒಟ್ಟು ಕೃತಿಗಳ ಬಗ್ಗೆ 'ಜಾಣ ಮರೆವು' ಆವರಿಸಿದ್ದ ಕಾಲವೂ ಹೌದು. ಇದು 'ಎಗ್ರೆಸಿವ್ ಸಾಂಸ್ಕೃತಿಕ ರಾಜಕಾರಣ' ಅಲ್ಲದೆ ಇನ್ನೇನು? ಇದೆಲ್ಲ ಗೊತ್ತಿದ್ದೂ ರಾಜಶೇಖರ್ ಅವರು ಸಾಕ್ಷ್ಯಾಧಾರಗಳನ್ನು ಒದಗಿಸಬೇಕೆಂದು ಹಠ ಹಿಡಿದಿದ್ದಾರೆ. ಹಾಗೆ ಹಳೆಯ ಸಾಕ್ಷ್ಯಾಧಾರಗಳನ್ನು ಗುಡ್ಡೆ ಹಾಕಿಕೊಂಡು ವಾದಿಸುವುದು ಮಹಾ ರೇಜಿಗೆಯ ಕೆಲಸವೇ ಸರಿ. ಏಕೆಂದರೆ, ಆವತ್ತೇ ತೇಜಸ್ವಿ ತನ್ನದೇ ರೀತಿಯಲ್ಲಿ ಇದನ್ನೆಲ್ಲ ತೀವ್ರವಾಗಿ ವಿರೋಧಿಸಿದ್ದರು. ರಾಜಶೇಖರ್ ಅವರಿಗೂ ಇದೆಲ್ಲ ತಿಳಿದೇ ಇದೆ. 'ಸಾಕ್ಷಿ' ಪತ್ರಿಕೆ ತಾನು ಇದ್ಯಾವುದನ್ನೂ ಗಮನಿಸುವುದಿಲ್ಲ ಎಂಬ ಕುರುಡುತನವನ್ನೂ ಅಸೂಕ್ಷ್ಮತೆಯನ್ನೂ ಪ್ರದರ್ಶಿಸಿದ್ದನ್ನು ನಾನು ರಾಜಶೇಖರ್ ಅವರಿಗೆ ಬಿಡಿಸಿ ಹೇಳಬೇಕಿಲ್ಲ, ಇದು ಸಾಕ್ಷ್ಯಾಧಾರಗಳ ಮೂಲಕ ಬಗೆಹರಿಯುವ ವಿಷಯವೂ ಅಲ್ಲ, ಆದುದರಿಂದ ಇಂದಿನ ಓದುಗರ ಅವಗಾಹನೆಗಾಗಿ ಅಂದಿನ ಒಟ್ಟು ಸಾಹಿತ್ಯ ಸಂದರ್ಭದ ಕೆಲವು ವಿಪರ್ಯಾಸಗಳ ಬಗ್ಗೆ ಮಾತ್ರ ನಾನಿಲ್ಲಿ ಚರ್ಚಿಸಬಯಸುತ್ತೇನೆ.

ಯು. ಆರ್. ಅನಂತಮೂರ್ತಿಯವರ 'ಸಂಸ್ಕಾರ' ಪ್ರಕಟವಾದುದು 1965ರಲ್ಲಿ. ಕನ್ನಡದಲ್ಲಿ ಹೊಸ ಸಂಚಲನ ಉಂಟುಮಾಡಿದ ಕೃತಿ ಇದು. ಈ ಹಿನ್ನೆಲೆಯಲ್ಲಿ ಜನವರಿ, 1968ರಲ್ಲಿ ಪ್ರಕಟವಾದ 'ಸಾಕ್ಷಿ'ಯ ಎರಡನೇ ಸಂಚಿಕೆಯಲ್ಲಿಯೇ ಪಾ. ಲ. ಸುಬ್ರಹ್ಮಣ್ಯ ಎಂಬವರು 'ಸಂಸ್ಕಾರ'ದ ಬಗ್ಗೆ ಉತ್ಸಾಹದಿಂದ ಪ್ರತಿಕ್ರಿಯಿಸಿದ್ದು ಸಹಜವೇ. ಆದರೆ ಈ ಉತ್ಸಾಹ 'ಸಾಕ್ಷಿ'ಯ 44ನೆಯ ಸಂಚಿಕೆಯಲ್ಲಿ ಕಾಣಿಸಿಕೊಂಡ ಮೂರ್ತಿ.ಎಸ್.ಎನ್ ಅವರ 'ಸಂಸ್ಕಾರ'ದ ಕುರಿತ ವಿಮರ್ಶೆಯವರೆಗೂ ಚಾಚಿಕೊಂಡಿದೆ. ಆದರೆ 'ಸಾಕ್ಷಿ' ಶುರುವಾದ ಒಂದು ವರ್ಷದ ಹಿಂದಷ್ಟೇ, ಅಂದರೆ 1967ರಲ್ಲಿ, ಕುವೆಂಪು ಅವರು ಬರೆದಿದ್ದ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಬಗ್ಗೆ 6ನೆಯ ಸಂಚಿಕೆಯಲ್ಲಿ ಎಂ. ಜಿ. ಕೆ. ಅವರ ಒಂದು ಲೇಖನದ ಬಳಿಕ ಗಾಢ ಮೌನ ವಹಿಸಿತ್ತು ಎಂಬುದನ್ನು ಗಮನಿಸಿ.

ಮಾತ್ರವಲ್ಲ, ಸುಮಾರು ಇದೇ ಹೊತ್ತಿಗೆ ಅನಂತಮೂರ್ತಿಯವರು, 'ಭಾರತೀಯ ಸಂಸ್ಕೃತಿ ಮತ್ತು ಲೇಖಕ' ಎಂಬ ತಮ್ಮ ಬರಹದಲ್ಲಿ 'ಮಲೆಗಳಲ್ಲಿ ಮದುಮಗಳು' "ಸೂತ್ರ ರೂಪವಾದ ಕೇಂದ್ರ ಪ್ರಜ್ಞೆಯಿಲ್ಲದೆ ವಿವರಗಳಲ್ಲಿ ಸೊಕ್ಕಿ ಬಿಡುತ್ತದೆ" (ಪ್ರಜ್ಞೆ ಮತ್ತು ಪರಿಸರ, ಪುಟ 169) ಎಂದು ಬರೆಯುತ್ತಾರೆ. ಮುಂದುವರಿದು, ವಾಗ್ವಾದದ ಎಲ್ಲ ಸಂಯಮವನ್ನೂ ಗಾಳಿಗೆ ತೂರಿ, "ಆದರೆ ಈ 'ರಸಋಷಿ' ವ್ಯಕ್ತಿತ್ವ ನಮ್ಮ ಸಂಸ್ಕೃತಿಯ ಮೂಲಭೂತ ಪ್ರವೃತ್ತಿಗಳಿಗೆಲ್ಲ ಸುಲಭವಾಗಿ ಸೈ ಎನ್ನುವಂಥದಾದ್ದರಿಂದ ತಮ್ಮ ಕೃತಿಯ ಅನುಭವ ಲೋಕದ ಜೊತೆಗೆ ಅರ್ಥಪೂರ್ಣವಾಗಿ ತೊಡಗುವಂತಹ ದೃಷ್ಟಿಕೋನವನ್ನು ಒದಗಿಸಲಾರದೆ ಎಲ್ಲದಕ್ಕೂ ಸಲೀಸಾಗಿ ದ್ರವಿಸಿಬಿಡುವಂತಹ ಭೋಳೆ ತನವಾಗಿ ಬಿಡುತ್ತದೆ" (ಪ್ರಜ್ಞೆ ಮತ್ತು ಪರಿಸರ, ಪುಟ 169) ಎಂದು ಬರೆಯುತ್ತಾರೆ. 'ಇದರಿಂದಾಗಿಯೇ ಕುವೆಂಪು ಅವರಿಗೆ ದಾರ್ಶನಿಕ ಕಾದಂಬರಿ, ಕಾವ್ಯ ನೀಡಲು ಸಾಧ್ಯವಾಗಿಲ್ಲ' ಎಂಬ ಅಂತಿಮ ತೀರ್ಪನ್ನೂ ನೀಡುತ್ತಾರೆ. ಲೇಖನದ ಕೊನೆಯ ಭಾಗದಲ್ಲಿ ಅಡಿಗರನ್ನು, 'ಸಂಸ್ಕೃತಿಗೆ ಅಳ್ಳಕಗೊಳಿಸಿಕೊಳ್ಳದ ಬರಹಗಾರ' ಎಂಬ ನೆಲೆಯಲ್ಲಿ 'ಎತ್ತಿ ಹಿಡಿದು' ದೀರ್ಘವಾಗಿ ಬರೆಯುತ್ತಾರೆ. ಈ ಇಡೀ ವಿದ್ಯಮಾನ ಏನನ್ನು ಸೂಚಿಸುತ್ತದೆ ಎಂದು ನಾನು ವಿವರಿಸುವ ಅಗತ್ಯ ಇಲ್ಲ.


• ವಸಂತ ಬನ್ನಾಡಿ

ತೇಜಸ್ವಿ, ಪ್ರಾಯಶಃ ಈ ಎಲ್ಲ ಬೆಳವಣಿಗೆಗಳನ್ನು ನೋಡಿಯೇ 1972ರಲ್ಲಿ ಪ್ರಕಟವಾದ ತಮ್ಮ 'ಅಬಚೂರಿನ ಪೋಸ್ಟಾಫೀಸು' ಕಥಾಸಂಕಲನದ ಮುನ್ನುಡಿಯಲ್ಲಿ 'ನವ್ಯ ಸಾಹಿತಿ'ಗಳನ್ನು ಕಟುವಾಗಿ ಟೀಕಿಸಿದರೆಂದು ತೋರುತ್ತದೆ. "ಕಳೆದ ಹದಿನೈದು ಇಪ್ಪತ್ತು ವರ್ಷಗಳಲ್ಲಿ ನವ್ಯ ಸಾಹಿತಿಗಳು ಪ್ರಾಮಾಣಿಕತೆಯ ಹೆಸರಿನಲ್ಲಿ ಅಭ್ಯಸಿಸಿದ ಅಪ್ರಾಮಾಣಿಕತೆ, ವಿಮರ್ಶೆಯ ಹೆಸರಿನಲ್ಲಿ ನಡೆಸಿದ ಪುಢಾರಿ ರಾಜಕಾರಣ ಇವೆಲ್ಲಾ ಈ ಮಾರ್ಗದ ಬರಹಗಾರರಿಗೆ ಹಿಡಿದ ಶನಿಗಳಾಗಿವೆ" ಎಂದು ಅವರು ಬರೆದರು. 'ಸಾಕ್ಷಿ' ಇದ್ಯಾವುದಕ್ಕೂ ಪ್ರತಿಕ್ರಿಯಿಸಲೇ ಇಲ್ಲ, 1973ರಲ್ಲಿ ಪ್ರಕಟವಾದ ಅನಂತಮೂರ್ತಿ ಅವರ 'ಭಾರತೀಪುರ'ದ ಬಗ್ಗೆ ಮಾತ್ರ ಪುಂಖಾನುಪುಂಖವಾಗಿ ಲೇಖ... ಬರೆಸಿತು. ಅಕ್ಟೋಬರ್ 73 ರಿಂದ ಜುಲೈ 74ರ ತನಕದ 'ಸಾಕ್ಷಿ'ಯ ನಾಲ... ಸಂಚಿಕೆಗಳಲ್ಲಿ 'ಭಾರತೀಪುರ'ದ ಬಗ್ಗೆ ಪ್ರಕಟವಾದ ಬಾಲಸುಬ್ರಹ್ಮಣ್ಯ, ಮಾರು... ಶಾನಭಾಗ ಹಾಗೂ ಕೋ. ಪು. ಕಾರಂತರ ಲೇಖನಗಳು, ಅದೊಂದು ದೊಡ್ಡ ಸಾಹಿತ್ಯಕ ಘಟನೆ ಎಂಬಂತೆ ಚಿತ್ರಿಸಿದವು. 'ಸಾಕ್ಷಿ'ಯ 26ನೆಯ ಸಂಚಿಕೆಯ... 'ಭಾರತೀಪುರ - ಒಂದು ಸಮರ್ಥನೆ' ಎಂಬ ಜಿ. ರಾಜಶೇಖರ ಅವ... ಲೇಖನವೂ ಸೇರಿ 'ಸಾಕ್ಷಿ'ಯ ಒಟ್ಟು ಸಂಚಿಕೆಗಳಲ್ಲಿ 'ಭಾರತೀಪುರ' ಕುರಿತು ಪ್ರಕಟವಾದ ಲೇಖನಗಳ ಸಂಖ್ಯೆ ಐದು. ಇದೇ ವೇಳೆಗೆ ಗಿರಿ ಅವರ 'ಗತಿ ಸ್ಥಿತಿ' ಕಾದಂಬರಿಯನ್ನೂ ಒಂದು ಮಹತ್ವದ ಕೃತಿ ಎಂದು ಎತ್ತಿ ಹಿಡಿಯಲಾಯಿತು. ಇದೆಲ್ಲಾ ಸಾಕ್ಷ್ಯಾಧಾರ ಹೇಗಾದೀತು? ಆದರೆ 'ಅಬಚೂರಿನ ಪೋಸ್ಟಾಫೀಸು' ಸೇರಿದಂತೆ ತೇಜಸ್ವಿಯವರ ಎಲ್ಲ ಕೃತಿಗಳ ಬಗ್ಗೆ ಗಾಢ ಮೌನ ವಹಿಸಿದ್ದು ತೀರಾ ಸಹಜ ಅಲ್ಲವೆ?

'ಸಾಹಿತ್ಯ ವಿಮರ್ಶೆ' ಹಾಗೂ ಸೂಕ್ಷ್ಮಜ್ಞತೆಯ ಹೆಸರಿನಲ್ಲಿ 'ಸಾಂಸ್ಕೃತಿಕ ರಾಜಕಾರಣ'ವನ್ನು ಅಧಿಕೃತವಾಗಿ ಉದ್ಘಾಟಿಸಿದ ಕೀರ್ತಿ ನಿಸ್ಸಂಶಯವಾಗಿ 'ಸಾಕ್ಷಿ'ಗೆ ಸೇರಬೇಕು. ಇದೀಗ 'ದೇಶಕಾಲ'ದ ಸರದಿ. 'ದೇಶಕಾಲ'ದ ಸಂಚಿಕೆಗಳನ್ನು ತಿರುವಿ ಹಾಕಿದರೂ ನಾವು ನೋಡುವುದು ಅದದೇ ಕೆಲವೇ ಲೇಖಕರ ಪುಸ್ತಕಗಳ ವಿಮರ್ಶೆ ಹಾಗೂ ಅವರದೇ ಕಥೆ, ಕವನಗಳು!

ಅನಂತಮೂರ್ತಿಯವರು 'ಭೂಮಿಗೀತ'ಕ್ಕೆ ಬರೆದಿರುವ ಮುನ್ನುಡಿಯ ಬಗ್ಗೆ ನನಗೆ ಏನು ತಕರಾರು ಎಂದು ರಾಜಶೇಖರ್ ಕೇಳಿದ್ದಾರೆ. ಅಡಿಗರ ಕಾವ್ಯದ ಬಗ್ಗೆ ಅಂದು ತರುಣರಾಗಿದ್ದ ಅನಂತಮೂರ್ತಿಯವರು ಉತ್ಸಾಹದಿಂದ ಬರೆದಿರುವ ಬಗ್ಗೆ ನನಗೆ ಯಾವ ತಕರಾರುಗಳೂ ಇಲ್ಲ. ಆದರೆ, "ಅಡಿಗರ ಕವನಗಳ ಉಳಿದ ತೊಂಬತ್ತಂಶ ತಿಳಿಯಲು ನಮ್ಮ ಆರ್ಯ ಸಂಪ್ರದಾಯ... ಅರ್ಥವಾಗಿರಲೇಬೇಕು. ಅಡಿಗರದ್ದು ಮುಖ್ಯವಾಗಿ ಆರ್ಷದೃಷ್ಟಿ" ಎಂದು ಅನಂತಮೂರ್ತಿ ಆ ಮುನ್ನುಡಿಯಲ್ಲಿ ಬರೆಯುತ್ತಾರೆ. ಇಲ್ಲಿ 'ನಮ್ಮ' ಅಂದರೆ ಯಾರದ್ದು? ಇದನ್ನು 'ಅಬ್ರಾಹ್ಮಣ' ಲೇಖಕರು ಹೇಗೆ ಓದಿಕೊಳ್ಳಬೇಕು? ಅದಕ್ಕಿಂತಲೂ ಅಸೂಕ್ಷ್ಮವಾದ ಹೇಳಿಕೆ ಲೇಖನದ ಕೊನೆಯಲ್ಲಿ ಬರುತ್ತದೆ. "ಅರುಳು ಮರುಳು ಸಂಗ್ರಹಕ್ಕಿಂತ ಹಿಂದಿನ ಬೇಂದ್ರೆ, ಇನ್ನೂ ಜೀವಂತ ಕಾವ್ಯ ರಚಿಸುತ್ತಿರುವ ಅಡಿಗ, ಈ ಇಬ್ಬರೇ ಕನ್ನಡದ ಅತಿ ಶ್ರೇಷ್ಠ ಕವಿಗಳು ಎಂದು ನಾನು ತಿಳಿದಿದ್ದೇನೆಂಬುದು ಈ ವಿಮರ್ಶೆಯಿಂದ ವ್ಯಕ್ತವಾಗಬಹುದು" (ಸಮಗ್ರ ಕಾವ್ಯ, 1959, ಪುಟ 959) ಎಂದು ಅನಂತಮೂರ್ತಿ ಬರೆಯುತ್ತಾರೆ. ಒಬ್ಬ ಲೇಖಕನನ್ನು ಸಾಹಿತ್ಯ ವಿಮರ್ಶೆ ಬರೆದು ದೊಡ್ಡವನನ್ನಾಗಿಯೋ ಸಣ್ಣವನನ್ನಾಗಿಯೋ ಮಾಡಬೇಕಾಗಿಲ್ಲ ಎಂಬುದು ಅನಂತಮೂರ್ತಿಯವರಿಗೆ ಏಕೆ ಹೊಳೆಯಲಿಲ್ಲ? ಶ್ರೇಷ್ಠತೆ ಕಾಲಾಂತರದಲ್ಲಿ ನಿರ್ಣಯವಾಗಬೇಕಾದ ವಿಷಯ. ಕವಿಯೊಬ್ಬನ ಜೀವಮಾನದ ಬರಹ ಅದಕ್ಕೆ ಸಾಕ್ಷಿಯಾಗಬೇಕು. ಕನ್ನಡದ ಸಂದರ್ಭದಲ್ಲಿ 'ಶ್ರೇಷ್ಠತೆ'ಯ ಹೆಸರಿನಲ್ಲಿ ತಾರತಮ್ಯ ಮೆರೆವ ಹೊಸ ಬಗೆಯ 'ಸಾಹಿತ್ಯ ವಿಮರ್ಶಾ ಪರಂಪರೆ'ಗೆ ಭದ್ರ ಬುನಾದಿ ಹಾಕಿದ ಲೇಖನವಿದು. ಮುಂದೆ 1982ರಲ್ಲಿ ಅನಂತಮೂರ್ತಿ ಅವರು 'ತಾನು ಹಾಗೆ ಹೇಳಿದ್ದು ಅವಿವೇಕತನದ್ದು' ಎಂದು ಹೇಳಿರುವುದಾಗಿ ಮುರಳೀಧರ ಉಪಾಧ್ಯರು ಒಂದೆಡೆ ಬರೆದಿದ್ದಾರೆ (ಸ... ಲೋಕ, ಪುಟ V) ಅನಂತಮೂರ್ತಿಯವರ ಸೂಕ್ಷ್ಮಜ್ಞತೆಯನ್ನು ಅನುಮಾನಿಸಲು ಕಾರಣವಿಲ್ಲ, ಆದರೆ ಈ ಪರಿಷ್ಕರಣೆ ನವ್ಯ ಸಾಹಿತ್ಯದ ಅವನತಿಯ ಕಾಲದಲ್ಲಿ ಬಂತೆಂಬುದು ಮುಖ್ಯ. ಈ ನಡುವಿನ 23 ವರ್ಷಗಳಲ್ಲಿ ಜನಮನದಲ್ಲಿ ಉಂಟಾದ ಗೊಂದಲಕ್ಕೆ ಯಾರು ಹೊಣೆ?

ಅನಂತಮೂರ್ತಿಯವರು ನಮ್ಮ ನಡುವಿನ ಬಹಳ ದೊಡ್ಡ ಲೇಖಕರು, ನಿಜ. ಆದರೆ ಅವರ ಈ ಬಗೆಯ 'ದ್ವಂದ್ವ ನಿಲುವು'ಗಳನ್ನೂ, ಮುತ್ಸದ್ದಿತನವನ್ನೂ ನಾವು ಯಾಕೆ ಸದಾ ವೈಭವೀಕರಿಸುತ್ತಲೇ ಇರಬೇಕು? ಅವರ ಕೃತಿಗಳನ್ನು ತೆಗೆದುಕೊಂಡರೂ, ಅಷ್ಟೆಲ್ಲ ಗದ್ದಲ ಎಬ್ಬಿಸಿದ್ದ 'ಭಾರತೀಪುರ' ಈಗ ಮಂಕಾಗಿದೆ ಅಲ್ಲವೇ? ಹೀಗೆ ಕೇಳಿದ ಕೂಡಲೇ ಅದು ಅವರ ಗೌರವಕ್ಕೆ 'ಮಸಿ ಬಳಿದ' ಹಾಗೆ ಆಗುತ್ತದೆಯೇ? ಗೆಳೆಯ ರಾಜಶೇಖರ್ ಯಾಕೆ ಹಾಗೆ ಭಾವಿಸುತ್ತಾರೋ ತಿಳಿಯದು.

ಒಂದು ಪತ್ರ ಒಂದು ಪದ್ಯ

ನಾನು ದೇಶಕಾಲ ವಿಶೇಷವನ್ನು ಓದಿದ್ದೇನೆ ಹಾಗೂ ನೋಡಿದ್ದೇನೆ. ನೋಡುವ ಕ್ರಿಯೆ ನಮ್ಮ ಸಾಂಸ್ಕೃತಿಕ ರಾಜಕಾರಣವನ್ನು ಅರಿಯುವ ಪರಿ ಎಂದೇ ಭಾವಿಸಿದ್ದೇನೆ. ಇದರ ಜೊತೆಗೆ ಲಂಕೇಶ್ ಪತ್ರಿಕೆಯಲ್ಲಿ ಬಂದ ಎಲ್ಲ ಪ್ರತಿಕ್ರಿಯೆಗಳನ್ನು ಗಮನಿಸಿದ್ದೇನೆ. ಈ ಎಲ್ಲದರ ಹಿನ್ನೆಲೆಯಲ್ಲಿ ಟಿಪ್ಪಣಿ ಮಾಡಿಕೊಂಡು ಬರೆಯಲು ಕೂತಾಗ ಬರಹವೆಂಬುದು ಗದ್ಯವಾಗಿ ಮೂಡದೆ ಪದ್ಯವಾಗಿ ಹರಿಯಿತು. ಪದ್ಯ ಬೆಳೆದು ವಚನವಾಯಿತು. ಇದು ನಿಮ್ಮ ಕರ್ಮವೋ ಕಾಲದೇಶ ವಿಶೇಷದ ಧರ್ಮವೋ ತಿಳಿಯದಾಯಿತು. ಬರೆದದ್ದನ್ನು ಬರೆದಂತೆ ಕಳಿಸಿದ್ದೇನೆ. ಇಲ್ಲಿ ಎರಡು ಮಾತು ಹೇಳಬೇಕು; ಪತ್ರಿಕೆ ಎಂಬುದು ಮಾಡುವವರ ಮರ್ಜಿ. ಆದರೆ ನಮ್ಮ ತಕರಾರು ಇಪ್ಪತ್ತೊಂದರ ಲೆಕ್ಕದ ಚರಿತ್ರೆ ಬರೆದು ಇವೇ ಇಂತಿಷ್ಟೇ ಅಂತ ಹೇಳುವುದಕ್ಕೆ ಇವರಾರು? ಇವರು ಬಳಸಿದ ಮಾನದಂಡ ಎಂಥದ್ದು? ಒಂದು ಸಂಕಲನಕ್ಕೆ ಶ್ರೇಷ್ಠತೆಯ ಕೋಡು ಮೂಡಿಸಿ ಕಿರೀಟವಿಡುವ ಇಂಥ ಹಳವಂಡಗಳಿಂದ ಸಾಹಿತ್ಯಕ, ಸಾಂಸ್ಕೃತಿಕ ವಾತಾವರಣ ಅನ್ಯಾಯಗಳ ಅಪಾಯಕ್ಕೆ ಒಳಗಾಗಬಾರದಲ್ಲ, ಯುವ ಬರಹಗಾರರು ಇದರಿಂದ ದಿಕ್ಕುತಪ್ಪಬಾರದಲ್ಲ, ಇದು ನಮ್ಮ ಕಾಳಜಿ.

ಆಗಸ್ಟ್ 8,2010ರ ಪ್ರಜಾವಾಣಿ ಸಾಪ್ತಾಹಿಕ ಪುರವಣಿಯಲ್ಲಿ ಬಂದಿರುವ ವೀರಣ್ಣ ಮಡಿವಾಳರ 'ಕೇವಲ ಮನುಷ್ಯರು' ಎಂಬ ವ್ಯಾಖ್ಯಾನಕವನ್ನು ಒಮ್ಮೆ ಮನಸ್ಸಿನ ಒಳಕ್ಕೆ ತೆಗೆದುಕೊಂಡರೆ ಬಹುತ್ವದ ನೆಲೆಗಳಲ್ಲಿನ ಒಳಸಂಕಟಗಳು ಅವುಗಳ ಮೂಲದ ಸಂವೇದನೆಗಳು ಯಾವುದೇ ಶ್ರೇಷ್ಠತೆಯ ಅಹಂಕಾರವನ್ನು ಅಲ್ಲಾಡಿಸುತ್ತವೆ. ಐಜೂರು ಮತ್ತು ಮಂಜುನಾಥ ಲತಾ ಅವರು ವಿಶೇಷಕ್ಕೆ ಪ್ರತಿಕ್ರಿಯಿಸಿ ಬರೆದ ಲೇಖನ ಓದಿಯೇ ಆಘಾತಕ್ಕೊಳಗಾದ ನಮ್ಮ ಸೂಕ್ಷ್ಮಸಂವೇದಿ ವಿಮರ್ಶಕರಾದ ಕೆ.ಫಣಿರಾಜ್ ಮತ್ತು ಜಿ.ರಾಜಶೇಖರ ಅವರಿಗೆ ಈ ಲೇಖನ ಎಂಥ ಆಘಾತವನ್ನುಂಟುಮಾಡಿರಬಹುದು?

ನಲವತ್ತೈದು ವರ್ಷಗಳಿಂದಲೂ ಬಹುತ್ವದ ನೆಲೆಗಳನ್ನು ಗೌರವಿಸುತ್ತಾ ಪ್ರೋತ್ಸಾಹಿಸಿಕೊಂಡು ಬಂದ 'ಸಂಕ್ರಮಣ'ವಾಗಲಿ, ಈಗ ನಿಂತು ಹೋಗಿದ್ದರೂ ಅವುಗಳ ದಟ್ಟಪ್ರಭಾವವನ್ನು ಇನ್ನೂ ನಿರಂತರವಾಗಿಸಿರುವ 'ಸಾಕ್ಷಿ' 'ಋಜುವಾತು'ಗಳಾಗಲಿ ಇಂಥ ಚಾರಿತ್ರಿಕ ದಾಖಲಾತಿಯ ಅಪಾಯಕಾರಿ ಪ್ರಮಾದಗಳನ್ನು ಎಂದೂ ಮಾಡಿರಲಿಲ್ಲ. ನಿನ್ನೆ ಮೊನ್ನೆ ಪ್ರಾರಂಭವಾದ ಐಟಿ ಬಳಗದ ಈ ಪತ್ರಿಕೆ ಮಾಡಿರುವ ಪ್ರಮಾದ ಕನ್ನಡ ಸಾಹಿತ್ಯ ಪರಂಪರೆ ಕ್ಷಮಿಸಲಾಗದ ತಪ್ಪು ಎಂಬುದನ್ನು ದೃಢ ನಿಲುವಿನಿಂದ ಸಾರುತ್ತಿದ್ದೇನೆ. ಇಂಥದ್ದಕ್ಕೆ ಪ್ರತಿಕ್ರಿಯಿಸದೆ ಹೋದರೆ ಈ ತಪ್ಪು ನಡೆಯನ್ನು ಅನುಮೋದಿಸಿದ ಪಾಪಕ್ಕೆ ನಾವೂ ಒಳಗಾಗುತ್ತೇವೆ ಎಂಬ ಎಚ್ಚರ ಪ್ರಜ್ಞೆಯಿಂದ ನೈತಿಕ ಹೊಣೆಯರಿತು ಈ ಪತ್ರ ಮತ್ತು ಪದ್ಯ ●

ದೇಶಕಾಲ ಚರ್ಚೆ

ಕಾಲವಶ ದೇಶಭಾರತ

ವಚನ:
ದೇಶವೆಂದರೆ ದೇಶ
ಕಾಲವಶವಾದವರ ದೇಶವಣ್ಣಾ
ಕಾಲವೆಂದರೆ ಕಾಲ
ದೇಶವಶವಾದವರ ಕಾಲವಣ್ಣಾ

ದೇಶ ಕಾಲದ ಒಳಗೋ
ಕಾಲ ದೇಶದ ಒಳಗೋ
ದೇಶ ಕಾಲಗಳೆರಡು
ಬ್ರಹ್ಮದಂಡದ ಒಳಗೋ ಹೇಳಿರಣ್ಣಾ

ಪ್ರವಚನ :
ಈ ಇಂಥ ದಂಡಧಾರಿಗಳು
ಅಕ್ಷರದಲ್ಲಿ ಆಹಾರವನುಂಡವರು
ಆಹಾರಗಳಲ್ಲಿ ಅನಂತವ ಕಂಡವರು
ಅನಕ್ಷರಿಗಳ ಅರಿವಿನಂಗಳದಲ್ಲಿ
ಒಮ್ಮೆಯೂ ಪಾದಪದ್ಮಂಗಳ ನೂರದವರ.

ನಿರ್ವಚನ:
ಇವರುಗಳನ್ನು ಓದತೊಡಗಿದರೆ,
ಇವರು ಈ ನೆಲದವರೆಂದು ಅನಿಸುವುದೇ ಇಲ್ಲ
ಅಗ್ನಿಕುಂಡದಲ್ಲಿ ಜ್ವಲಿಸಿದ ಅಯೋನಿಜರು
ಸ್ವಜನ ಸಂಪ್ರೀತಿಯಲ್ಲಿ ಸ್ವಕಾರದ್ದೇ ಕಾರುಬಾರು
ಸ್ವರತಿ ಸಂಭ್ರಾಂತಿಯಲ್ಲಿ ಮಮಕಾರದ್ದೇ ದರ್ಬಾರು.

ಅವನ ಅಪಾನಕ್ಕೆ ಇವನು ಚಪಲಿಗ
ಇವನ ಸ್ವಪಾನಕ್ಕೆ ಅವನು ಸಫಲಿಗ

ಪರಿವಚನ:
ಉಂಡಾದ ಮೇಲೆ ಹೆಬ್ಬೆರಳಿಗಂಟಿದ
ಅಗುಳ ಮೂವತ್ತೆರಡು ಸಲ ಜಗಿದು
ಆರೋಗ್ಯಶಾಸ್ತ್ರದ ಮೊದಲ ಪಾಠ
ಹೇಳುವ ನೀತಿಗರು.

ಜಗಿದ ತುಣುಕಿನಲ್ಲಿ
ಬ್ರಹ್ಮಾಂಡ ಕಂಡೆವೆನ್ನುವ
ಕಡು ಮೋಹಿಗರು


ನ್ನ ಕಾಳಜಿ ಇರುವುದು, ಸಾಹಿತ್ಯ ವಿಮರ್ಶೆಯ ಹೆಸರಿನಲ್ಲಿ ನಡೆವ ಗಾರಿಕೆ ಸಾಹಿತ್ಯಕ ವಾತಾವರಣದ ಸ್ವಾಸ್ಥ್ಯವನ್ನು ಕದಡಬಹುದು ಎಂದು. ಅಂದಿಗೆ ಹೇಗೋ ಇಂದಿಗೂ ನಿಜ. ಅಂದಿನ ವಿಮರ್ಶಾ ರಾಜಕೀಯದಿಂದ ಹೋದ ಲಂಕೇಶ್ ಅವರು ಅನಂತಮೂರ್ತಿಯವರ 60ನೇ ಹುಟ್ಟು ದು "ಈ ಸಭೆಯಲ್ಲಿ ನನಗೆ ಹೊಳೆದಿದ್ದು ಈ ಅಪ್ರಾಮಾಣಿಕತೆ - ದರೆ ವಿಮರ್ಶಕರಾದ ಅನಂತಮೂರ್ತಿ ನನ್ನನ್ನಾಗಲೀ, ತೇಜಸ್ವಿಯವರನ್ನಾಗಲೀ ಬರೆದಂತಿಲ್ಲ" (ಸಾಹಿತಿ ಸಾಹಿತ್ಯ ವಿಮರ್ಶೆ, 77, 2008) ಎಂದು ನುಡಿದದ್ದು ಬರೀ ಕ್ತಿಕ ಅಸಹನೆಯಿಂದಲೇ? ಇಂದು ಲ'ದ ಬಗ್ಗೆ ಉಂಟಾಗಿರುವ ಅಸಹನೆಗೂ, ದವರನ್ನು ಮಾತ್ರ ವೈಭವೀಕರಿಸುವ ಯ'ವೇ ಕಾರಣವಲ್ಲವೇ? ಲಂಕೇಶ್ ಅಡಿಗರ ಒಡನಾಡಿಯಾಗಿದ್ದವರು. ತೇಜಸ್ವಿ ಜೊತೆ ಜಗಳಾಡಿ ಅಡಿಗರ ನ್ನು ಸಮರ್ಥಿಸಿದ್ದವರು. ಅಂತಹ ಲಂಕೇಶ್ ಅವರೇ ಅಡಿಗರ ನವಾದ 'ನೆನಪಿನ ಗಣಿಯಿಂದ' ಪುಸ್ತಕದ ಬಗ್ಗೆ ಬರೆಯುತ್ತಾ "ಈ ಓದುತ್ತಿದ್ದರೆ ಒಂದು ಕಂದಾಚಾರಿ ಬ್ರಾಹ್ಮಣರ ವಠಾರವನ್ನು ಸಿದಂತಾಗುತ್ತದೆ" ಎಂದು ಕಟುವಾಗಿ ಟೀಕಿಸಿರುವುದು ಗಮನಿಸಬೇಕಾದ ವೇ? ಮುಂದುವರಿದು "ಬೇಂದ್ರೆಯವರನ್ನು ಅಂಟಿಸಿಕೊಂಡು ಮೆಚ್ಚುವ ಗೆ ಕುವೆಂಪು ಅವರ ಕತೆ, ಕಾದಂಬರಿಯ ಪರಿವೆಯೇ ಇಲ್ಲ" (ಸಾಹಿತಿ ವಿಮರ್ಶೆ, ಪುಟ 73, 2008) ಎಂದು ಲಂಕೇಶ್ ಬರೆದಿದ್ದಾರೆ. ಲ'ದ ಬಗ್ಗೆ ಈಗ ನಡೆಯುತ್ತಿರುವ ಚರ್ಚೆಗೂ ಲಂಕೇಶರ ಈ ಗಳಿಗೂ ನೇರ ಸಂಬಂಧವಿದೆ ಎಂದು ಅನಿಸುತ್ತಿಲ್ಲವೇ?

ಶಕಾಲ'ದ ಒಂದೊಂದು ಸಂಚಿಕೆಗಳನ್ನೂ ಗಿಟ್ಟುಕೊಂಡು, ಅದು ನಡೆಸುತ್ತಿರುವ ತಿಕ ರಾಜಕಾರಣ'ಕ್ಕೆ ಸಾಕ್ಷಿ ಒದಗಿಸಲು ದೆ. ಇದು ಗೆಳೆಯರೊಬ್ಬರು ಹೇಳಿದ 'ನ ಪ್ರಶ್ನೆ ಅಲ್ಲ; ಅಥವಾ 'ಇನ್ನಷ್ಟು ಸದೃಢ ವಿಮರ್ಶೆಯ ಪರಂಪರೆ ಕಟ್ಟುವ' ಕೆಲಸವೂ ಸತ್ಯ' ಯಾವಾಗಲೂ ಒಂದು ಪತ್ರಿಕೆಯ ಗಳ ಒಳಗಷ್ಟೇ ಅಲ್ಲ, ಅದರ ಆಚೆಗೂ ಕೊಂಡಿರುತ್ತದೆ. 'ಕೃತಿನಿಷ್ಠ ವಿಮರ್ಶೆ'ಯ ಲ್ಲಿ 'ದೇಶಕಾಲ - 16'ರಲ್ಲಿ ಟಿ. ಪಿ. ಅಶೋಕ ಬರೆದಿರುವ 'ವಸುಧೇಂದ್ರರ ಕಥನಗಳು' ಎಂಬ ವನ್ನು ಪರಿಶೀಲಿಸಬಹುದು. ಕನ್ನಡದ ಕಥನ ರೆಯ ಬಗ್ಗೆ ಬರೆಯುತ್ತಾ ಟಿ. ಪಿ. ಅಶೋಕ್ ಉದ್ದಕ್ಕೂ ಕುವೆಂಪು, ಕಾರಂತ, ಅನಂತಮೂರ್ತಿಯವರ ಹರಣೆಗಳನ್ನು ಕೊಡುತ್ತಾ ವಾಗಿ, ಹೊಸ ಕಾಲದ ಕತೆಯ ಸಂಕೀರ್ಣತೆಯನ್ನು ಸಲು 'ಮಲೆಗಳಲ್ಲಿ ಮದುಮಗಳು' ರಿಯ ಬೈಸಿಕಲ್ ಸವಾರಿಯ ಸಾಕಾಗದೆ, ಈ ಸಂದರ್ಭವು ಕ ಶಾನುಭಾಗರ ಮೂಲಕ ಹುಲಿ ಯ ಹೊಸ ಪ್ರತಿಮೆಯೊಂದನ್ನು ಕೊಂಡಿತು. ಈ ಹೊಸ ಪರಂಪರೆಯ ದಾರರಲ್ಲಿ ವಸುಧೇಂದ್ರರು ರಾಗಿದ್ದಾರೆ" (ದೇಶಕಾಲ- 16, 104) ಎನ್ನುತ್ತಾರೆ. ಎಲ್ಲಿಗೆಲ್ಲಿಯ ಸಂಬಂಧ? ಏನಿದರ ಅರ್ಥ? ಕಥನ ಪರಂಪರೆಯಲ್ಲಿನ ಹೊಸ ಪರಂಪರೆಯಲ್ಲಿ ವಿವೇಕ ಾಗರು 'ಅತಿ ಮುಖ್ಯ'ರು ಎಂದೇ? ಮತ್ತೆ ಈ ದಾರರನ್ನು ಕಂಡು ಹಿಡಿಯಲು ಯಾಕೆ ಅಷ್ಟೆಲ್ಲ ಶ್ರಮ? ಇನ್ನು ತೇಜಸ್ವಿ ಮತ್ತು ಲಂಕೇಶರು ಯಾವ ಪರಂಪರೆಗೆ ಸೇರಿದವರು ಹಾಗೂ ಅವರ ವಾರಸುದಾರರು ಯಾರು ಎಂದು ಯಾರಾದರೂ ಕೇಳಿದರೆ, ಈ ವಿಮರ್ಶಕರು ಅವರಿಗೂ ವಾರಸುದಾರರನ್ನು ಹುಡುಕಿ ಕೊಡುವರೇ? ಅಥವಾ ಕನ್ನಡದ ಅನೇಕಾನೇಕ ಮುಖ್ಯ ಕಥೆಗಾರರ ಬಗ್ಗೆ ಕೇಳಿದರೆ ಅವರಿಗೂ ಅವಸರವಸರವಾಗಿ ವಾರಸುದಾರರನ್ನು ಹುಡುಕುವರೇ? ಸರಿ. ಹುಡುಕುತ್ತಲೇ ಇರಲಿ. ಯಾರ ಅಭ್ಯಂತರವೂ ಇಲ್ಲ. ಆದರೆ ತಮಗೆ ಸರಿ ಕಂಡಂತೆಲ್ಲ ಪಟ್ಟಿಯನ್ನು ಕೊಡುವುದನ್ನೂ ಅಲ್ಲಿ ತಮಗೆ ಬೇಕಾದವರನ್ನು ಮಾತ್ರ ತಂದು ಸಾಹಿತ್ಯ ವಿಮರ್ಶೆಯ ಹೆಸರಿನಲ್ಲಿ ಪ್ರತಿಷ್ಠಾಪಿಸುವುದನ್ನೂ ನಿಲ್ಲಿಸುವುದುಒಳ್ಳೆಯದು. ಸಾಹಿತ್ಯ ವಿಮರ್ಶೆಯ ಹೆಸರಿನಲ್ಲಿನ ಈ ಜಡತ್ವಕ್ಕೆ ಒಂದು ಮಿತಿ ಯೆಂಬುದೇ ಇಲ್ಲವೇ?

ದೇಶಕಾಲ ಚರ್ಚೆ

ಹೀಗೆ ಸೂಕ್ಷ್ಮವಾಗಿ ಕೃತಿಕಾರರ ಶ್ರೇಣಿಯೊಂದನ್ನು ಕಟ್ಟಲು ಹೆಣಗುವ ಈ ವಿದ್ವಾಂಸರಿಗೆ 'ಸಾಹಿತ್ಯದ ವಿಮರ್ಶೆಯ ಈ ಮಾದರಿ'ಯೊಂದು ಒದಗಿ ಬಂದಿರುವುದು 'ಸಾಕ್ಷಿ' ಮತ್ತು ಅನಂತಮೂರ್ತಿಯವರ ಕೃಪೆಯಿಂದಲೇ. ಅನಂತಮೂರ್ತಿಯವರು ಈಚೆಗೆ 'ಮನಸ್ಸಿಲ್ಲದಿದ್ದರೂ' ಬರೆಯುತ್ತಿರುವ ಮುನ್ನುಡಿಗಳೂ ಇವರೆಲ್ಲರ ಸ್ಫೂರ್ತಿ ಮೂಲಗಳೇ.

ಒಂದು ಪತ್ರಿಕೆ 'ಈ ಮಾದರಿಯ ಸಾಹಿತ್ಯ ವಿಮರ್ಶೆ'ಯ ಹಂಗಿಲ್ಲದೆ ನಡೆಯಲು ಸಾಧ್ಯವಿಲ್ಲವೇ? ಸಾಹಿತ್ಯ ವಿಮರ್ಶೆಯ ಹೆಸರಿನಲ್ಲಿ ಹೀಗೆ ಅಪಕಲ್ಪನೆಗಳನ್ನು ಬಿತ್ತುವ ಪರಿಪಾಠ ಕನ್ನಡದಲ್ಲಿ ಮಾತ್ರ ಇದೆಯಲ್ಲವೇ? ಇದಕ್ಕೆ ಬದಲೀ ಕ್ರಮವೊಂದನ್ನು ಬೆಳೆಸುವುದಕ್ಕೆ ಇದು ಸೂಕ್ತ ಸಮಯವಲ್ಲವೇ? ನವೋದಯ ಲೇಖಕರು ಸಾಹಿತ್ಯ ವಿಮರ್ಶೆಯ ಊರುಗೋಲು ಇಲ್ಲದೆ ಅರ್ಥಪೂರ್ಣ ಕೃತಿಗಳನ್ನು ನೀಡಿಲ್ಲವೇ? ನವ್ಯ ಎಸಗಿದ ಅದೇ ತಪ್ಪುಗಳನ್ನು ನಾವು ಯಾಕೆ ಇವತ್ತೂ ಊರ್ಜಿತದಲ್ಲಿಡಬೇಕು? ಜಾಡಿಗೆ ಬಿದ್ದು ಜಡವಾಗಿರುವ ಸಾಹಿತ್ಯ ವಿಮರ್ಶೆ ಅಂತಿಮವಾಗಿ ಆಸ್ಥಾನ ವಿದ್ವಾಂಸರ ಮತ್ತು ಪುರೋಹಿತರ ಹುಟ್ಟಿಗಷ್ಟೇ ಕಾರಣವಾಗುತ್ತದೆಯಲ್ಲವೇ?



'ದೇಶ ಕಾಲ'ದ ವಾಕ್ಯಸಮರದಿಂ ಧುಮ್ಮಿಕ್ಕಿ ಹರಿವ ವಾಗ್ಧರಿಯಲಿ ಕೊಚ್ಚಿಹೋಗುತಲಿರುವ ಪಂಡಿತ ಗಢಗಾವ ಬೆರಗುಗಣ್ಣಿಂದ ದಿಟ್ಟಿಸುತಿದೆ ಪಾಮರ ವರ್ಗ. ಅತಿ ಸ್ವಾರಸ್ಯಕರವಾಗಿರ್ಪ ವಾಗ್ವಾದಂಗಳು ಭರದಿ ಓದಿದಷ್ಟು ಕಾಗದದ ಹಾಳೆಗಳಿಗಷ್ಟೆ ಸೀಮಿತವಾಗಬೇಕೇ? ಪಾಠಕರಿಗೆ ವಿನಂಗಳ ಕಾಲ ಮುಂದರಿವರೇ?

• ಸುರೇಶ್ ಭಟ್ ಬಾಕ್ರಬೈಲು

'ಸಾಕ್ಷಿ'ಯ 'ಭೂತ' ಕಾಡುತ್ತಿರುವುದರಿಂದಲೇ 'ದೇಶಕಾಲ' ಇಂದು ಹಲವು ಪ್ರಶ್ನೆಗಳನ್ನು ಎದುರಿಸಬೇಕಾಗಿ ಬಂದಿದೆ ಎಂಬುದು 'ದೇಶಕಾಲ'ಕ್ಕೂ ಮತ್ತು ಅದನ್ನು ಸಮರ್ಥಿಸುವವರಿಗೂ ಆದಷ್ಟು ಬೇಗ ಅರಿವಾಗಲಿ ಎಂದು ಹಾರೈಸಬಹುದಷ್ಟೇ. ಇದಕ್ಕೆ ಇನ್ನೊಂದು ಮುಖವೂ ಇದೆ. ಸಾಹಿತ್ಯ ವಿಮರ್ಶೆಯ ತಾರತಮ್ಯದಿಂದ ಎದ್ದ ಅಸಹನೆ, ಅಸೂಯೆ, ತಲ್ಲಣ ನವ್ಯರಲ್ಲಿ ಹೊಸ ವೈಚಾರಿಕ ಎಚ್ಚರಕ್ಕೂ, ಅನೇಕ ಅರ್ಥಪೂರ್ಣ ಕೃತಿಗಳ ರಚನೆಗೂ ಕಾರಣವಾಯಿತು. ಯಾವುದೇ ವಾಗ್ವಾದ ಅಂತಿಮವಾಗಿ ಸಾಧಿಸಬೇಕಾದ್ದೂ ಅದನ್ನೇ. ಈ ಹಿನ್ನಲೆಯಲ್ಲಿ 'ದೇಶಕಾಲ'ದ ಸುತ್ತ ನಡೆದ ಈ ಚರ್ಚೆಗೂ ತತ್‌ಕ್ಷಣದ ತೀವ್ರ ಪ್ರತಿಕ್ರಿಯೆಗೂ ಒಂದು ಮಹತ್ವ ಇದ್ದೇ ಇದೆ ಎಂದು ನನಗೆ ಅನಿಸಿದೆ.

ಗೆಳೆಯ ಜಿ. ರಾಜಶೇಖರ್ ಅವರ ಪ್ರಾಮಾಣಿಕತೆ ಬಗ್ಗೆ ನನಗೆ ಎರಡು ಮಾತುಗಳೇ ಇಲ್ಲ. ಅವರು ಯಾವತ್ತೂ ಸಾಹಿತ್ಯ ವಿಮರ್ಶಕರಂತೆ ವರ್ತಿಸಿದ್ದೂ ಇಲ್ಲ. ಆದರೂ ಅಡಿಗರ ಕವನವೊಂದರ ಮೂರು ಸಾಲುಗಳಲ್ಲಿ ಎಲ್ಲ ಕಾಣ್ಕೆ ಸಿದ್ಧಾಂತಗಳನ್ನೂ ಏಕೆ ಕಂಡರು ಎಂಬುದೇ ನನಗೆ ಅರ್ಥವಾಗುತ್ತಿಲ್ಲ. ಈ ಇಡೀ ಚರ್ಚೆಯ ಸಂದರ್ಭದಲ್ಲಿ ಜಿ. ರಾಜಶೇಖರ್ ಇನ್ನಷ್ಟು ಸ್ಪಷ್ಟವಾಗಿ ಮಾತನಾಡಬೇಕಿತ್ತು. ನನಗೆ ಅದೊಂದು ದೊಡ್ಡ ಕೊರತೆ ಎಂದೇ ತೋರುತ್ತದೆ. ●

'ನೆಲಮೂಲದ ಲೇಖಕರು' ಯಾರು?

ಪ್ರಿಯರೆ,

ಡಾ. ಎಚ್.ಎಸ್. ಅನುಪಮ ಅವರ ಪ್ರಕಾರ ಸಾಮಾಜಿಕ ನ್ಯಾಯಕ್ಕೆ ಸಂಬಂಧಪಟ್ಟ ಬರಹಗಳನ್ನಾಗಲೀ, ನೆಲಮೂಲದ ಲೇಖಕರ ಭಾಗವಹಿಸುವಿಕೆಯನ್ನಾಗಲೀ 'ದೇಶಕಾಲ'ದಲ್ಲಿ ನಿರೀಕ್ಷಿಸುವುದು ತಪ್ಪು ಎಂದು ನಾನು ಹೇಳುತ್ತಿದ್ದೇನೆ. ನಾನು ಹಾಗೆ ಯಾವ ಸಂದರ್ಭದಲ್ಲಿಯೂ ಹೇಳಿಲ್ಲ. 'ದೇಶಕಾಲ'ದಲ್ಲಿ ಸಾಮಾಜಿಕ ನ್ಯಾಯದ ಕಾಳಜಿ ಇರುವ ಹಲವು ಬರಹಗಳು ಪ್ರಕಟವಾಗಿವೆ ಎಂಬುದೇ ನನ್ನ ವಾದ. ಇನ್ನು ನೆಲಮೂಲದ ಲೇಖಕರ ಮಾತಿಗೆ ಬಂದರೆ, ಕನ್ನಡ ಲೇಖಕರಲ್ಲಿ ಯಾರು ಯಾರು ನೆಲ ಮೂಲದವರು, ಯಾರು ಅಲ್ಲ, ಅವರನ್ನು ಪ್ರತ್ಯೇಕಿಸುವುದು ಹೇಗೆ ಎಂಬ ಕುರಿತು, ಒಂದೆರಡು ನಿದರ್ಶನಗಳೊಂದಿಗೆ ಅನುಪಮ ವಿವರಣೆ ನೀಡಿದರೆ, ಅವರ ಆಕ್ಷೇಪಕ್ಕೆ ಉತ್ತರಿಸಬಹುದು. ಹೇಗಿದ್ದರೂ ನಾನು ಮತ್ತು ನನ್ನಂತಹವರು ನೆಲಮೂಲದವರಲ್ಲ; ನಾವು ಅವರಿಗೆ ಭಿನ್ನ ಅನ್ಯ ಹಾಗೂ ಎದುರಾಳಿಗಳು ಎಂದು ಅನುಪಮ ಈಗಾಗಲೇ ತೀರ್ಮಾನಿಸಿಬಿಟ್ಟಿದ್ದಾರೆ. ಅವರ ಮಾತಿನಲ್ಲಿ ಹೊಗೆಯಾಡುತ್ತಿರುವ ಅಸಹನೆ, ನನ್ನ ಬಾಯಿ ಕಟ್ಟಿಸುತ್ತದೆ.

ದುರದೃಷ್ಟವಶಾತ್ 'ದೇಶಕಾಲ' ಕುರಿತು ಬರಗೂರು ರಾಮಚಂದ್ರಪ್ಪನವರ ನಿಲುವು ಕೂಡ ಇದೇ ಬಗೆಯ ಅಸಹನೆಯದ್ದಾಗಿದೆ. ಅವರ ಪ್ರಕಾರ 'ದೇಶಕಾಲ' ಸಾಮಾಜಿಕತೆಯನ್ನು ಉಪೇಕ್ಷಿಸಿ ವೈಯಕ್ತಿಕತೆಯನ್ನು ವೈಭವೀಕರಿಸಿದೆ ಹಾಗೂ ಮೇಲುವರ್ಗ ಮತ್ತು ಮೇಲುವರ್ಣಗಳ ಸಂವೇದನಾ ಸೂಕ್ಷ್ಮತೆಯನ್ನು ಪ್ರಧಾನವಾಗಿರಿಸಿಕೊಂಡಿದೆ. ಆದರೆ 'ದೇಶಕಾಲ'ದ ಪ್ರತಿಯೊಂದು ಸಂಚಿಕೆಯೂ, ಹಲವು ಲೇಖಕರ, ಹಲವಾರು ಬಗೆಯ ಬರಹಗಳ ಸಂಕಲನವಾಗಿದ್ದು ಬರಗೂರರ ಸಾರಾಸಗಟು ತೀರ್ಮಾನ ಸಮಚಿತ್ತದ ವಿಮರ್ಶೆ ಎನ್ನಿಸಿಕೊಳ್ಳದು. 'ದೇಶಕಾಲ' ಸಾಮಾಜಿಕ ಅನುಭವ ಪ್ರಾಮಾಣ್ಯಕ್ಕೆ ಬದಲು ವೈಯಕ್ತಿಕ ಅನುಭವ ಪ್ರಾಮಾಣ್ಯಕ್ಕೆ ಪ್ರಾಧಾನ್ಯತೆ ನೀಡುತ್ತಿದೆ ಎಂದೂ ನವ್ಯ ಸಾಹಿತ್ಯ ಹುಟ್ಟುಹಾಕಿದ ಈ ವಿಭಜನೆಯನ್ನು 'ದೇಶಕಾಲ' ಮುಂದುವರಿಸಿಕೊಂಡು ಹೋಗುತ್ತಿದೆ ಎಂದೂ ಬರಗೂರರು ಪ್ರತಿಪಾದಿಸುತ್ತಾರೆ. ಈ ವಿಭಜನೆ ಬರಗೂರರ ಮನಸ್ಸಿನಲ್ಲಿ ಇರುವಂತಹದ್ದೇ ಹೊರತು ನವ್ಯ ಸಾಹಿತ್ಯದಲ್ಲೂ ಇಲ್ಲ; 'ದೇಶಕಾಲ'ದಲ್ಲೂ' ಇಲ್ಲ. ಸಾಹಿತ್ಯ ಕೃತಿಗಳನ್ನು ಹಾಗೆ ವಿಭಜಿಸಲು ಬರುವುದೂ ಇಲ್ಲ. ನನ್ನ ಮಾತಿಗೆ ಎರಡು ಉದಾಹರಣೆಗಳನ್ನು ಕೊಡುತ್ತೇನೆ. 'ದೇಶಕಾಲ ವಿಶೇಷ'ದಲ್ಲಿ ಪ್ರಕಟವಾಗಿರುವ "ಅಯ್ಯ ಬಿಜ್ಜಳನೇ" ಎಂಬ ಚಂದ್ರಶೇಖರ ಕಂಬಾರರ ಕವನ ಮತ್ತು "ಮುಸಲಮಾನ ಬಂದ! ಮುಸಲಮಾನ ಬಂದ!" ಎಂಬ ಗಿರೀಶ ಕಾರ್ನಾಡರ ಕತೆ, ಕನ್ನಡದ ಮತ್ತು ಆ ಲೇಖಕರ ಮಹತ್ವದ ಕೃತಿಗಳು. ನಮ್ಮನ್ನು ಅವಾಕ್ಕಾಗಿಸುವ ಕಂಬಾರರ ಕವಿತೆಯಲ್ಲಿ ಬಿಜ್ಜಳ, ಬಸವ, ಅಲ್ಲಮ ಮತ್ತು ಕಲ್ಯಾಣದ ಕ್ರಾಂತಿಯ ಜೊತೆ 'ದೇಗುಲಗಳಲ್ಲಿ ದೇವರಿಲ್ಲದ' ಈ ನಮ್ಮ ಕೆಟ್ಟ ಕಾಲವೂ ಇದೆ. ಬರಗೂರರು ಈ ಕವನವನ್ನು ಅನುಭವ ಪ್ರಾಮಾಣ್ಯದ ಯಾವ ಕೋಣೆಯಲ್ಲಿ ಇರಿಸುತ್ತಾರೆ? ವೈಯಕ್ತಿಕವ್ರೋ? ಸಾಮಾಜಿಕವ್ರೋ? ಕಾರ್ನಾಡರ ಕತೆ ಕೂಡ ಇಂತಹ ಸಲೀಸು ವರ್ಗೀಕರಣಗಳಿಗೆ ಸಿಗುವಂತಹದ್ದಲ್ಲ. ಕೋಮುವಾದದ ಬುದ್ಧಿಗೇಡಿತನವನ್ನು ತಿಳಿಹಾಸ್ಯದಲ್ಲಿ ನಿರೂಪಿಸುತ್ತ ಸಾಗುವ ಆ ಕತೆ ಕೊನೆಯಲ್ಲಿ ಓದುಗನನ್ನು ಗಾಢ ವಿಷಾದದ ಆತ್ಮಾವಲೋಕನದಲ್ಲಿ ತೊಡಗಿಸುತ್ತದೆ. ಕಂಬಾರರ ಕವಿತೆ ಮತ್ತು ಕಾರ್ನಾಡರ ಕತೆ, ಎರಡೂ ಏಕಕಾಲಕ್ಕೆ ಸಾಮಾಜಿಕವೂ ಹೌದು; ವೈಯಕ್ತಿಕವೂ ಹೌದು; ಇವೆರಡನ್ನೂ ಮೀರಿ ಮನುಷ್ಯನ ಪಾಡನ್ನು ಚಿಂತಿಸುವಂತಹವೂ ಹೌದು.

ನಾನು ಎಲ್ಲರನ್ನೂ, ಎಲ್ಲ ಮಾತಿಗೂ ನಿದರ್ಶನ ಕೊಡಿ ಎಂದು ಪೀಡಿಸುತ್ತಿದ್ದೇನೆ. ಆದರೆ ಬರಗೂರರ ಒಂದು ಮಾತಿಗೆ ಮಾತ್ರ ಇದರಿಂದ ವಿನಾಯಿತಿ. ಸಾಹಿತ್ಯದಲ್ಲಿ ವೈಯಕ್ತಿಕ ಅನುಭವ ಪ್ರಾಮಾಣ್ಯವನ್ನು ಪ್ರಧಾನವಾಗಿಸಿ ಸೂಕ್ಷ್ಮಜ್ಞತೆಯ ನೆಪದಲ್ಲಿ ಸಾಂಸ್ಕೃತಿಕ ಸುಪ್ರೀಮ್ ಕೋರ್ಟ್ ಆಗುವ ಹವಣಿಕೆಯಿಂದ ಕೂಡಿದ ಸಾಂಸ್ಕೃತಿಕ ವಲಯವೊಂದರ ಬಗ್ಗೆ ಹೇಳುತ್ತ ಯಾವುದೇ ಸಾಂಸ್ಕೃತಿಕ ಚಳವಳಿಗಳಿಲ್ಲ ಎಂದು ಹೇಳುತ್ತಲೇ ಅಗೋಚರ ಸಂಘಟನೆಯಲ್ಲಿ ತೊಡಗಿರುವ ವಲಯ ಇದು" ಎಂದು ಬರಗೂರರು ಹೇಳುತ್ತಾರೆ. ಅಗೋಚರ ಸಂಘಟನೆ ಎಂದಮೇಲೆ "ಎಲ್ಲಿದೆ ಅದು ತೋರಿಸಿ" ಎಂದು ಕೇಳುವುದಾದರೂ ಹೇಗೆ? ಬರಗೂರರಿಗೆ ಅಗೋಚರ ವಾಗಿರುವುದು ನಮಗೂ ಅಗೋಚರವೇ ಎಂದು ಸುಮ್ಮನಿರುವುದೇ ಲೇಸು.

● ಜಿ.ರಾಜಶೇಖರ

ಬತ್ತು ಕೋಟಿ ಜೀವ ಜಾಲಗಳನ್ನು
ಯ ವಾರಸುದಾರರೆಂದು ಭಾವಿಸದ
ಗರು

ಮಣಿತದಲ್ಲಿ
ಥನಗಳ ಸಂಭವಿಸಿದ ಸರ್ವಭಾಗ್ಯರು
ದ ಅಣುರೇಣುಗಳ
ಸಿದ ಅನರ್ಘ್ಯರು.

ವಚನ:
ಮಾತುಗಳೆಂದರೆ
ಕೋಲು ಮೇಳವಿಸಿದ
ಲ್ಪಿ.
ಸಂಭವಿತ ಛಂದೋವಿಲಾಸದ
ಲ್ಪಿ.

ಗಳಲ್ಲೂ ಕ್ಷುದ್ರ ಜ್ಯೋತಿಗಳನ್ನು
ರ್ಶನ ದೀಪ್ತಿ
ನ ಪಿದೆಯಾಳದ ಗಾಳಕ್ಕೆ ಸಿಕ್ಕಿ
ಸ ಪಾತ ಸಂಪ್ರೀತಿ

ಉಘೇ :
ಈ ಇಂಥ ಆಯೋನಿಜ ಅಕ್ಷರದ
ಹರಿಕಾರ ಬಳಗ ಪ್ರಜ್ಞೆಗೆ
ಆ ಪ್ರಜ್ಞೆಯಾಳದ ಬಗಲನೇಣಿನ
ಕುಣಿಕೆಯ ಜಾಣ ಹಿರಿಮೆಗೆ

ಇದು ಬರೆದ ಕಾಲವಶದ
ದೇಸಗತಿಯ ಇತಿಹಾಸ ಗರಿಮೆಗೆ
ಉಘೇ ಅನ್ನಪ್ರೋ ಉಘೇ ಅನ್ರೀ
ಉಘೇ ಉಘೇ ಉಘೇ ಉಘೇ

ನೊಸಲಿಕ್ಕಿದ ಪ್ರಮಾಣು:
ಅಪ್ಪಾ ಮಲೆ ಮಹಾಂತ ಗುರುವೇ
ಉಘೇ ಅನ್ನುವವರ ಅರಿವಿನ ತರುವೇ
ಅಲ್ಲದ್ದಕ್ಕೆ ಉಘೇ ಅಂದು
ಮಾತಿನ ಸೂತಕಕ್ಕೊಳಗಾದ
ಈ ಸಿಸುಮಗನ ತಪ್ಪನ್ನ
ಮನ್ನಿಸೂ ಅರಿವಿನ ಗುರುವೇ
ನಾನೇ ಅಂದವರ ನೆಲಕಚ್ಚಿಸುವ
ನಿರಾಳದ ಬಯಲ ತರುವೇ

● ಎಸ್.ಜಿ.ಸಿದ್ಧರಾಮಯ್ಯ

ದೇಶಕಾಲ'ದ ಜೊತೆ

[illegible]

• ಜ್ಯೋತಿ ಗುರುಪ್ರಸಾದ್

ಮಾನವ ಸಮಾಜದ ಸರ್ಕಾರದ ಸ್ವರೂಪವು ಗಣನೀಯವಾಗಿ ಬದಲಾವಣೆ ಗೊಳಪಡುತ್ತ ಸಾಗಿದೆ. ಒಂದು ಕಾಲದಲ್ಲಿ ಆಳ್ವಿಕೆಯು ನಿರಂಕುಶ ಆಡಳಿತಗಾರರಾದ ರಾಜರ ಕೈಯಲ್ಲಿತ್ತು. ಬಹುಕಾಲದ ರಕ್ತಸಿಕ್ತ ಹೋರಾಟದ ನಂತರ ಅದು ಕೊನೆಗೊಂಡು ಸಂಸದೀಯ ಪ್ರಜಾಪ್ರಭುತ್ವವು ಆ ಜಾಗಕ್ಕೆ ಬಂದಿದೆ. 'ಸರ್ಕಾರ ಎಂಬ ಚೌಕಟ್ಟಿನಲ್ಲಿ ಲಭ್ಯವಿರುವ ಅತ್ಯುತ್ತಮ ಆಡಳಿತ ವಿಧಾನ ಇದು' ಎಂದು ಸಂಸದೀಯ ಪ್ರಜಾಪ್ರಭುತ್ವವನ್ನು ಬಣ್ಣಿಸಲಾಗಿತ್ತು. ಹೊಸ ಸಹಸ್ರಮಾನದಲ್ಲಿ ಎಲ್ಲರಿಗೂ ಸಮಾನ ಸ್ವಾತಂತ್ರ್ಯ, ಆಸ್ತಿ, ನೆಮ್ಮದಿಯ ಜೀವನವನ್ನು ಇದು ತರಬಹುದೆಂದು ನಂಬಲಾಗಿತ್ತು. ಆ ತೆರನ ಉನ್ನತ ನಿರೀಕ್ಷೆಗಳನ್ನಿಟ್ಟುಕೊಂಡಿದ್ದು ಸಕಾರಣವೂ ಆಗಿತ್ತು. ಸಂಸದೀಯ ಪ್ರಜಾಸತ್ತೆಯಲ್ಲಿ ಜನರ ಅಭಿಪ್ರಾಯಗಳನ್ನು

ಇಟಲಿ, ಸ್ಪೇನ್, ಜರ್ಮನಿಗಳಲ್ಲಿ ಇದು ಸೋತು ಜನ ಸರ್ವಾಧಿಕಾರಿಗಳನ್ನು ಸ್ವಾಗತಿಸುವಂತಾಯಿತು. ಸರ್ವಾಧಿಕಾರವಷ್ಟೇ ಸಂಸದೀಯ ಪ್ರಜಾಸತ್ತೆಗೆ ವಿರುದ್ಧ ವಾಗಿದ್ದರೆ ಅಷ್ಟೇನೂ ಚಿಂತೆಯಿರಲಿಲ್ಲ. ಸರ್ವಾಧಿಕಾರವನ್ನು ತಡೆಹಿಡಿಯುವಲ್ಲಿ ಇದೂ ಒಂದು ಸಾಧನ ಎಂದು ಸುಮ್ಮನಾಗಿಬಿಡಬಹುದಿತ್ತು. ದುರದೃಷ್ಟವಶಾತ್ ಸರ್ವಾಧಿಕಾರವನ್ನು ವಿರೋಧಿಸುವ ದೇಶಗಳೂ ಕೂಡ ಸಂಸದೀಯ ಪ್ರಜಾ ಪ್ರಭುತ್ವವನ್ನು ವಿರೋಧಿಸಲಾರಂಭಿಸಿದವು. ಇದು ವಿಷಾದಪಡುವ ಸಂಗತಿಯಾಗಿದೆ.

ಇನ್ನೂ ದುಃಖದ ಸಂಗತಿಯೆಂದರೆ ಸಂಸದೀಯ ಪ್ರಜಾಪ್ರಭುತ್ವವು ನಿಂತಲ್ಲಿ ನಿಲ್ಲದೇ ಮೂರೂ ದಿಕ್ಕಿಗೆ ಹರಡಿಕೊಂಡಿದೆ. ಮೊದಲು ಸಮಾನ ಮತಾಧಿಕಾರ ನೀಡುವ ಮೂಲಕ ಸಮಾನ ರಾಜಕೀಯ ಹಕ್ಕುಗಳನ್ನು ನೀಡಲಾಯಿತು. ರಾಜಕೀಯ ಹಕ್ಕುಗಳ ಸಮಾನತೆಯನ್ನು ಸಾಮಾಜಿಕ, ಆರ್ಥಿಕ ಹಕ್ಕುಗಳ

ಎರಡನೆಯ ದೋಷಪೂರ್ಣ ಸಿದ್ಧಾಂತವೆಂದರೆ ಸಾಮಾಜಿಕ, ಆರ್ ಅಸಮಾನತೆಯಿರುವ ಕಡೆ ರಾಜಕೀಯ ಪ್ರಜಾಪ್ರಭುತ್ವ ಸೋಲುತ್ತದೆ ಗುರುತಿಸುವಲ್ಲಿ ವಿಫಲವಾದದ್ದು. ಇಟಲಿ, ಜರ್ಮನಿ, ರಶಿಯಾಗಳಲ್ಲಿ ಸಂಸದೀ ಪ್ರಜಾಪ್ರಭುತ್ವ ಸೋತಿದ್ದಕ್ಕೆ, ಅಮೆರಿಕ ಇಂಗ್ಲೆಂಡುಗಳಲ್ಲಿ ಅದು ಈಗ ಸ್ಥಿರವಾಗಿರುವುದಕ್ಕೆ ಇದೇ ಕಾರಣ. ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭು ರಾಜಕೀಯ ಪ್ರಜಾಪ್ರಭುತ್ವದ ಜೀವಾಳ, ನೂಲು ಗಟ್ಟಿಯಿದ್ದಷ್ಟೂ ಗಟ್ಟಿಯಿರುವ ಹಾಗೆ. ಪ್ರಜಾಪ್ರಭುತ್ವವು ಸಮಾನತೆಗೆ ಇನ್ನೊಂದು ಹೆಸ ಆದರೆ ಸಂಸದೀಯ ಪ್ರಜಾಪ್ರಭುತ್ವವು ಸ್ವಾತಂತ್ರಕ್ಕೆ ನೀಡಿದಷ್ಟು ಮಹತ್ವ ಸಮಾನತೆಗೆ ನೀಡಲಿಲ್ಲ. ಸಮಾನತೆಯ ಪ್ರಾಮುಖ್ಯವನ್ನು ವಿವರಿಸು ವಿಫಲವಾದದ್ದೇ ಅಲ್ಲದೇ ಸ್ವಾತಂತ್ರ ಸಮಾನತೆಗಳ ಸಮತೋ



ಸಂಸದೀಯ ಪ್ರಜಾಪ್ರಭುತ್ವದ ಸೋಲು

ಅಂಬೇಡ್ಕರ್ ಅವರು ಸ್ವಾತಂತ್ರ್ಯ ಬರುವ ನಾಲ್ಕು ವರ್ಷ ಮೊದಲೇ ಸಂಸದೀಯ ಪ್ರಜಾಪ್ರಭುತ್ವದ ಬಗೆಗೆ ಮಾಡಿದ ಭಾಷಣದ ಕನ್ನಡ ಅನುವಾದ ಇಲ್ಲಿದೆ. ಅಂಬೇಡ್ಕರ್ ಅವರು ಆಗ ಹೇಳಿದ ಮಾತುಗಳು ಈಗ prophetic ಆಗಿ ಕೇಳಿಸುತ್ತವೆ. ಸ್ವಾತಂತ್ರ್ಯ ದಿನಾಚರಣೆಯ ವೇಳೆಗೆ ಇದು ಸೂಕ್ತವಾದ್ದರಿಂದ ಅದನ್ನು ಪ್ರಕಟಿಸುತ್ತಿದ್ದೇವೆ.

ಇಂಗ್ಲಿಷ್ ಮೂಲ: ಡಾ.ಬಿ.ಆರ್.ಅಂಬೇಡ್ಕರ್
([illegible])
ಕನ್ನಡಕ್ಕೆ: ಡಾ. ಎಚ್.ಎಸ್.ಅನುಪಮಾ

ವ್ಯಕ್ತಪಡಿಸಲು ಶಾಸಕಾಂಗವಿದೆ: ಶಾಸಕಾಂಗದ ಅಡಿಯಾಳಾಗಿ ಹಾಗೂ ವಿಧೇಯವಾಗಿರುವಂತೆ ಕಾರ್ಯಾಂಗವಿದೆ: ಎಲ್ಲಕ್ಕೂ ಶಿಖರಪ್ರಾಯವಾಗಿ ಹಾಗೂ ಇವೆರಡೂ ಅಂಕೆ ಮೀರದ ಹಾಗೆ ನಿಯಂತ್ರಣದಲ್ಲಿಡಲು ನ್ಯಾಯಾಂಗವಿದೆ. ಜನರಿಂದ, ಜನರಿಗಾಗಿ, ಜನರೇ ನಡೆಸುವ ಜನಪ್ರಿಯ ಸರ್ಕಾರವಾಗುವ ಎಲ್ಲ ಉತ್ತಮ ಲಕ್ಷಣಗಳೂ ಸಂಸದೀಯ ಪ್ರಜಾಪ್ರಭುತ್ವದಲ್ಲಿದೆ. ಇಂತಹ ವ್ಯವಸ್ಥೆಯ ವಿರುದ್ಧ - ಅದನ್ನು ಎಲ್ಲೆಡೆ ಒಪ್ಪಿಕೊಂಡು ಒಂದು ಶತಮಾನ ಕಳೆಯುವುದರೊಳಗೇ - ವಿರೋಧ ಕಂಡುಬರುತ್ತಿರುವುದು ಆಶ್ಚರ್ಯಕರವಾಗಿದೆ. ಇಟಲಿ, ಜರ್ಮನಿ, ರಶಿಯಾ, ಸ್ಪೇನ್‌ಗಳಲ್ಲಿ ಅಲ್ಲದೇ ಇನ್ನೂ ಕೆಲವು ದೇಶಗಳಲ್ಲಿ ಸಂಸದೀಯ ಪ್ರಜಾಪ್ರಭುತ್ವದ ಬಗೆಗೆ ಅಸಮಾಧಾನ, ಅತೃಪ್ತಿ ಹೊಗೆಯಾಡುತ್ತಿದೆ. ಏಕೆ ಈ ರೀತಿಯ ಅಸಮ್ಮತಿ ಮತ್ತು ಅತೃಪ್ತಿ? ಈ ಪ್ರಶ್ನೆಗಳನ್ನು ಕೂಡಲೇ ಗಣನೆಗೆ ತೆಗೆದುಕೊಂಡು ಉತ್ತರಿಸಬೇಕಾದ ತುರ್ತು ಇತರ ಎಲ್ಲ ದೇಶಗಳಿಗಿಂತ ಹೆಚ್ಚಾಗಿ ಭಾರತಕ್ಕೆ ಇದೆ. ಭಾರತವು ಅಂತಹ ಒಂದು ವ್ಯವಸ್ಥೆಯನ್ನು ಹೊಂದುವ ಹೊಸ್ತಿಲಲ್ಲಿ ನಿಂತಿರುವಾಗ ಯಾರಾದರೂ 'ತಡೆಯಿರಿ. ನಾವಂದುಕೊಂಡಷ್ಟು ಅತ್ಯುತ್ತಮ ಸರಕು ಇದಲ್ಲ' ಎಂದು ಹೇಳುವ ಧೈರ್ಯ ತೋರಬೇಕಾಗಿದೆ.

ಸಂಸದೀಯ ಪ್ರಜಾಸತ್ತೆ ಏಕೆ ವಿಫಲವಾಯಿತು?

ಇದೊಂದು ನಿಧಾನವಾಗಿ ಚಲಿಸುವ ಯಂತ್ರ. ವೇಗದ ಕ್ರಿಯೆಯನ್ನು ನಿಧಾನಗೊಳಿಸುತ್ತದೆ. ಆದ್ದರಿಂದ ಸರ್ವಾಧಿಕಾರಿ ಮನಸ್ಸುಗಳಿರುವಲ್ಲಿ ಇದು ಸೋತಿತು. ಸಂಸದೀಯ ಪ್ರಜಾಸತ್ತೆಯಲ್ಲಿ ಕಾರ್ಯಾಂಗಕ್ಕೆ ಅನುಕೂಲವಾಗುವಂತಹ ನೀತಿನಿಯಮ ರೂಪಿಸುವುದನ್ನು ಶಾಸಕಾಂಗ ತಡೆಹಿಡಿಯಬಹುದು ಅಥವಾ ಶಾಸಕಾಂಗ ರೂಪಿಸಿದ ಕಾನೂನನ್ನು ನ್ಯಾಯಾಂಗ ತಡೆ ಹಿಡಿಯಬಹುದು. ಸಂಸದೀಯ ಪ್ರಜಾಸತ್ತೆ ಸರ್ವಾಧಿಕಾರಕ್ಕೆ ಮುಕ್ತ ಹಸ್ತ ನೀಡುವುದಿಲ್ಲ. ಹೀಗಾಗಿಯೇ ಸಮಾನತೆಯಿಂದೂ ವಿವರಿಸಲಾಯಿತು. ಸಮಾಜ ವಿರೋಧೀ ಉದ್ದೇಶ ಹೊಂದಿದ ಸಂಸ್ಥೆಗಳಿಂದ ದೇಶವು ಹಿಡಿತಕ್ಕೊಳಗಾಗದಂತೆ ನೋಡಿಕೊಳ್ಳಲಾಯಿತು. ಇದೆಲ್ಲ ಇದ್ದೂ ಪ್ರಜಾಪ್ರಭುತ್ವಕ್ಕೆ ಬದ್ಧವಾದ ದೇಶಗಳಲ್ಲೂ ಇದಕ್ಕೆ ವಿರೋಧ, ಅತೃಪ್ತಿ ಶುರುವಾಗಿದೆ. ಈ ದೇಶಗಳ ಅತೃಪ್ತಿಗೂ ಸರ್ವಾಧಿಕಾರೀ ದೇಶಗಳ ಅತೃಪ್ತಿಗೂ ಬೇರೆ ಬೇರೆ ಕಾರಣಗಳಿವೆ. ಒಟ್ಟಾರೆ ಹೇಳಬೇಕೆಂದರೆ ಈ ಅತೃಪ್ತಿಯ ಮೂಲ ಸಂಸದೀಯ ಪ್ರಜಾಸತ್ತೆಯು ಜನರಿಗೆ ಸ್ವಾತಂತ್ರ್ಯ, ಆಸ್ತಿ ಮತ್ತು ನೆಮ್ಮದಿಯ ಬದುಕಿನ ಹಕ್ಕು ಕಲ್ಪಿಸುವಲ್ಲಿ ವಿಫಲವಾಗಿದ್ದೇ ಆಗಿದೆ. ವಿಫಲತೆಗೆ ಕಾರಣ ತಪ್ಪು ಸಿದ್ಧಾಂತಗಳಾಗಿರಬಹುದು, ತಪ್ಪು ಸಂಘಟನೆಯಾಗಿರಬಹುದು ಅಥವಾ ಅವೆರಡೂ ಕಾರಣವಾಗಿರಬಹುದು.

ಸಂಸದೀಯ ಪ್ರಜಾಪ್ರಭುತ್ವ ವಿಫಲವಾಗಲು ಕಾರಣವಾದ ದೋಷಪೂರ್ಣ ಐಡಿಯಾಲಜಿಗಳಲ್ಲಿ 'ಗುತ್ತಿಗೆಯ ಸ್ವಾತಂತ್ರ' ಮೊದಲನೆಯದು ಎಂಬ ಬಗೆಗೆ ನನ್ನಲ್ಲಿ ಅನುಮಾನವಿಲ್ಲ. ಸ್ವಾತಂತ್ರ ನೀಡುವ ನೆಪದಲ್ಲಿ 'ಗುತ್ತಿಗೆ ಸ್ವಾತಂತ್ರ'ವನ್ನು ಪವಿತ್ರಗೊಳಿಸಿ ಊರ್ಜಿತಗೊಳಿಸಲಾಯಿತು. ಸಂಸದೀಯ ಪ್ರಜಾಪ್ರಭುತ್ವವು ಆರ್ಥಿಕ ಅಸಮಾನತೆಯನ್ನು ಗಣನೆಗೆ ತೆಗೆದುಕೊಳ್ಳದೇ, ಈ ಸ್ವಾತಂತ್ರ್ಯದಿಂದ ಉಂಟಾಗುವ ಗ್ರಾಹಕ ಉತ್ಪಾದಕರ ನಡುವಿನ ಆರ್ಥಿಕ ಅಂತರವನ್ನೂ ಗಮನಿಸದೇ, ಗುತ್ತಿಗೆಯ ಪರಿಣಾಮಗಳನ್ನೂ ಲೆಕ್ಕಿಸದೇ, ಗ್ರಾಹಕನ ಸೀಮಿತವಾದ ಕೊಳ್ಳುವ ಶಕ್ತಿಯನ್ನೂ ನೋಡದೆ, ಗುತ್ತಿಗೆಯ ಸ್ವಾತಂತ್ರವನ್ನು ನೀಡಿತು. ಸಬಲರು ದುರ್ಬಲರನ್ನು ಮೋಸಮಾಡಬಹುದಾದ ಸಾಧ್ಯತೆಯನ್ನು ಲೆಕ್ಕಕ್ಕೇ ತೆಗೆದುಕೊಳ್ಳಲಿಲ್ಲ. ಹೀಗಾಗಿ ಸ್ವಾತಂತ್ರದ ವಕ್ತಾರನಾಗಿ ನಿಂತ ಸಂಸದೀಯ ಪ್ರಜಾಪ್ರಭುತ್ವವು ಸತತ ಆರ್ಥಿಕ ತಪ್ಪುಗಳನ್ನು ಬಡವರ ಮೇಲೆ, ಕೆಳವರ್ಗದವರ ಮೇಲೆ ಹೇರುತ್ತ ಬಂದಿತು.

ಕಾಪಾಡುವಲ್ಲಿಯೂ ಅದು ವಿಫಲವಾಯಿತು. ಈ ಕಾರಣಕ್ಕೇ ಸ್ವಾತಂತ್ ಸಮಾನತೆಯನ್ನು ನುಂಗಿಹಾಕಿತು ಮತ್ತು ಪ್ರಜಾಪ್ರಭುತ್ವವೊಂದು ತಮಾಷೆ ಆಟ ಮತ್ತು ಪ್ರಹಸನವಾಯಿತು.


ಮೇಲಿನ ದೋಷಪೂರ್ಣ ಐಡಿಯಾಲಜಿಗಳಷ್ಟೇ ಅಲ್ಲದೇ ದೋಷಪೂ ಸಂಘಟನೆಯೂ ಇದರ ವಿಫಲತೆಗೆ ಮತ್ತೊಂದು ಕಾರಣವಾಗಿದೆ. ಎಲ್ಲ ರಾಜಕೀ ಸಮಾಜಗಳೂ ಎರಡು ಭಾಗಗಳಾಗಿ ವಿಭಜನೆಗೊಳ್ಳುತ್ತವೆ - ಆಳುವವ ಮತ್ತು ಆಳಿಸಿಕೊಳ್ಳುವವರು. ಇದು ಕೆಟ್ಟದು. ಇದು ನಿಲ್ಲದೇ ಹೋದ ಆಳುವ ವರ್ಗವು ಆಳಿಸಿಕೊಳ್ಳುವ ಜನರಿಂದ ನಿರಂತರ ದೂರ ಸರಿಯು ಹೋಗುತ್ತದೆ. ಹೀಗಾಗಲು ಮುಖ್ಯ ಕಾರಣ ತಮ್ಮನ್ನು ತಾವೇ ಆಳಿಕೊ ತ್ತಿದ್ದೇವೆಂದು ತಿಳಿಯುವಲ್ಲಿ ಜನರು ವಿಫಲರಾಗುವುದು. ಜನತೆ ಒಂ ಸರ್ಕಾರವನ್ನು ಸ್ಥಾಪಿಸಿ, ತಮ್ಮ ಮೇಲೆ ಆಡಳಿತ ನಡೆಸಲಿ ಎಂದು ಬಿ ಅಷ್ಟಕ್ಕೇ ತೃಪ್ತಿಹೊಂದಿಬಿಡುತ್ತಾರೆ. ಈ ಕಾರಣದಿಂದ ಸಂಸದೀಯ ವ್ಯವಸ್ಥೆ ಜನರಿಂದ ನಡೆಯುವ ಜನರ ಸರ್ಕಾರವಾಗದೇ, ವಾಸ್ತವದಲ್ಲಿ ವಂಶಪಾರಂಪ ವಾಗಿ ಆಳಿಸಿಕೊಳ್ಳುವ ವರ್ಗವನ್ನು ವಂಶಪಾರಂಪರ್ಯವಾಗಿ ಆಳುವ ವರ್ ನಡೆಸುವ ಸರ್ಕಾರವಾಗಿಬಿಟ್ಟಿದೆ. ರಾಜಕೀಯದ ಈ ವಿಷಮರ್ತುಲವು ಪ್ರಜಾಪ್ರಭು ದಯನೀಯವಾಗಿ ಸೋಲಲು ಕಾರಣವಾಗಿದೆ. ಹೀಗಾಗಿಯೇ ಸಾಮ ಮನುಷ್ಯನಿಗೆ ಸ್ವಾತಂತ್ರ್ಯ ಆಸ್ತಿ ನೆಮ್ಮದಿಯ ಜೀವನ ನಡೆಸುವ ಹಕ್ಕು ನೀಡು ಸಂಸದೀಯ ಪ್ರಜಾಪ್ರಭುತ್ವವು ವಿಫಲಗೊಂಡಿದೆ.

(ಆಲ್ ಇಂಡಿಯಾ ಟ್ರೇಡ್ ಯೂನಿಯನ್ ವರ್ಕರ್ಸ್ ಸ್ಟಡಿ ಕ್ಯಾಂ ದೆಹಲಿಯಲ್ಲಿ 17-9-1943ರಲ್ಲಿ ಮಾಡಿದ ಭಾಷಣ.)

ಸೇನೆಯವರಿಂದ 'ಮಾನಹರಣ'

ಮಂಗಳೂರಿನ ಬಲ್ಲಾಳ್ ಬಾಗ್ ಎಂಬಲ್ಲಿ ಶ್ರೀದೇವಿ ಕಾಲೇಜ್ ಎಂಬ ಪ್ರತಿಷ್ಠಿತ ಕಾಲೇಜ್ ಇದೆ. ಇಲ್ಲಿಗೆ ದೇಶದ ನಾನಾ ಭಾಗಗಳಿಂದ ಅಂದರೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ಬರುತ್ತಾರೆ. ವಿದ್ಯಾರ್ಥಿಗಳಿಗೆ ಬೇಕಾದಷ್ಟು ಹಾಸ್ಟೆಲ್ ಸೌಲಭ್ಯವಿಲ್ಲದ ಕಾರಣ ಇವರು ಕಾಲೇಜಿನ ಸುತ್ತಮುತ್ತಲಿನ ಮನೆ ಅಥವಾ ಫ್ಲ್ಯಾಟನ್ನು ಬಾಡಿಗೆಗೆ ಪಡೆದುಕೊಂಡು, ಏಳೆಂಟು ಜನರು ಒಟ್ಟಾಗಿ ವಾಸಿಸುತ್ತಾರೆ. ಇಂತಹ ಮನೆಗಳ ಮಾಲೀಕರು ಕೊಲ್ಲಿ ರಾಷ್ಟ್ರದಲ್ಲೋ ಅಮೆರಿಕಾದಲ್ಲೋ ಇರುತ್ತಾರೆ. ಹೀಗಾಗಿ ಬಹಳ ದಿನಗಳಿಂದ ಬಂದ್ ಮಾಡಿದ್ದ ಮನೆಗಳನ್ನು ಕ್ಲೀನ್ ಮಾಡುವುದು ಇವರಿಗೆ ಕೆಲವೊಮ್ಮೆ ಸಮಸ್ಯೆಯಾಗಿರುತ್ತದೆ. ಮನೆಗೆಲಸ ಮಾಡುವ ಹುಡುಗಿಯರನ್ನು ಕರೆದೊಯ್ದು ಮನೆ ಶುಚಿ ಮಾಡಿಸಿಕೊಂಡು ಅವರಿಗೆ ಐವತ್ತೋ, ನೂರೊ ರೂಪಾಯಿ ಕೊಟ್ಟು ಕಳುಹಿಸುತ್ತಾರೆ.

ಐದಾರು ಮನೆಗಳಲ್ಲಿ ಕೆಲಸ ಮಾಡುವ ಹುಡುಗಿ (25 ವರ್ಷ ಪ್ರಾಯ)ಯನ್ನು ದಿನಾಂಕ 23 ರ ಸಾಯಂಕಾಲ ಒಬ್ಬ ಹುಡುಗನು ತನ್ನ ಮನೆ ಕ್ಲೀನ್ ಮಾಡಲು ಕರೆದೊಯ್ದನು. ಈ ಮನೆಗೆ ಬಂದ ಹುಡುಗರು ಮುಸ್ಲಿಮರಾಗಿದ್ದರು. ಆ ಸ್ಥಳ ದಳ ಮತ್ತು ಸೇನೆಗಳ ವಾಸಸ್ಥಾನವಾಗಿದ್ದು ಕೆಲವು ವರ್ಷಗಳ ಹಿಂದೆ ಮುಸ್ಲಿಂ ಮೌಲ್ವಿಯೊಬ್ಬರ ಕೊಲೆಯಾದ ಪರಿಸರದಲ್ಲಿದೆ. ಮುಸ್ಲಿಂ ಹುಡುಗರಿರುವಲ್ಲಿಗೆ ಹಿಂದೂ ಹುಡುಗಿ ಹೋಗುವುದನ್ನು ಕಂಡ ಸೇನೆಗಳಿಗೆ ರಕ್ತ ಕುದಿಯತೊಡಗಿತು. ಕೂಡಲೇ



ಸುವರ್ಣ ಟಿವಿ ಚಾನೆಲ್‌ನವರನ್ನೂ, ಪೊಲೀಸರನ್ನೂ ಕರೆಸಿಕೊಂಡು ಮನೆಗೆ ನುಗ್ಗಿದರು. ಮಂಚ ಹತ್ತಿ ಫ್ಯಾನ್ ಒರೆಸುತ್ತಿದ್ದ ಹುಡುಗಿ ಗಲಾಟೆ ಕೇಳಿ ಹೊರಬಂದಳು. ಕೋಣೆಯ ಬಾಗಿಲು ತೆರೆದೇ ಇತ್ತು. ನಿಂತು ಕೆಲಸ ಮಾಡಿಸುತ್ತಿದ್ದ ಹುಡುಗನೂ ಹೊರಬರುತ್ತಿದ್ದಂತೆಯೇ ಬಂದವರು ಆತನನ್ನು ಒಳಗೆ ತಳ್ಳಿದರು. ಟಿವಿ ಚಾನಲ್‌ನವರು ಹುಡುಗಿ ಮತ್ತು ಹುಡುಗರ ವೀಡಿಯೊ ಚಿತ್ರ ತೆಗೆದರು. ಹುಡುಗಿ ಜೋರಾಗಿ "ಎಂತದು ಸಾರ್ ಹಾಗೆಲ್ಲ ಹೇಳುವುದು? ನಾನು ಇಲ್ಲಿ ಕೆಲಸಕ್ಕೆ ಬಂದವಳು" ಎನ್ನುತ್ತಿದ್ದಂತೆ ಪೊಲೀಸರು ದಬಾಯಿಸಿ ಆಕೆಯ ಬಾಯಿ ಮುಚ್ಚಿಸಿ ಆಕೆಯ ಕೈಯಲ್ಲಿದ್ದ ಮೊಬೈಲ್ ಕಿತ್ತುಕೊಂಡರು. ಇಂತಹದೊಂದು 'ಬಿಸಿ ಸುದ್ದಿ' ದೊರೆತದ್ದು ಸುವರ್ಣ ಚಾನಲ್‌ನವರಿಗೆ ಬಹಳ ಸಂತೋಷವಾಯಿತು. ಇವರು ಈ ಹುಡುಗಿ ಮತ್ತು ಇತರ ನಾಲ್ಕೈದು ಹುಡುಗರ ಮುಖವನ್ನು ಮತ್ತೆ ಮತ್ತೆ ತೋರಿಸುತ್ತಾ ಸಂಭ್ರಮಿಸಿದರು. ಕೊನೆಗೆ ದೊಡ್ಡ ಅಕ್ಷರದಲ್ಲಿ "ಇವರು ಶ್ರೀದೇವಿ ಕಾಲೇಜಿನ ವಿದ್ಯಾರ್ಥಿಗಳು" ಎಂದು ತೋರಿಸಿದರು.

ಈ ಹುಡುಗಿ ಕಳೆದ ಒಂದೂವರೆ ವರ್ಷದಿಂದ ನನ್ನ ಮನೆಯಲ್ಲಿ ಕೆಲಸ ಮಾಡುತ್ತಿದ್ದು ಕಳೆದ ಕೆಲವು ವರ್ಷಗಳಿಂದ ನನಗೆ ಆಕೆಯ ಪರಿಚಯವಿದೆ. ಇವಳ ತಾಯಿ ಮತ್ತು ಇವಳು ಮನೆ ಕೆಲಸ ಮಾಡಿಯೇ ಹೊಟ್ಟೆ ಹೊರೆಯುತ್ತಾರೆ. ಕೆಲವೊಮ್ಮೆ ಹಸಿವೆಯಿಂದ ನರಳುವುದನ್ನೂ ನಾನು ನೋಡಿದ್ದೇನೆ. ಆನೆಗುಂಡಿ ಎಂಬಲ್ಲಿ ಒಂದು ಪುಟ್ಟ ಮನೆಯ ಒಂದು ಕೋಣೆಯಲ್ಲಿ ಇವಳು ತಾಯಿ, ತಮ್ಮನೊಡನೆ ವಾಸಿಸುತ್ತಾಳೆ. ಮಳೆಗಾಲಕ್ಕೆಂದು ಅಲ್ಲಲ್ಲಿ ಬಿದ್ದಿದ್ದ ರೆಂಬೆ ಕೊಂಬೆಗಳನ್ನು ಜೋಡಿಸಿ ತಲೆ ಮೇಲೆ ಹೊತ್ತುಕೊಂಡು ಮನೆಗೆ ಹೋಗುತ್ತಾಳೆ. ಕೆಲಸ ತಪ್ಪಿಸಿಕೊಳ್ಳುವ ಮೈಗಳ್ಳಿಯೂ ಅಲ್ಲ, ಆವಳ ವೇಷಭೂಷಣ ನೋಡಿದರೇನೇ ಅವಳು ಈ ರೀತಿ ಮನೆಗೆಲಸಕ್ಕೆ ಹೋಗುವವಳು ಎಂದು ತಿಳಿಯುತ್ತದೆ.

ಮರುದಿನ ನಮ್ಮ ಮನೆಗೆ ಬಂದವಳು ಎಲ್ಲವನ್ನೂ ಹೇಳಿ ಅಳುತ್ತಾ "ಅಮ್ಮಾ, ನಾನು ಆ ರೀತಿ ಹಣ ಸಂಪಾದನೆ ಮಾಡುವುದಾದರೆ ಇಂತಹ ಬಡತನದಲ್ಲಿ ಬದುಕಬೇಕಾಗಿದೆಯಾ? ನಮಗೆ ಮರ್ಯಾದೆ ದೊಡ್ಡದು. ಈಗ ಈ ಟಿವಿಯವರು ನನ್ನ ಮರ್ಯಾದೆ ತೆಗೆದರಲ್ಲಾ? ಪತ್ರಿಕೆಯವರೂ (ವಿಜಯ ಕಿರಣ) ನನ್ನ ಫೋಟೋ ಕೂಡಾ ಹಾಕಿದ್ದಾರೆ. ನಾನು ಏನೂ ತಪ್ಪು ಮಾಡದೆ ನನಗೆ ಇಂತಹ ಶಿಕ್ಷೆ ನೀಡಿದರಲ್ಲಾ? ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ. ಈಗ ಬೇರೆ ಹುಡುಗರು, 'ನೀನು ನಮ್ಮ ಜೊತೆ ಬಾ, ನಿನಗೆ ಮುಸ್ಲಿಂ ಹುಡುಗರೇ ಬೇಕಾ? ಹಿಂದೂ ಹುಡುಗರಾಗುವುದಿಲ್ಲವಾ?' ಎಂದು ಕೇಳುತ್ತಾರೆ. ಇನ್ನು ನಾನು ಯಾಕೆ ಬದುಕುವುದು?' ಎಂದೆಲ್ಲ ಅತ್ತಳು. ನಾನು ಅವಳನ್ನು ಸಂತೈಸಿ ಕಳುಹಿಸಿದೆ. ಪೊಲೀಸ್ ಸ್ಟೇಷನ್ನಿನಲ್ಲೂ ಸಾಕಷ್ಟು 'ಪೊಲೀಸ್' ಬೈಗಳಗಳನ್ನು ಕೇಳಬೇಕಾಯಿತು. ಅವಳ ತಾಯಿಯನ್ನು ಠಾಣೆಗೆ ಕರೆಸಿ 150 ರೂಪಾಯಿ ಪಡೆದುಕೊಂಡು ಅದಕ್ಕೆ ರಸೀದಿ ನೀಡಿ ಬಳಿಕ ರಸೀದಿಯನ್ನು ಹಿಂದೆ ಪಡೆದುಕೊಂಡು ಹರಿದು ಹಾಕಿದರಂತೆ. ಎಂಟು ಜನ ಹುಡುಗರನ್ನೂ ಠಾಣೆಗೆ ಕರೆಸಿ, ಒಬ್ಬ ಹುಡುಗನೊಡನೆ, "ನೀನು ಅವಳನ್ನು ಮದುವೆಯಾಗು" ಎಂದರಂತೆ. "ಅವಳಿಗೆ ಎಷ್ಟು ಹಣ ಕೊಟ್ಟಿದ್ದಿ" ಎಂಬ ವಿಚಾರಣೆಯೂ ಆಯಿತು. ಪೊಲೀಸರಿಗೆ ಅಷ್ಟು ಅನುಮಾನವಿದ್ದಿದ್ದರೆ ಅವಳನ್ನು ಡಾಕ್ಟರ್ ಬಳಿಗೆ ಕರೆದೊಯ್ದು ಪರೀಕ್ಷೆ ಮಾಡಿಸಬೇಕಾಗಿತ್ತು ಎನ್ನುತ್ತಾಳೆ ಅವಳು. ಹಾಗೇನೂ ಮಾಡಿಲ್ಲ; ಮೊಕದ್ದಮೆ ಹೂಡಿಯೂ ಇಲ್ಲ. ಪೊಲೀಸರು, ಸುವರ್ಣ ಸುದ್ದಿ ಚಾನಲ್ ಮತ್ತು ರಾಮಸೇನೆ ಸೇರಿಕೊಂಡು ಓರ್ವ ಬಡ ಹುಡುಗಿಯ ಮಾನ ಹರಾಜು ಹಾಕಿ ಆಕೆಯನ್ನು ಆತ್ಮಹತ್ಯೆಯ ಸಮೀಪ ತಂದು ನಿಲ್ಲಿಸಿದರು. ನಾನು ಆಕೆಯೊಡನೆ ಈ ರೀತಿ ಹೇಳಿದೆ: "ಈಗ ಯಾರೂ ಯಾರೊಡನೆಯೂ ಬದುಕಬಹುದು. ಮದ ಕೂಡಾ ಆಗಬೇಕಾಗಿಲ್ಲ ಎಂದು ಶ್ರೇಷ್ಠ ನ್ಯಾಯಾಲಯ ತೀರ್ಪು ನೀಡಿ ಆದರೆ ಸಮಾಜ ಅದನ್ನು ಸುಲಭದಲ್ಲಿ ಒಪ್ಪಿಕೊಳ್ಳದು. ಆದರೆ ಇನ್ನೊಬ್ಬರ ಪ್ರಶ್ನಿಸುವ ಅಧಿಕಾರ ಯಾರಿಗೂ ಇಲ್ಲ. ನೀನು ಸಹನೆ ತಂದುಕೊ. 'ಬ ಬೇಕು; ಇದ್ದು ಜಯಿಸಬೇಕು, ಎಂಬುದನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇ ಆತ್ಮಹತ್ಯೆ ಯಾವುದಕ್ಕೂ ಪರಿಹಾರವಲ್ಲ. ನಿನ್ನ ತಾಯಿಗೆ ಮಗಳಿಲ್ಲದಂತಾಗುತ್ತ ಎಂದೆಲ್ಲ ಕೊರೆದು ಮನೆಗೆ ಕಳಿಸಿದೆ. ಈ ಕೋಮುವಾದಿಗಳು ಆಕೆ ಠಾಣೆಯಿ ಹೊರಬಂದೊಡನೆ ಆಕೆಗೆ ಬುದ್ಧಿ ಹೇಳಿದರು. "ನೀನು ಮುಸ್ಲಿಮರ ಕೆಲಸಕ್ಕೆ ಹೋಗಬಾರದು. ನಾವು ಹಿಂದೂಗಳು ಮುಸ್ಲಿಮರಿಗಿಂತ ಮೇಲಿರುವವ ಮುಸ್ಲಿಮರು ನಮ್ಮ ಮನೆಗೆ ಬಂದು ಕೆಲಸ ಮಾಡಬೇಕೇ ಹೊರತು ನಾ ಅವರ ಮನೆಗೆ ಕೆಲಸಕ್ಕೆ ಹೋಗಬಾರದು" ಎಂದರಂತೆ. ಈ ಜನ ಮೂಢನಂಬಿಕೆಯಿಂದ ಈ ಬಡವರ ಮೆದುಳು ತೊಳೆಯುವ ಕೆಲಸ ಮಾ ಹಣ ಸಂಪಾದನೆಗೂ ದಾರಿಮಾಡಿಕೊಂಡಿದ್ದಾರೆ. ಕಳೆದ ವರ್ಷ ಇವ ಧರ್ಮಸ್ಥಳದಲ್ಲಿ ದೀಪ ಉರಿಸಲು ಎಣ್ಣೆ ಇಲ್ಲವೆಂದೂ, ಗಂಡುಮಕ್ಕಳಿರು ಮನೆಯವರೆಲ್ಲರೂ ಕನಿಷ್ಠ ಒಂದು ಲೀಟರ್ ಎಣ್ಣೆ ಕೊಡಬೇಕೆಂದೂ ಇಲ್ಲವಾದ ಈ ಗಂಡು ಮಕ್ಕಳಿಗೆ ಕಷ್ಟ ಬರುತ್ತದೆಂದೂ ಹೇಳಿ ದಬ್ಬಡಬ್ಬ ಎಣ್ಣೆ ವಸೂ ಮಾಡಿಕೊಂಡೊಯ್ದಿದ್ದಾರೆನ್ನ ಲಾಗಿದೆ. ಈ ಕೋಮುವಾದಿಗಳಿಗೆ ಮು ಹುಡುಗರು ಈ ಕಾಲೇಜಿಗೆ ಸೇರಿಕೊಂಡು ಶಿಕ್ಷಣ ಪಡೆಯುವುದ ಸಹಿಸಲಾಗುವುದಿಲ್ಲ. ಅವರನ್ನು ಇಲ್ಲಿಂದ ಓಡಿಸಲು ಇವರು ಕಂಡುಹಿಡಿ ಉಪಾಯ ಇದು. ಹೊರ ರಾಜ್ಯದಿಂದ ಬಂದ ಈ ವಿದ್ಯಾರ್ಥಿಗಳು ಇ ಭಾಷೆ ತಿಳಿಯದೆ, ಇಲ್ಲಿ ಯಾರೂ ಪರಿಚಯಸ್ಥರೂ ಇಲ್ಲದೆ ಕಂಗಾಲಾಗಿದ್

ನಾವು ಹಿಂದೂಗಳು ಮುಸ್ಲಿಮರಿಗಿಂತ ಶ್ರೇಷ್ಠರು; ಹಿಂದೂ ನಾವ ಒಂದು ಎನ್ನುತ್ತಲೇ ಓರ್ವ ಹಿಂದೂ ಹುಡುಗಿ ಅನೈತಿಕ ದಂಧೆಯ ತೊಡಗಿದ್ದಾಳೆಂದು ಸಾರ್ವಜನಿಕವಾಗಿ ಆಕೆಯ ಮಾನ ಕಳೆಯಲು, ಇಪ್ಪತ್ತೊಂದನೇ ಶತಮಾನದಲ್ಲೂ ಅವರ ತಲೆಯ ಮೇಲೆ ಮಲ ಹೊರಿಸಲ ಅವರಿಗೆ ಮಲ ತಿನ್ನಿಸಲು, ಅವರ ಗುಡಿಸಲುಗಳಿಗೆ ಬೆಂಕಿ ಹಚ್ಚಲು, ಸಾಮೂಹಿ ಅತ್ಯಾಚಾರ ಮಾಡಲು, ಕೊನೆಗೆ ಅವರ ಕೊಲೆ ಮಾಡಲು ಯಾವ ಹಿಂಜರಿಕೆಯ ಉಂಟಾಗುವುದಿಲ್ಲ, ಅಲ್ಲವಾ? ಇದೇ ಸಂದರ್ಭದಲ್ಲಿ ಇನ್ನೂ ಒಂದು ವಿಷ ಹೇಳಬೇಕಾಗಿದೆ. ಶ್ರೀದೇವಿ ಕಾಲೇಜಿಗೆ ಎರಡು ವರ್ಷಗಳ ಹಿಂದೆ ಗುಜರಾತಿನಿ ಬಂದ ಕೆಲವು ವಿದ್ಯಾರ್ಥಿಗಳು ನನ್ನ ಮಹಡಿಯ ಮೇಲೆ ವಾಸಿಸುತ್ತಿದ್ದರು. ಮೂವ ಹಿಂದೂಗಳೂ ಇಬ್ಬರು ಮುಸ್ಲಿಮರೂ ಇದ್ದರು. ಗುಜರಾತಿನಿಂದ ಬಂದ ಇವ ಅಣ್ಣತಮ್ಮಂದಿರಂತೆ ಬದುಕುತ್ತಿದ್ದುದನ್ನು ಕಂಡು ನನಗೆ ಆಶ್ಚರ್ಯವಾಗಿತ್ತು. ಇವರ ಅಡಿಗೆಗಾಗಿ ಓರ್ವ ಕ್ರೈಸ್ತ ಹುಡುಗನೂ ಇದ್ದನು! ದಯವಿಟ್ಟು ಈ ಸೌಹಾರ್ದಯು ವಾತಾವರಣವನ್ನು ಕಲಕಬೇಡಿ ಎಂದಷ್ಟೇ ನನ್ನ ವಿನಂತಿ.

• ಸಾರಾ ಅಬೂಬಕ್ಕರ್

..ಾಡಿ ರಾಮುಲು ಬಳ್ಳಾರಿ ಜನನೆ ಎತ್ತಿ ಕಟ್ಟಿದ್ದನಂತೆ!

..ಂತುರು ಮಳೆಗೆ ಬಿತ್ತನೆ ಕಾರ್ಯ ಮುಗಿಸಿದ ..ವ. ಇನ್ನುಳಿದ ಕರ್ತವ್ಯಗಳನ್ನು ದೇವರ ಪಾಲಿಗೆ ..ವನಂತೆ ನಿರಾಳವಾಗಿ ಕೂತಿದ್ದ ಆಗ ಕಾಣಿಸಿಕೊಂಡ

..ಳ್ಳಾರಿ ಕಡಿಕೆ ವಂಟೋರು ಎಲ್ಲವ್ರುರ್ಲ ಉಗ್ರಿ?"

..ಯು ಲು ಸೀ ಮೆ ..ಹುಟ್ಟೇಪುರಾಣ

▶ಬಿ. ಚಂದ್ರೇಗೌಡ

..ವುರಾಗ್ಲೆ ಚಳ್ಳಕ್ಕರೆ ಬುಟ್ಟು ಮುಂದೋಯ್ತಾ ..ತೆ."

..ದೇಟು ದಿನ ನ್ಯಡಿತರ್ಲ? ಮನುಸು ಮಾಡಿದ್ರೆ ..ನಾಕು ದಿನದಲ್ಲಿ ಹೋಗಬಹುದು. ನಾವು ..ಮು ದಸರ ನೋಡಕ್ಕೆ ಯರಡೇ ದಿನದಲ್ಲಿ ..ಟ್ಟಿದ್ದೊ" ಎಂದ ಸೀರ.

..ನು ನಾಯಿ ಹೋದಂಗೆ ಹೋಯ್ತಿದ್ದಪ್ಪ. ..ನೋರು ಅಂಗೋಗಕ್ಕಾದತ್ತೇ? ಉದ್ದಕ್ಕೂ ..ಕಸೋ ಜನ, ಆರತಿ ಬೆಳಗೋ ಜನನ್ಯಲ್ಲ ..ಸಿಗಂಡು ಹೋಗಬೇಕಲ್ಲ."

..ರತಿನೂ ಬೆಳಗತರೇನ್ನ?"

..ರತಿ ತಟ್ಟೆಗೆ ಯಾವಾಗ ದುಡ್ಡಾಕೊ ಪದ್ಧತಿ ಬತ್ತೊ ..ರ ಬೆಳಗೋರ ಕಾಟ ಜಾಸ್ತಿಯಾಯ್ತು."

..ಪ ಬುಡು. ಆಗೊಂದು ಸತಿ ಕುಮಾರಸ್ವಾಮಿಗೆ ..ನೂ ಹಾಲು ಕರದು ಹೂದಿದ್ರು" ಎಂದಳು

..ಮಾರಸ್ವಾಮಿ ಅದೇನೊ ಮಡಗಿದ್ನಂತೆ. ಅದ ..ಸೋರು ಹೊತಗಂಡೋಗಿದ್ದರಂತಲ್ಲಾ" ಎಂದ

..ದೇನು ಮಡಗಿದ್ದ ಅವುರ ಕೈಗೆ ಸಿಗಂಗವ್ರುನು?" ..ಕಾಳಮಾವ.

..ದೇನೊ ಕಾಂಗ್ರೆಸ್ಸಿನೋರು ಹೊತಗಂಡೋಗ್ಯವುರೆ ..ಳ್ಳತಾ ಕೂತಿದ್ದನಂತೆ."

..ಾ ನಿನ್ನ. ಏನ್ನೂ ಹೊತಗಂಡೋಗಿಲ್ಲ ಕಣೊ. ..ಾಡಬೇಕು ಅಂತ ಇದ್ದ ಜಾಥವ ಕಾಂಗ್ರೆಸ್ಸಿನೋರು ..' ಮಾಡ್ಯವುರೆ ಅಂತವುನೆ. ಅದ್ನೆ ಕಳ್ಳತನ ..ಾ."

..ವುನೂ ಮಾಡಲೇಳು, ಯಾರು ಬ್ಯಾಡ ..ರು?" ಎಂದಳು ಜುಮ್ಮಿ.

..ನೆಯವ್ವ. ಇವುರು ಬೆಂಗಳೂರಿಂದ ವಂಟ್ರೆ ಅವುರು ..ಟ್ಟಿಯಿಂದ ಬರಬವುದಿತ್ತು. ಆದ್ರೆ ಅಲ್ಲಿ ನ್ಯಡಿಯೋ ..ರು ಕಮ್ಮಿ."

..ನ್ಯಾಕ್ ಟಗರಿನಂಗವುರಲ್ಲ, ನ್ಯಡಿಯಕ್ಕೇನೂ" ಎಂದ ..ವ.

..ಗರಿನಂಗೆ ಕಾಣ್ತರೆ ಕಣಮಾವ. ವಳಗಡೆಯೇನೂ ..ೀಜವಡಿಸಿಗಂಡಂಗಾಗ್ಯವುರೆ. ಕುಮಾರಣ್ಣನಿಗೆ ..ಲೇಷನ್ ಆಗ್ಯದೆ. ಚಲುವರಾಯಸ್ವಾಮಿಗೂ ಆಗ್ಯದೆ. ಇನ್ನ ದ್ಯಾವೇಗೌಡುನ್ನ ಹೊತಗಂಡೇ ಹೋಗಬೇಕು. ಇನ್ನುಳದೋರಿಗೆ ತ್ವಡೆ ಮಸಿತವಂತೆ. ಅಂಗಾಗಿ ಅವುರು ಸದ್ದಿಕೆ ಜೆಡಿಎಸ್ ಬಲ ಬುಟ್ಟು ಹ್ವಂಡದಿಲ್ಲ. ಆದ್ರೆ ಕಾಂಗ್ರೆಸ್ಸಿನೋರಿಗೆ ಸಿಕ್ಕೊ ಜನ ಬೆಂಬಲ ನೋಡಿ ವಟ್ಟೆಕಿಚ್ಚು ಬಂದುಬುಟ್ಟದೆ. ಅದ್ಕೆ ಬೈತ ಕುಂತವುರೆ."

"ಈ ಟೇಮಲ್ಲಿ ಬೈಬಾರ್ದು."

"ನಿಜ ಕಣ ಮಾವ. ಇವತ್ತಿನ ಇಂತ ಸ್ಥಿತಿಗೆ ಜೆಡಿಎಸ್‌ನೋರು ಕಾಂಗ್ರೆಸ್ ಬುಟ್ಟು ಬಿಜೆಪಿ ಜ್ವತೆಲಿ ಹೋದದ್ದೇ ಮೂಲ. ಅಂತದ್ರಲ್ಲಿ ಮುಕಳಿ ಮುಚ ಗಂಡು ಸುಮ್ಮನಾರ ಇರಬೇಕು. ಅದು ಬುಟ್ಟು ಆ ತಲಿಕಟ್ಟ ಬಿಜೆಪಿ ಲೀಡ್ರಿಗೆ ಎತ್ತಿಕೊಡಬಾರ್ದು."

"ಇನ್ನೇನು ಬಿಜೆಪಿ ಜೊತೆ ಸೇರಿಕತ್ತಿವಿ ಅನ್ನಂಗಾಡತಿದ್ರು" ಎಂದ ಸೀರ.

"ಊ ಕಣ ಮಾವ. ಈ ತುಂಡುಗುತ್ತಿಗೆ ಕಂಟ್ರಾಟ್‌ಗಳು, ಟ್ರಾನ್ಸ್‌ಫರ್ ದಂಧೆ ಮಾಡವ್ರು, ಇಂತವ್ಯಲ್ಲ ಆಗ್ಲೆ ಇನ್ನೇನು ನಮ್ಮ ರೇವಣ್ಣ ಉಪಮುಖ್ಯಮಂತ್ರಿಯಾಯ್ತನೆ, ಪಿಡಬ್ಲೂಡಿ, ವಿದ್ಯುತ್ ಖಾತೆ ಜೊತೆಗೆ ಕೆಎಂಎಫ್ ಕೈಗೆ ಬತ್ತದೆ ಅಂತ ಕುಣದಾಡಿಕಂಡು ಬೆಂಗಳೂರಿಗೆ ಹೋಗಿದ್ದೊ. ಅಲ್ಲಿ ದೇವೇಗೌಡ್ರು ಸೇರದು ಬ್ಯಾಡ ಅಂದ್ರೇನೊ, ಸುಮ್ಮನಾದೊ ಅತ್ಲಗೆ."

ಅಲ್ಲ ಕಣಮಾವ. ಈಗಾಗ್ಲೆ ಬಿಜೆಪಿ ಆಡಳಿತ ಕೆಟ್ಟು ಕ್ಯರ ಹಿಡದದಂತೆ. ಒಂದೇ ಒಂದು ಇಲಾಖೆನೂ ಸರಿಯಾಗಿ ಕ್ಯಲಸ ಮಾಡ್ತ ಇಲವಂತೆ. ಜ್ವತಿಗೆ ರೆಡ್ಡಿಗಳು, ರಾಮುಲು, ರೇಣುಕಾಚಾರಿ, ಹಾಲಪ್ಪ, ಇಂಥೋರ ಗುಂಪಿಗೆ ದ್ಯಾವೇಗೌಡ್ರು ಹೋಗಿ ಸೇರಿಕಂಡರೆ? ಅಕಸ್ಮಾತ್ ಸೇರಿಕಂಡ್ರೂ ಅನ್ನು. ಕರ್ನಾಟಕದ ಜನ ಇವಿನ್ಯಂಥಾ ಗತಿಗೆಟ್ಟವು ಅಂತ ಆಡಿಕಳದಿಲವೆ? ಆಗ ಪಾರ್ಟಿನೆ ಹಾಳಾಗೋಯ್ತದೆ. ಇದು ಸಾಮಾನ್ಯವಾದ ಜನಗಳಿಗೂ ತಿಳಿಯೋ ಅಂತದ್ದು. ಅದ್ಕೆ ದ್ಯಾವೇಗೌಡ್ರು ಒಪ್ಪಲಿಲ್ಲ. ಆಗ ಎಡೂರಪ್ಪನ ಗ್ಯಾಂಗು ತಿರಗ ರೆಡ್ಡಿಗಳ ಜ್ವತೆ ಚನ್ನಾಗಿರೊ ನಾಟಕ ಆಡ್ತಾ ಅವುರೆ."

"ಯಾರಪ್ಪ ನಾಟಕ ಆಡೊರು?" ಎಂದು ವಾಟಿಸ್ಸೆ ಹಾಜರಾದ.

"ಬಳ್ಳಾರಿಗೋಗನ ರಡಿಯಾಗಿರಕ್ಕ ಅಂದೋನು ತಿರಗ ಆ ಮಾತ್ನೆ ಆಡಲಿಲ್ಲವಲ್ಲ ನೀನು" ಎಂದಳು ಜುಮ್ಮಿ.

"ಬಳ್ಳಾರಿಗೋಗಕ್ಕೆ ಸ್ವಲಪ ಥಿಂಕ್ ಮಾಡಂಗಾಗ್ಯದೆ ಕಣಕ್ಕ"

"ಅದ್ಯಾಕ್ ತಿಣಕಬೇಕ್ಲ?"

"ತಿಣಕದಲ್ಲ, ಥಿಂಕ್ ಮಾಡಂಗಾಗ್ಯದೆ. ಆ ರಾಮುಲು ಈಗಾಗ್ಲೆ ಜೈಲಲ್ಲಿರೊ ರೌಡಿಗಳನ್ಯಲ್ಲ ಕಾಂಟ್ಯಾಕ್ಟ್ ಮಾಡಿ, ಅವುರಿಗೆ ಗೊತ್ತಿರೊ ರೌಡಿಗಳಿಗ್ಯಲ್ಲ ಹೇಳಿ, ಕಾಂಗ್ರೆಸ್ಸಿನೋರು ಬಳ್ಳಾರಿಗೆ ಬಂದಾಗ ವಿಚಾರಿಸಿಗಳಿ ಅಂದವುನಂತೆ. ಇನ್ನ ಜನಾರ್ದನ ರೆಡ್ಡಿ ಆಂಧ್ರದ ರೌಡಿಗಳಿಗೆ ಹೇಳಿ ಕಳಿಸಿದ್ದನಂತೆ.

"ನೀನು ಹೋಗದೆಯಿರತಿಯಾ? ಇಂತ ಟೇಮಲ್ಲಿ ನಿನ್ನ ಜೀವ ಊರಲ್ಲಿರದೇ ಹೆಚ್ಚು ಕಂಡ್ಯ."

"ಅಕ್ಕ, ನಿಜ ಹೇಳಬೇಕು ಅಂದ್ರೆ ನಾನಾಗೊವತ್ತಿಗೆ ಇನ್ನು ಊರಲ್ಲಿದ್ದಿನಿ ಕಣಕ್ಕ. ಯಾರಾರ ಊರಲ್ಲಿ ಇರಕ್ಕಾಯ್ತದೇನಕ್ಕ? ನೋಡು ಮದ್ಲಿಗೆ ನಮ್ಮೂರಲ್ಲಿ ಒಂದೇ ಒಂದು ಕಾಂಗ್ರೆಸ್ ಪಾರ್ಟಿ ಇತ್ತು, ಊರ್ಯಲ್ಲ ಒಗ್ಗಟ್ಟಾಗಿದ್ರು, ಹಬ್ಬ ಹರಿದಿನ ಚನ್ನಾಗಿ ನಡಿಯವು. ಅಮ್ಯಾಲೆ ಜನತಾದಳ ಬಂತು, ಊರು ಯರಡು ಭಾಗಾಯ್ತು. ಈಗ ಮೂರು ಭಾಗ ಆಗ್ಯದೆ. ಊರಬ್ಬ ನ್ಯಡದು ಮೂರು ವರ್ಷ ಆಯ್ತು. ಮದ್ಲು ಶಿವರಾಮೇಗೌಡ ಕಾಂಗ್ರೆಸ್ಸಲ್ಲಿದ್ದ, ಅಮ್ಯಾಲೆ ದಳದಲ್ಲಿದ್ದ, ಸಯಿಂಸಿಕೊಬವುದಾಗಿತ್ತು. ಈಗ ಬಿಜೆಪಿಗೋಗಿಬುಟ್ಟವುನೆ. ಅದೂ ಯಾವಾಗ್ಲು ಎಡೂರಪ್ಪನ ಜ್ವತೆಲೆ ಇರತನೆ. ಆದ್ರಿಂದ ಮುಂದೆ ಇನ್ನೂ ಕಷ್ಟದ ದಿನಗಳಿರಬವುದು. ಒಂದು ಒಳ್ಳೆ ಬೆಳವಣಿಗೆ ಏನಪ್ಪಾ ಅಂದ್ರೆ ಶಿವರಾಮೇಗೌಡ ಬಿಜೆಪಿ ಲೀಡ್ರಾಗಿರೋದ್ರಿಂದ ನಮ್ಮ ಜಿಲ್ಲೆಲಿ ಬಿಜೆಪಿ ಬೆಳೆಯದಿಲ್ಲ, ಅದೊಂದೇ ನೋಡು ಸಂತೋಷದ ಸುದ್ದಿ."

"ಬಿಜೆಪಿ ಬ್ಯಳದ್ರೆ ನಿನಿಗೇನು?"

"ಇದೇನಕ್ಕ ಹಿಂಗಂತೀ? ಈಗಾಗ್ಲೆ ಗೋಹತ್ಯೆ ನಿಷೇಧ ಮಾಡಿ ರಾಜ್ಯಪಾಲ್ರು ಸಯಿನಿಗೆ ಕಳಿಸ್ಯವುರೆ. ಅವುರು ರಾಷ್ಟ್ರಪತಿಗೆ ಕಳಿಸ್ಯವುರೆ. ಅದೇನಾರ ಜಾರಿಯಾದ್ರೆ ನಿನ್ನ ಮನೆಲಿರೊ ಯರಡಸವ ಸಾಯುಗಂಟ ನೀನೆ ಇಟಗಬೇಕು."

"ಅದ್ಯಾಕಿಟಗಬೇಕು? ಸಂತಿಗೆ ತಗಂಡೋಗಿ ಮಾರಿದರಾಯ್ತಪ್ಪ."

"ಸಂತೆಲ್ಯಾರು ಕೊಳ್ತರಕ್ಕ? ಅಲ್ಲಿ ಯಾರೂ ಕೊಳ್ಳದಿಲ್ಲ. ನೀನೇ ಮಡಿಕಂಡು ಸಾಯುಗಂಟ ಹುಲ್ಲು ನೀರ ನೋಡಿಕಬೇಕು. ಸತ್ತ ಮ್ಯಾಲೆ ತಗಂಡೋಗಿ ಅಪ್ಪನ್ನೋ ಅವ್ವನ್ನೊ ಧಫನ್ ಮಾಡಿದಂಗೆ ಮಾಡಿಬರಬೇಕು. ಗಾಳಿ ಗರಾವ್ರು ನಂಬದಾದ್ರೆ ತಿಥಿನು ಮಾಡಬೇಕಾಯ್ತದೆ" ಎಂದು ವಾಟಿಸ್ಸೆ ನಕ್ಕ.



"ಅದ್ಯಾಕೆ ಇದ್ದಕ್ಕಿದ್ದಂಗೆ ಆ ಮಾತು ಬತ್ತೂ?" ಎಂದ ಕಾಳಮಾವ.

"ಆದ್ಯಾಕೆ ಅಂದ್ರೆ, ಆ ಬಳ್ಳಾರಿ ರೆಡ್ಡಿ ಮುಂಡೆವ್ರು ಶ್ರೀರಾಮುಲು ಅನ್ನೊ ಕ್ವಾಡಂಗಿ ಹಿಡಕಂಡು ಕುಣುಸ್ತಾ ಅವೆ ಕಣಮಾವ. ಅವುನ ಜಾತಿ ಜನ ಓಟು ಮಾಡಿದ್ರೆ ಇವು ಗೆಲ್ತವಂತೆ. ಅವೆ ಅವುನೆ ಲೀಡ್ರಲ್ಲಿಗೆ. ಕಾಂಗ್ರೆಸ್‌ನೋರು ಪಾದಯಾತ್ರೆ ಮಾಡಿದ್ರೆ ನಾನು ಮೈಸೂರುಗಂಟ ಮಾಡ್ತಿನಿ ಅಂತ ರಾಮುಲು ಅಂದ. ಅದ್ಕೆ ಎಡೂರ ಒಪ್ಪಲಿಲ್ಲ, ಕಡೆಗೆ ಅವುರು ಬಳ್ಳಾರಿಲೆ ಮಾಡಕ್ಕೆ ಸುರುವಾದ್ರು. ಆಗ ಏನಾರ ರೆಡ್ಡಿಗಳು ತಮಿಗೆ ತಾವ ದೂರಾದ್ರೆ ಅವುರ ಬುಟ್ಟು ಜೆಡಿಎಸ್ ಜೊತೆ ಸೇರಿ ಸಕಾರ ಉಳಿಸಿಗಳನ ಅಂತ ಈಶ್ವರಪ್ಪ ಅಂದ. ಅದ್ಕೆ ಜೆಡಿಎಸ್‌ನಲ್ಲಿದ್ದವ್ರು ತಯಾರಾದೊ. ಆದ್ರೆ ದ್ಯಾವೇಗೌಡ್ರು ಆಗದಿಲ್ಲ ಅಂದ್ರು."

"ವಳ್ಳೆ ತೀರ್ಮಾನ ಬುಡು."

"ಅದೇನು ಯೋಚನೆ ಮಾಡಿ ಹೇಳೊ ತೀರ್ಮಾನ ಅಮ್ಯಾಲೆ ಬಳ್ಳಾರಿಲಿ ಯಾವ್ರುದೇ ಲಾಡಜು, ಗೆಸ್ಟ್ ಹೌಸಲ್ಲಿ ಒಂದೇ ಒಂದು ರೂಮು ಸಿಕ್ಕದಂಗೆ ಮಾಡಿದ್ದನಂತೆ. ಹಿಂಗೆ ಕಾಂಗ್ರೆಸ್ಸಿನೋರಿಗೆ ಎಷ್ಟು ತೊಂದ್ರೆ ಕೊಡಬೇಕೊ ಅಷ್ಟನೂ ಕೊಡಕ್ಕೆ ತಯಾರಾಗಿದ್ದನಂತೆ."

"ಅಯ್ಯೋ, ಅಂಗ್ಯಲ್ಲ ಮಾಡಿದ್ದರೆ? ಅವುರ ಮನಿಯಾಳಾಗ."

"ಅಷ್ಟೆ ಅಲ್ಲ ಕಣಕ್ಕ ರಾಮುಲು ಅನ್ನೊನು ಜಾತಿ ಜನಗಳನ್ಯಲ್ಲ ಎತ್ತಿ ಕಟ್ಟಿದ್ದನಂತೆ. ನಾನು ವಾಲ್ಮೀಕಿ ನಾಯಕ. ನನ್ನನ್ನ ರಾಜಕೀಯವಾಗಿ ಮುಗಸಕ್ಕೆ ಕಾಂಗ್ರೆಸ್ಸಿನವುರು ಬತ್ತಾ ಅವುರೆ. ನೀವೆ ವಿಚಾರಿಸಿಗಳಿ ಅಂತ ಹೇಳಿದ್ದನಂತೆ. ಅಂತ ಜಾಗಕ್ಕೆ ನಾವು ಹೋದ್ರೆ ಗತಿಯೇನಕ್ಕ."

"ಬ್ಯಾಡಬುಡು. ನಾವೋಗಿ ಅಲೇನು ಬಾಸಣ ಮಾಡತಿದ್ವೆ?"

"ಆದ್ರು ಯಾವುದಾರ ವೆಯಿಕಲ್ ಸಿಕ್ಕಿದ್ರೆ ನಾನು ಹೋಗಿ ಬರನ ಅಂತ ಇದ್ದಿನಿ."

"ಅಲ್ಲಾ ಕಂಡ್ಯ, ಸರಕಾರ ಇಂತ ಕಾನೂನ ತರದು ಸರಿ. ನಾವೇನು ಬ್ಯಾಡ ಅನ್ನದಿಲ್ಲ. ಅದ್ಕೂ ಮದ್ಲು ಪ್ರತಿ ಹೋಬಳಿಲೂ ಮುದಿಯಾದವ ಕೊಳ್ಳೊ ಅಂತ ಯವಸ್ಥೆ ಮಾಡಬೇಕು. ದನಿನಾಸುಪತ್ರೆ ಮಾಡಬೇಕು. ಅಮ್ಯಾಲೆ ಯಾವ ಮುಂಡೆ ಮಕ್ಕಳು ದನಿ ಕಡಿಯದ ಬ್ಯಾಡ ಅಂತಿದ್ರೊ ಆ ನನಮಕ್ಕಳನ್ಯಲ್ಲ ಹಿಡಕಂಡು ಬಂದು ಗೋಸಾಲೆಲಿ ಕ್ಯಲಸ ಮಾಡಂಗೆ ಮಾಡಬೇಕು. ಇದ್ಯಲ್ಲ ಆದಮ್ಯಾಲೆ ಗೋವತ್ಯೆ ತಡಿಲಿ. ಅದು ಬುಟ್ಟು ಕ್ಯಲಸಿಲ್ದೆ ಎಡೂರಪ್ಪ ತರಡು ಕ್ಯರಕೊಂಡು ಗಾಯ ಮಾಡಿಕೊಂಡ ಅನ್ನಂಗೆ ಇದ್ಯಲ್ಲ ಯಾಕೆ ಬೇಕಿತ್ತೊ ಅಂತ?"

"ಅದಿರ್ಲಿ ದ್ವಡಪ್ಪ, ಕಾಂಗ್ರೆಸ್ಸಿನೋರು ಬಳ್ಳಾರಿಲಿ ಸಭೆ ಮಾಡಿದ್ರೆ ಇವುನುಯಲ್ಲಾ ಊರಿಗೋಗಿ ಸಭೆ ಮಾಡ್ಯನಂತೆ."

"ಅದಕಿಂತ ಹ್ವಳೆಗೆ ಸಿಕ್ಕಿ ಮನೆಕಳಕಂಡೋರಿಗೆ ಮನೆ ಕಟ್ಟಿಕೊಡಬವುದಿತ್ತು, ಕಂಡ್ಯ."

"!!!"


..ಇರುವುದು ಮತ್ತು ತೀರಿಕೊಳ್ಳುವುದು

..'ನೂರು ವರ್ಷ ಬದುಕಿ!' ಎಂದು ನನಗೆ ..ಕರು ಕೇಳಿಕೊಂಡಿದ್ದಾರೆ; ಹಾಗೆ ದೇವರಲ್ಲಿ ..ರ್ಥಿಸುವುದಾಗಿ ಭರವಸೆ ನೀಡಿದ್ದಾರೆ. ನಾನು 'ಯಾತಕ್ಕಾಗಿ ಅಷ್ಟು ವರ್ಷ?' ಎಂದು ..ದರೆ ಸ್ವಲ್ಪ ಕಸಿವಿಸಿಯಾಗಿದ್ದಾರೆ. ನಾನು ನನ್ನ ..ಮೇಲೆ ನಡೆಯಲಾಗದಿದ್ದರೆ, ನನ್ನ ಅನ್ನ ನಾನು ..ಲಾಗದಿದ್ದರೆ, ಬದುಕುವುದು ಎಂಬ ..ರ್ಣ, ಮೈಜುಮ್ಮೆನ್ನಿಸುವ ಕೆಲಸ ನನ್ನಿಂದ ..ವಾಗಿ ಆಗದಿದ್ದರೆ-ನಾನು ಬದುಕುವುದಿಲ್ಲ ..ಂದು ಅವರಿಗೆ ಹೇಳಿದ್ದೇನೆ. ಅದು ಸರಿ, ..ೊಬ್ಬರು ಒಂದೊಂದು ರೀತಿಯಲ್ಲಿ ..ಕುವುದು' ಎಂಬುದನ್ನು ಗ್ರಹಿಸುತ್ತಾರೆ. ಸಾವುಬದುಕಿನ ಬಗ್ಗೆ ಅದಷ್ಟೂ ಸ್ಪಷ್ಟವಾಗಿದ್ದ ಹೆಮಿಂಗ್‌ವೇ ಎಂಬ ..ವ್ ಸಾಹಿತಿ ತನ್ನ ಆರೋಗ್ಯದ ಬಗ್ಗೆ ತುಂಬ ಎಚ್ಚರ ವಹಿಸುತ್ತಿದ್ದ. ಕ್ಯೂಬಾದ ತನ್ನ ತೋಟದ ಮನೆಯ ..ದ ಮುಸೆಯ ಗೋಡೆಯ ಮೇಲೆಲ್ಲ ತನ್ನ ರಕ್ತದೊತ್ತಡದ (BP) ಮಟ್ಟವನ್ನು ಬರೆದಿಡುತ್ತಿದ್ದ. ನೊಬೆಲ್ ಬಹುಮಾನ ಬಂತು. ಅಪಾರ ಐಶ್ವರ್ಯ ಗಳಿಸಿದ. ಆದರೆ ಬದುಕು ಶೂನ್ಯವೆನ್ನಿಸಿದಾಗ, ಉಸಿರಾಡಲಾಗದಷ್ಟು ಸಂಕೋಚವೆನ್ನಿಸಿದಾಗ ಈತ ಆತ್ಮಹತ್ಯೆ ಮಾಡಿಕೊಂಡ.



ಮೊನ್ನೆ ಅಮೆರಿಕಾದ ಸಂಗೀತಗಾರನೊಬ್ಬ ತನ್ನ ಬಂದೂಕನ್ನು ತನ್ನ ತಲೆಗೆ ಗುರಿಯಿಟ್ಟು ಟ್ರಿಗರ್ ಹಾರಿಸಿ ಸತ್ತ. ಈತನ ಹೆಸರು ಕರ್ಟ್ ಕೊಬೈನ್. ಇವನಿಗೆ 27 ವರ್ಷ ವಯಸ್ಸಾಗಿತ್ತು. ಹಾಡತೊಡಗಿದರೆ ಸಾವು, ಪ್ರೇಮ, ಬದುಕು ಒಂದಾದಂತೆ ಹಾಡುತ್ತಿದ್ದ. ಹಾಡುವುದಕ್ಕಾಗಿಯೇ ಗಾಂಜಾ, ಹೆರಾಯಿನ್ ತೆಗೆದುಕೊಳ್ಳುತ್ತಿದ್ದ. ಆಗಾಗ ಬದುಕಬೇಕೆನ್ನಿಸಿ ಈತ ತನ್ನ ಗಾಂಜಾ ಚಟ ಬಿಡಲು ಯತ್ನಿಸಿದ. ಆಗಲಿಲ್ಲ. 'ನಾನು ಹೆಣದಂತೆ ತಣ್ಣಗೆ ಬದುಕುವುದಕ್ಕಿಂತ ಸಾಯಲು ಇಷ್ಟಪಡುತ್ತೇನೆ', 'ಜೀವನವೆಂಬುದು ಸತ್ತ ಸ್ಥಿತಿಯಲ್ಲ, ಅದನ್ನು ಸರಿಯಾಗಿ ಬದುಕಬೇಕು' ಎಂದು ಹೇಳುತ್ತಿದ್ದ ಈತನ ಹೆಂಡತಿ ಕೂಡ ಮದ್ಯ ಸೇವಿಸುವವಳು. ಅಪಾರ ದುಃಖದಲ್ಲಿ ಮುಳುಗಿದ ಈಕೆ ಅಳುತ್ತಾ ಹೇಳಿದಳು, 'ನಾನು ಹೇಳಿದಂತೆ ಹೇಳಿ.... ಈತ ಕೆಟ್ಟವನು, ಕೆಟ್ಟ ಮುಕುಳಿ... ಈತ ಸತ್ತು ನಮ್ಮನ್ನು ಸಾಯಿಸಿದ್ದಾನೆ. ಇವನಂಥ ಪ್ರೀತಿಯ, ಪ್ರತಿಭೆಯ ಮನುಷ್ಯನನ್ನು ನಾನು ಕಂಡಿಲ್ಲ!' ಅಂದಹಾಗೆ ಈ ಹೆಂಡತಿಯ ಹೆಸರು ಲವ್... ಪ್ರೇಮ.

-ಮೇ 4, 1994




ಬಳ್ಳಾರಿ ಬೆರ್ಚಪ್ಪ

ವಾಚಕ ಮಹಾಶಯರಲ್ಲಿ ಕೆಲವರಿಗಾದರೂ 'ಬೆರ್ಚಪ್ಪ' ಪದ ಪರಿಚಯ ಇಲ್ಲವಾಗಿರುವ ಕಾರಣವಾಗಿ....

ಹೊಲಗದ್ದೆಗಳಲ್ಲಿ ಬೆಳೆ ಬೆಳೆದು ತೆನೆ ಹಾಲುತುಂಬುವ ಸಮಯದಲ್ಲಿ ಗುಬ್ಬಚ್ಚಿ ಗಿಣಿ ಮುಂತಾದ ಪಕ್ಷಿಗಳು ಗುಂಪುಗುಂಪಾಗಿ ದಾಳಿ ಮಾಡುತ್ತವೆ. ಇದನ್ನು ತಡೆಯಲು 'ಬೆರ್ಚಪ್ಪ'ನನ್ನು ಎದ್ದು ಕಾಣುವಂತೆ ನಿಲ್ಲಿಸಲಾಗುತ್ತದೆ. ನಿಜವಾದ ಮನುಷ್ಯನೇ ನಿಂತಿದ್ದಾನೆ ಎಂದು ಭ್ರಮಿಸಿದ ಪಕ್ಷಿಗಳು ಹೆದರಿ ದೂರವೇ ಇರುತ್ತವೆ. ಕಟ್ಟಡ ನಿರ್ಮಾಣ ಸಮಯದಲ್ಲೂ ಇದನ್ನು ಬಳಸುವುದುಂಟು. ಇದನ್ನು

ಅಂಕಣ



ಎಚ್.ಎಲ್. ಕೇಶವಮೂರ್ತಿ

ತಯಾರಿಸುವುದು ಅತಿ ಸುಲಭ. ಕೆಲವು ಕೋಲುಗಳನ್ನು ತೆಗೆದುಕೊಂಡು ಅದಕ್ಕೆ ತಲೆ ಇಲ್ಲದ ಮನುಷ್ಯನ ಆಕಾರ ಕೊಡುತ್ತಾರೆ. ನಂತರ ಆ ಕಡ್ಡಿಗಳಿಗೆ ನೆಲ್ಲುಲ್ಲಿನ ರಕ್ತಮಾಂಸ ತುಂಬುತ್ತಾರೆ. ಅದರ ಮೇಲೆ ಹಳೆ ಇಜಾರ, ಶರಟು ತೊಡಿಸುತ್ತಾರೆ. ಮನುಷ್ಯ ಅಂದಮೇಲೆ ತಲೆ ಇರಬೇಕು ತಾನೆ... ಮಡಿಕೆಯ ಬಾಯಿ ಕೆಳಗೆ ಮಾಡಿ ರುಂಡವಿಲ್ಲದ ಮನುಷ್ಯಾಕೃತಿಗೆ ಇಡುತ್ತಾರೆ. ಕರಿ ಮುಸುಡಿ ಇದ್ದರೇನು ಚಂದ ಎಂದು ಅದಕ್ಕೆ ಸುಣ್ಣ ಹೊಡೆಯುತ್ತಾರೆ. ಹೊಸ ರುಚಿ ಕಾರ್ಯಕ್ರಮದಲ್ಲಿ ಟಿವಿಗಳಲ್ಲಿ ಹೇಳುವಂತೆ "ಇಗೋ 'ಬೆರ್ಚಪ್ಪ' ರೆಡಿ!"

ಸುಂದರವಾದ ಕಟ್ಟಡ ನಿರ್ಮಿಸುವಾಗ ಏಕೆ 'ಬೆರ್ಚಪ್ಪ' ಬೇಕು ಎಂದು ಹಲವರು ಕೇಳಬಹುದು. ಮನುಷ್ಯರ ಕಣ್ಣೊತ್ತಿಮಾರಿ ಕಣ್ಣೊ ಎನ್ನುವ ಮಾತು ಕೇಳಿರುತ್ತೀರಿ. ಎಲ್ಲರ ಕಣ್ಣೂ ಒಳ್ಳೆಯದಿರುವುದಿಲ್ಲ. ಕೆಲವರು ದುಷ್ಟರೂ ಇರುತ್ತಾರೆ. ಅಂತಹವರ ಕ್ರೂರ ನೋಟದ ಅಪಾಯದಿಂದ ಪಾರು ಮಾಡುವ ಮುಂಜಾಗ್ರತಾ ಕ್ರಮವಾಗಿ 'ಬೆರ್ಚಪ್ಪ' ನಿಲ್ಲಿಸುವ ಪದ್ಧತಿ ಲಾಗಾಯ್ತಿನಿಂದಲೂ ನಡೆದು ಬಂದಿದೆ. ಅದಕ್ಕನುಗುಣವಾಗಿ ಆರೋಗ್ಯ ಸಚಿವ ಶ್ರೀರಾಮುಲು 'ಬಳ್ಳಾರಿ ಬೆರ್ಚಪ್ಪ' ಆಗಲು ಹೊರಟಿದ್ದಾರೆ! ಅದು ಹೇಗಪ್ಪಾ ಅಂದರೆ....

ಮಾನ್ಯ ಸಚಿವರು ಈ ದಿಢೀರ್ ನಿರ್ಣಯಕ್ಕೆ ಬರಲು ಕಾರಣವಾದ ಪ್ರಸಂಗವನ್ನು ಪ್ರಸ್ತಾಪಿಸುವುದು ಅಗತ್ಯವಾಗಿದೆ. ಅದು ಏನಪ್ಪಾ ಅಂದರೆ....

ವಿಧಾನಸಭೆ ಅಧಿವೇಶನದಲ್ಲಿ ಅದಿರು ಕಳ್ಳತನದ ವಿಷಯವನ್ನೇ ಪ್ರಮುಖವಾಗಿ ವಿಪಕ್ಷಗಳು ಎತ್ತಿದ್ದು ಬಳ್ಳಾರಿ ಸಚಿವರುಗಳ ಪ್ರಾಮಾಣಿಕತೆಯನ್ನೇ ಪ್ರಶ್ನಿಸಿತ್ತು, ಅಪರಂಜಿ ಚಿನ್ನವಾದ ತಮ್ಮ ಮೇಲಿನ ಆರೋಪದಿಂದ ಕೆಂಡಾಮಂಡಲವಾದ ಸಚಿವರು 'ಬಳ್ಳಾರಿಗೆ ಬನ್ನಿ ನೋಡಿಕೊಳ್ತೀವಿ' ಎಂದು ವೀರಾವೇಷದಿಂದ ಹೇಳಿದರು. ಹೀಗೆ ಇದನ್ನು ಹೇಳಲು ಕಾರಣವಿಲ್ಲದೆ ಇರಲಿಲ್ಲ, ಈ ಪಂಥಾಹ್ವಾನ ಸಕಾರಣವಾಗಿಯೇ ಇತ್ತು, ಕಾಂಗ್ರೆಸ್ ಪಕ್ಷ ಎಂದರೆ ತಿಂದುಂಡು ಮಲಗುವ ಸೋಮಾರಿಗಳ ಪಕ್ಷ ಎಂದು ದೃಢಪಟ್ಟಿತ್ತು, ಇಲ್ಲಿಂದ ಬಳ್ಳಾರಿವರೆವಿಗೆ ನಡೆಯುವುದನ್ನು ಈ ಮೂದೇವಿಗಳು ಕನಸಿನಲ್ಲಿಯೂ ಯೋಚಿಸಲಾರರು ಎಂಬುದೇ ಸರ್ವರ ಅಭಿಪ್ರಾಯ ಆಗಿತ್ತು.

ಇಂತಹ ಆಹ್ವಾನದಿಂದ ವಿಪಕ್ಷಗಳು ಕಂಗಾಲಾಗಿ ಮುದುರಿ ಮೂಲೆ ಸೇರುತ್ತವೆ ಎಂದು ಮುಖ್ಯಮಂತ್ರಿಯಾದಿಯಾಗಿ ಸರ್ವರ ಅಭಿಪ್ರಾಯವೂ ಆಗಿತ್ತು, ಅದು ಯಾವ ದೆವ್ವ ಮೈಮೇಲೆ ಬಂದಿತ್ತೋ ಕಾಣೆ. 'ನಡೀರಿ ಬತ್ತೀವಿ' ಅಂದು ಬಿಡೋದೆ! ಆಗ್ಲೂ ಇದು ಕಾಂಗ್ರೆಸ್ಸಿನವರ ಬಡಿವಾರದ ಮಾತು ಅಂದು ಕೊಂಡ ಅವರು 'ಬನ್ನಿ ನೋಡ್ಕತ್ತೀವಿ' ಎಂದು ಧಮ್ಕಿ ಹಾಕಿದ್ರು. ಆದರೆ... ಈ ದಶಕದ ಅದ್ಭುತವೊಂದು ನಡೆದೇಹೋಯಿತು. ಕುಂಭಕರ್ಣ ಬಿರುದಿಗೆ ಪ್ರಶಸ್ತವಾದ ಪಾತ್ರವಾಗಬಹುದಾದ ಕಾಂಗ್ರೆಸ್ಸಾದ ಕಾಂಗ್ರೆಸ್ಸು 'ನಾಡ ರಕ್ಷಣೆಗಾಗಿ ನಮ್ಮ ನಡಿಗೆ' ಹಮ್ಮಿಕೊಂಡೇಬಿಡ್ತು!

ಕಾಂಗ್ರೆಸ್ ನಾಯಕರ ಅತಿಯಾದ ಉತ್ಸಾಹ ಕಂಡು ಇದು ಆರಂಭಶೂರತ್ವವೆಂದೇ ಭಾಜಪ ಪರಿಗಣಿಸಿತ್ತು, ಆದರೆ ದಿನಕಳೆದಂತೆ ಸಾಗರೋಪಾದಿಯಲ್ಲಿ ಜನರು ಬರಲು ಪ್ರಾರಂಭಿಸಿದರಲ್ಲಾ.....

ಯಡ್ಯೂರಪ್ಪನವರು ಎಚ್ಚೆತ್ತರು. 'ಪ್ರತಿಭಟನಾ ಪಾದಯಾತ್ರೆ ಮಾಡುವುದು ವಿಪಕ್ಷಗಳ ಹಕ್ಕು' ಎಂದು ಪ್ರಜಾತಂತ್ರದ ಮೂಲ ಪಾಠ ನೆನಪಿಸಿಕೊಂಡರಾದರೂ 'ಪಾದಯಾತ್ರೆ ಗಂಭೀರವಾಗಿರಬೇಕು. ಡ್ಯಾನ್ಸು ಹಾಡು ಇವೆಲ್ಲ ಅದರ ಪಾವಿತ್ರ್ಯತೆ ಹಾಳುಗೆಡುವುತ್ತೆ, ಇದು ನಮ್ಮ ಸಂಸ್ಕೃತಿಯಲ್ಲ' ಎಂದು ನಾವೇರಿ ರಾಗಹಾಡಿದರು. ಗಾಂಧಿ ಇರೋದೆ ಇಂತಹವರ ಸಹಾಯಕ್ಕಲ್ವಾ.... ಅವರ ಪಾದಯಾತ್ರೆಗಳನ್ನು ಸ್ಮರಿಸಿದರು. ಭಾಜಪ ಪ್ರಜ್ಞಾವಂತರಿಂದ ಪತ್ರಿಕೆಗಳಲ್ಲಿ ಲೇಖನವನ್ನೂ ಬರೆಸಿ ನೋಡಿದರು. ಆದರೆ ಇದು 'ಶವ' ಯಾತ್ರೆಯಲ್ಲ, 'ಜನ ಜಾಗೃತಿ' ಯಾತ್ರೆ, ಜನರ ಬಳಿಗೆ ಹೋಗುವ ಯಾತ್ರೆ. ಜಾನಪದ ನೃತ್ಯ ಹಾಡು ಇವೆಲ್ಲ ಈ ಮಣ್ಣಿನ ಸಂಸ್ಕೃತಿ ಹಾಗೆ ಹೀಗೆ ಎಂದು ಹಲವರು ಎಗರಿಬೀಳುವ ಲಕ್ಷಣ ಕಂಡದ್ದರಿಂದ.... ಏನು ಮಾಡಬೇಕೋ ಅದನ್ನು ಮಾಡುವುದರಲ್ಲಿ ನಿರತರಾದರು.

ಇಷ್ಟೆಲ್ಲ ಹಿನ್ನೆಲೆ ಆದ ನಂತರ ಪ್ರಸ್ತುತ ವಿಷಯಕ್ಕೆ ಬರೋಣ.

ಮಾತಾಪಿತೃಗಳು ಸಹೋದರಸಹೋದರಿಯರು ಮರಣ ಹೊಂದಿದಾಗ ಹಾಗೂ ದೇವರಿಗೆ ಹರಕೆ ತೀರಿಸಲು ಮುಡಿ ಕೊಡುವ ಸಂಪ್ರದಾಯ ಇದೆ. ಶ್ರೀರಾಮುಲು ತಲೆ ಬೋಳಿಸಿಕೊಳ್ಳಲು ಕಾರಣ ಬೇರೆಯೇ ಇದೆ. ಅವರನ್ನು ನೀವು ನೋಡಿದ್ದೀರೋ ಇಲ್ಲವೋ ಗೊತ್ತಿಲ್ಲ, ಶ್ರೀಯುತರು ಸುರಸುಂದರಾಂಗ ಅಂತೆ! ಅವರೇ ಅದನ್ನು ಹೇಳಿಕೊಂಡಿದ್ದಾರೆ. ಸ್ವಯಂಬಿರುದು ಪ್ರದಾನವೆಂಬುದು ಬಳ್ಳಾರಿ ಸಚಿವರಿಗೆ ಅಂಟಿದ ರೋಗವೋ ಏನೋ. ಅಂತೂ ಅವರ ಹೇಳಿಕೆಯಂತೆಯೇ ಸುಂದರವಾಗಿ ಕಾಣುತ್ತಾರೆ. ಬಳ್ಳಾರಿಗೆ ಬರುತ್ತಿರುವ ಕಾಂಗ್ರೆಸ್ಸಿಗರ ಕಣ್ಣಿಗೆ ತಾನು ಸುಂದರವಾಗಿ ಕಾಣಬಾರದು ಎಂಬ ಕಾರಣಕ್ಕೆ ತಲೆ ಬೋಳಿಸಿಕೊಂಡರಂತೆ! ಅಲ್ಲಿ ಇದಕ್ಕೆ ತಲೆ ಯಾಕೆ ಬೋಳಿಸಿಕೊಳ್ಳಬೇಕು, ಅವರು ಬರುವ ದಿವಸ ಬಳ್ಳಾರಿಯಿಂದ ಹೊರಗೆ ಇದ್ದರೆ ಆಗುತ್ತಿರಲಿಲ್ಲವೆ ಎಂದು ಕೇಳಬಹುದು. ನಿಮಗೆ ಇದು ಸರಿಯಾದ ಕ್ರಮ ಎನ್ನಿಸಿದರೆ ಅವರಿಗೆ ಅದೇ ಸರಿ ಅನ್ನಿಸಿತು. ಬೋಳಿಸಿಕೊಂಡರು ಅಷ್ಟೆ!

ಕೇಶಮುಂಡನ ಆಯ್ತು, ತೊಡುವ ಬಟ್ಟೆಗೆ ಬರೋಣ. ಕಪ್ಪು ಉಡುಪು ಧರಿಸಲು ಶ್ರೀಯುತರು ನಿರ್ಧರಿಸಿದ್ದಾರೆ. ಇದು ಅವರ ಒಳಉಡುಪಿಗೂ ಅನ್ವಯಿಸುತ್ತದೆಯೇ ಎಂಬುದು ಇರಲಿ ಅವರು ಅದನ್ನು ಧರಿಸುವರೇ ಎಂಬುದೂ ತಿಳಿಯದು. ಮೇಲೆ ಮಾತ್ರ ಕಪ್ಪು ಉಡುಪಿನಿಂದ



ಶೋಭಾಯಮಾನರಾಗಿದ್ದಾರೆ. ಈ ಕಪ್ಪು ಯಾಕೆ ಅಂದರೆ ಅಭಿವೃದ್ಧಿ ಪಥದಲ್ಲಿ ನಾಗಾಲೋಟದಲ್ಲಿ ಸಾಗುತ್ತಿರುವ ಬಳ್ಳಾರಿಗೆ ಕಾಂಗ್ರೆಸ್ಸಿಗರ ಕೆಟ್ಟ ಕಣ್ಣು ತಗುಲಬಾರದು ಎಂಬುದಕ್ಕೆ! ಮಾನ್ಯರೇ ಹೇಳಿರುವಂತೆ ಸುಂದರವಾದ ಮಗುವಿಗೆ ತಾಯಿಯಾದವಳು ಕಪ್ಪು ದೃಷ್ಟಿ ಬೊಟ್ಟು ಇಡುತ್ತಾಳಲ್ಲ ಹಾಗೇ ಇದೂ ಅಂತೆ! ಅಂದರೆ ಸನ್ಮಾನ್ಯರೂ ಬಳ್ಳಾರಿಗೆ ಕಪ್ಪು ಬೊಟ್ಟು ಅರ್ಥಾತ್ 'ಬಳ್ಳಾರಿ ಬೆರ್ಚಪ್ಪ' ಅಂದ ಹಾಗಾಯಿತು.

ಕರಿಬಟ್ಟೆ, ಬೋಳುತಲೆಯ ಶ್ರೀರಾಮುಲು ನಂತರದಲ್ಲಿ ವೀರಸನ್ಯಾಸ ವ್ರತ ಸ್ವೀಕರಿಸಿದರು. ಈ 'ಬಳ್ಳಾರಿ ಬೆರ್ಚಪ್ಪ' ಮಾಂಸಾಹಾರ ತ್ಯಜಿಸುತ್ತಾರಂತೆ! ಸಖತ್ತಾಗಿ ಸ್ವಾಹಾರಾನೆ ಹೊದೀತಾನೇನೋ ಎನ್ನುವ ಸಂಶಯ ಪಿಶಾಚಿಗಳಿ[ಗೆ] ಉತ್ತರವನ್ನೂ ನೀಡಿದ್ದಾರೆ. 'ನಾನು ಕಾಳು ಕಡ್ಡಿ ತಿನ್ನುತ್ತೇನ[ೆ]' ಎಂದಿದ್ದಾರೆ. ಸನ್ಯಾಸಿ ವ್ರತ ಅಂದರೆ ಹುಡುಗಾಟಾನ[ಾ]? ಅವರು ನೆಲದ ಮೇಲೆ ಅಂತೆ ಮಲಗೋದು! ಬರಿ ಕಾಲಿನಲ್ಲೇ ಅಂತೆ ನಡೆಯೋದು!

ಬಳ್ಳಾರಿ ಅಭಿವೃದ್ಧಿಗಾಗಿ ಏನೇನು ತ್ಯಾಗ ಮಾಡಬೇಕಾ[ಗಿ] ಬಂದಿದೆಯೋ ಸನ್ಮಾನ್ಯರಿಗೆ. ಇಂತಹ ತ್ಯಾಗಮಯಿ[ಗ]ೆ ಏನೆನ್ನಬೇಕ್ರಿ ಜನ ಅನ್ನೋದು... ಇವರು ಬಳ್ಳಾರಿ[ಗೆ] ಕಪ್ಪುಬೊಟ್ಟು ತಾನೆ. ಕಾಂಗ್ರೆಸ್ ಪಾದಯಾತ್ರೆ ಬಳ್ಳಾರಿ ಜಿಲ್ಲೆಗೆ ಪ್ರವೇಶಿಸುವ ಜಾಗದಲ್ಲಿ ಎಲ್ಲರಿಗೂ ಎದ[್ದು] ಕಾಣುವಂತೆ 'ಬಳ್ಳಾರಿ ಬೆರ್ಚಪ್ಪ'ನನ್ನು ನೇತು ಹಾಕಿದ[ರೆ] ಛೇಪಿತ್ತು ಅನ್ನಬಹುದ್ರೇನ್ರೀ....

ಇಷ್ಟು ಮೇಕಪ್ ವಿಷಯ ಆಯಿತು. ಇನ[್ನು] 'ಸ್ವಾಭಿಮಾನ ಯಾತ್ರೆ' ವಿಷಯ ಪರಿಶೀಲಿಸೋಣ.

ಕಾಂಗ್ರೆಸ್ ಅವರನ್ನು ಏನು ಬೇಕಾದರೂ ಅನ್ನಲಿ ಬೇಕಾದರೆ ಉಗೀಲಿ. ಸಹಿಸಿಕೊಳ್ಳುತ್ತಿದ್ರು. ಆದರೆ ಅವ[ರ] ಸಂಸ್ಕೃತಿಯೇ ಬಳ್ಳಾರಿ ಜನತೆಗೂ ಇದೆ ಎಂದು ಆರೋಪಿ[ಸ]ುವುದು ತರವಲ್ಲ, 'ಬಳ್ಳಾರಿ ಸಂಸ್ಕೃತಿಗೆ' ಅಂದರೇನು ಅರ್ಥ? 'ಬಳ್ಳಾರಿ ಗಣಿ ಕಳ್ಳರು' ಅಂದರೇನು? ಇದು ಬಳ್ಳಾರಿಯ ಜನತೆಗೆ ಆದ ಅವಮಾನ! ಅವರ ಸ್ವಾಭಿಮಾನಕ[್ಕೆ] ತಗುಲಿದ ಪೆಟ್ಟು! ಅದಕ್ಕಾಗಿ.... ಬಳ್ಳಾರಿ ಜಿಲ್ಲೆಯಾದ್ಯಂತ 'ಸ್ವಾಭಿಮಾನ ಯಾತ್ರೆ!' ಸಭೆ ನಡೆಯುವ ಊರುಗಳಲ್ಲೆಲ್ಲ ದೇವರ ದರ್ಶನ, ಪೂಜೆ!

ಎಂತಹ ದೈವಭಕ್ತಿ!

ಇದನ್ನೇ ಮೆಲುಕು ಹಾಕುತ್ತಾ ಕುಳಿತಿದ್ದೆ.

ಕ್ಯಾತೇಗೌಡ ಬಂದ.

'ಒಂದಂತೂ ಖಾತರಿ ಆಯ್ತು ಸಾ' ಅಂದ.

'ಏನೋ ಅದು' ಎಂದೆ.

'ದೇವರಿಲ್ಲ ಅನ್ನೋದು. ಇದ್ದರೂ ಬಳ್ಳಾರಿಲಂತೂ ಇಲ್ಲ ಅನ್ನೋದು' ಅಂದ.

ಅರ್ಥವಾಗಲಿಲ್ಲ, ಮುಖ ನೋಡಿದೆ.

'ಅಲ್ಲ ಸಾ... ರೆಡ್ಡಿ ಅಂಡ್ ಕೋ ಗುಡೀಲಿ ಪ್ರಮಾಣ ಮಾಡಿ ಕೋಟಗಟ್ಟಲೆ ಹಣ ನ್ಯಾಯಮಾರ್ಗದಲ್ಲಿ ದುಡಿದದ್ದು ಅಂತೇಳ್ತಿದ್ರೂ.... ದೇವರು ಇರುತ್ತಿದ್ರೆ ಸುಮ್ನಿರ್ತಿದ್ನ ಸಾ....'

ಪಾದಯಾತ್ರೆ ಪೇಟೆಂಟು!

ಪಾದಯಾತ್ರೆಗೂ ಪೇಟೆಂಟ್ ಉಂಟಾ?

ಉಂಟು!

ಯಾರದ್ದು ಅದು?

ಜಾತ್ಯತೀತ ಜನತಾದಳದ್ದು!

ಬಳ್ಳಾರಿ ಪಾದಯಾತ್ರೆಯ ಐಡಿಯ ಕೊಟ್ಟೋರು ಸನ್ಮಾನ್ಯ ಕುಮಾರಸ್ವಾಮಿಯವರಂತೆ! ಅದನ್ನು ಕಾಂಗ್ರೆಸ್ ಹೈಜಾಕ್ ಮಾಡಿದೆಯಂತೆ!

ಅದಕ್ಕೇ ಇರಬೇಕು. ನಾಗಮಂಗಲಕ್ಕೆ ಸನ್ಮಾನ್ಯರು ದಯಮಾಡಿಸಿದ್ದಾಗ 'ಕಾಂಗ್ರೆಸ್‌ನವರಿಗೆ ರಾಜಕೀಯ ವಿವೇಚನೆ ಇದ್ದರೆ ತಕ್ಷಣ ಪಾದಯಾತ್ರೆ ನಿಲ್ಲಿಸಲಿ' ಎಂದು ಅಪ್ಪಣೆ ಕೊಡಿಸಿದ್ದರು!

ಯಾಕೋ ಅನುಮಾನ.... ಇದೇನು 'ಜಾತ್ಯತೀತ ಭಾಜಪ' ಧ್ವನಿ ಇದ್ದ ಹಾಗೆ ಇದೆಯಲ್ಲಾ ಅಂತ.....

ಕಡೂರು ಕೆ.ಎಂ.ಕೆ.ತರಹದ ನಾಯಕನನ್ನು ಕಾಣಲಾರದೇನೋ?

ಆಗಸ್ಟ್ 4, 2010 ರ 'ಗೌರಿ ಲಂಕೇಶ್'ನಲ್ಲಿ ಪ್ರಕಟವಾದ ಬಿ. ಚಂದ್ರೇಗೌಡರ ಕಿರು ವರದಿ 'ಮಂತ್ರಿಯಾಗದೆ ಮರೆಯಾದ ಕೃಷ್ಣಮೂರ್ತಿ' ಸತ್ಯಕ್ಕೆ ಹತ್ತಿರವಾಗಿದೆ.

ನಮ್ಮ ಕಡೂರು ವಿಧಾನಸಭಾ ಕ್ಷೇತ್ರದ ಜನತೆ ತಮ್ಮಯ್ಯ, ಎನ್.ಕೆ. ಹುಚ್ಚಪ್ಪ, ಪಿ.ಬಿ. ಓಂಕಾರಮೂರ್ತಿ, ಎಂ. ವೀರಭದ್ರಪ್ಪನಂತಹ ರಾಜಕಾರಣಿಗಳನ್ನು ಶಾಸಕರನ್ನಾಗಿ ಮಾಡಿದ್ದರೂ.... ಚಿಕ್ಕಮಗಳೂರು ಜಿಲ್ಲೆಯ ಕಡೂರು ಕ್ಷೇತ್ರ ಮಂತ್ರಿಗಿರಿಯಿಂದ ವಂಚಿತವಾಗಿದ್ದಕ್ಕೆ ಕಾರಣ ಬಗ್ಗೆ ಕೆ.ಎಂ.ಕೆ. ಬಿಟ್ಟರೆ ಬೇರ್‍ಯಾರೂ ದಕ್ಷರಾಗಿರದಿದ್ದು ಅನಿಸುತ್ತದೆ. ಈ ಕ್ಷೇತ್ರದಲ್ಲಿ ಹಕ್ಕ-ಬುಕ್ಕರಂತೆ ಇದ್ದ ಪಿ.ಬಿ. ಓಂಕಾರಮೂರ್ತಿ ಮತ್ತು ಕೆ.ಎಂ. ಕೃಷ್ಣಮೂರ್ತಿ ಇವರಿಗೆ ಮಂತ್ರಿಗಿರಿ ಅವಕಾಶ ನೂಲೆಳೆ ಅಂತರದಲ್ಲಿ ತಪ್ಪಿದ್ದು ಮಾತ್ರ ಕಣ್ಣಾರೆ ಕಂಡ ವಾಸ್ತವ. ಕೃಷ್ಣಮೂರ್ತಿಯವರನ್ನು ಜಾತಿಬಲದಿಂದ ಸೋಲಿಸಿದ್ದ ಓಂಕಾರಮೂರ್ತಿ ಶಾಸಕರಾದ ನಂತರ ಕ್ಷೇತ್ರದ ಜನತೆಯಿಂದ ದೂರವಾದ್ದರಿಂದ ಬಯಸದೇ ಬಂದ ಮಂತ್ರಿಗಿರಿಯನ್ನು ಕೊಡಲು ರಾಮಕೃಷ್ಣ ಹೆಗಡೆ ನಿರಾಕರಿಸಿದ್ದರು. ಆದರೆ ತನ್ನ ದಕ್ಷತೆಯ ಕಾರಣದಿಂದ ಕ್ಷೇತ್ರದಾದ್ಯಂತ ಎಲ್ಲ ಜನರ ವಿಶ್ವಾಸಕ್ಕೆ ಪಾತ್ರರಾಗಿದ್ದ ಕೆ.ಎಂ. ಕೃಷ್ಣಮೂರ್ತಿಯವರಿಗೆ ದೇವೇಗೌಡ ಮತ್ತು ಸ್ವಜಾತಿ ಬಾಂಧವರಾಗಿದ್ದ ಮಾಜಿ ಉಪಮುಖ್ಯಮಂತ್ರಿ ಸಿದ್ಧರಾಮಯ್ಯನಿಂದ ತಪ್ಪಿದ್ದು ಮಾತ್ರ ದುರದೃಷ್ಟಕರ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ (ಇತರ ಎಲ್ಲಾ ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿದ್ದರೂ) ಜೆಡಿಎಸ್‌ನ ವೈಎಸ್‌ವಿ ದತ್ತನಂತಹವರನ್ನು ಮಣ್ಣು ಮುಕ್ಕಿಸಿದ್ದನ್ನು ಕಂಡರೆ ಈ ಕ್ಷೇತ್ರದಿಂದ ಕೃಷ್ಣಮೂರ್ತಿಯವರ ಅವಶ್ಯಕತೆ ಎಷ್ಟಿತೆಂಬುದು ಮನವರಿಕೆಯಾಗುತ್ತದೆ. ಈ ಕ್ಷೇತ್ರ ಬಹುಶಃ ಇನ್ನು ಮುಂದೆ ಕೆ.ಎಂ.ಕೆ.ಯಂಥ ರಾಜಕಾರಣಿಯನ್ನು ಕಾಣಲಾರದೇನೋ?

-ಪಂಚ್ಚಳ್ಳಿ ಜಿ. ದಯಾನಂದ ಸಾಗರ್, ಬೆಂಗಳೂರು

ಹೊಗಳಿಕೆ ತೆಗಳಿಕೆ

ಗೌರಿ ಲಂಕೇಶ್ ಅವರ ಸಂಪಾದಕತ್ವದಲ್ಲಿ 'ಲಂಕೇಶ್' ತುಂಬಾ ಚೆನ್ನಾಗಿ ಬರುತ್ತಿದೆ. ಪ್ರತಿ ವಾರ ಕುತೂಹಲವನ್ನು ಹೆಚ್ಚಿಸುತ್ತಿದೆ. 'ದೇಶಕಾಲ' ಕುರಿತ ಚರ್ಚೆ ಅದರ ಬಗೆಗಿನ ಭ್ರಮೆಯನ್ನು ಒಡೆಯುವಲ್ಲಿ ಯಶಸ್ವಿಯಾಗಿದೆ. ಇಂತಹ ಆರೋಗ್ಯಕರ ಚರ್ಚೆಗೆ 'ಲಂಕೇಶ್' ವೇದಿಕೆಯಾಗಲಿ.

- ಜಿ ಕೊಟ್ರೇಶ್, ಕೊಟ್ಟೂರು, ಬಳ್ಳಾರಿ ಜಿಲ್ಲೆ

'ನಾಡ ರಕ್ಷಣೆಗೆ ನಡಿಗೆ'ಯಲ್ಲಿ ಲಂಕೇಶ್ ಬಳಗವು ಭಾಗವಹಿಸಿದ್ದು ಪತ್ರಿಕೆಯ ಸಾಮಾಜಿಕ ಕಾಳಜಿಯ ದ್ಯೋತಕ, ಸಂದರ್ಭೋಚಿತ ಮತ್ತು ಅಭಿನಂದನೀಯ.

- ಡಾ. ಎಂ.ಬಿ.ರಾಮಮೂರ್ತಿ, ಬೆಂಗಳೂರು

ಗೌರಿ, ನೀನು ಭೈರಪ್ಪನ ಕಾದಂಬರಿಯನ್ನು ಓದಿ ನಮಗೆಲ್ಲ ದುಡ್ಡು ಉಳಿಸಿದ್ದೇನೆ ಅಂದುಕೊಂಡಿದ್ದೀಯಾ? ಖಂಡಿತಾ ಇಲ್ಲ, ನೀನೇ ದುಡ್ಡು ಕಳಕೊಂಡಿದ್ದೀಯಾ! ಏಕೆಂದರೆ ಒಂದು ಸಾವಿರ ರೂಪಾಯಿ ಕೊಟ್ಟರೂ ನಾವು ಭೈರನ ಕಾದಂಬರಿಗಳನ್ನು ಓದುವುದಿಲ್ಲ, ಇನ್ನು ಕೊಂಡು ಓದುವುದೆಲ್ಲಿಂದ ಬಂತು?!

- ಯೋಗೀಶ್ ಸೂರಪ್ಪ, ತುಮಕೂರು

ಆರೆಸ್ಸೆಸ್‌ಅನ್ನು ನಿಷೇಧಿಸುವುದಷ್ಟೇ ಅಲ್ಲ, ಮುಂದಿನ ಸಮಾಜದ ಆರೋಗ್ಯದ ದೃಷ್ಟಿಯಿಂದ ಅದನ್ನು ನಿರ್ನಾಮ ಮಾಡಬೇಕು. ಅಕ್ಕ, ನಿಮಗೆ ನನ್ನ ನೈತಿಕ ಬೆಂಬಲವಿದೆ.

- ರಂಗಸ್ವಾಮಿ, ಮೈಸೂರು

'ದೇಶಕಾಲ' ಕುರಿತ ಚರ್ಚೆಯ ಬಗ್ಗೆ ನನ್ನ ಅನಿಸಿಕೆಗಳು:

ಕನ್ನಡ ಸಾಹಿತ್ಯ ರಂಗದಲ್ಲಿ ಕೆಲವು ಬ್ರಾಹ್ಮಣ ಮನಸುಗಳು (ಹುಟ್ಟಿನಿಂದ ಬ್ರಾಹ್ಮಣರಷ್ಟೇ ಅಲ್ಲ) ಸಾಂಸ್ಕೃತಿಕ ಯಾಜಮಾನ್ಯ ಸ್ಥಾಪಿಸಲು ಹವಣಿಸುತ್ತಿರುವುದು ಇದೇ ಮೊದಲೇನಲ್ಲ, ಬಹಳ ಹಿಂದಿನಿಂದಲೂ ಇಂತಹ ಪ್ರಯತ್ನಗಳು ನಡೆದುಕೊಂಡು ಬರುತ್ತಲೇ ಇವೆ. ಇದರ ವಿರುದ್ಧ ಅಲ್ಲಿ-ಇಲ್ಲಿ ಕೆಲವು ವೇದಿಕೆಗಳಲ್ಲಿ ಗುಸುಗುಸು ನಡೆದದ್ದು ಬಿಟ್ಟರೆ, ಲತಾ-ಐಜೂರ್‌ರಂತೆ ಇಷ್ಟೊಂದು ನಿಷ್ಠುರವಾಗಿ, ನೇರವಾಗಿ, ಖಾರವಾಗಿ ಬ್ರಾಹ್ಮಣ್ಯದ ಯಜಮಾನಿಕೆಯನ್ನು ಕೊರಳಪಟ್ಟಿ ಹಿಡಿದು ಪ್ರಶ್ನಿಸಿದ್ದು ಇದೇ ಮೊದಲೆನಿಸುತ್ತಿದೆ.

ಹ್ಯಾಟ್ಸ್ ಆಫ್ ಟು ಲತಾ-ಐಜೂರು

ಇತ್ತೀಚೆಗೆ 'ದೇಶಕಾಲ' ಕುರಿತು 'ಲಂಕೇಶ' ವಾರ ಪತ್ರಿಕೆಗೆ ಲೇಖನ ಬರೆದಿರುವ ಬರಗೂರುರವರು ಈ ಸಂವಾದಕ್ಕೆ ಗಾಂಭೀರ್ಯತೆಯನ್ನು ತಂದಿದ್ದಾರೆ. ಕನ್ನಡದ ಇನ್ನಷ್ಟು ಜನಪರ ಮನಸುಗಳು ಮೌನ ಮುರಿದು ಈ ಸಂವಾದದಲ್ಲಿ ಭಾಗವಹಿಸುವಂತಾಗಬೇಕು.

-ಕೋರೆನಲ್ ದೇವಸೂಗೂರು, ರಾಯಚೂರು

ವಿವಾದ ಗುಂಪುಗಾರಿಕೆಯಲ್ಲಿ ಗಾಂಧಿನಗರ

ನ್ನಡ ಚಿತ್ರರಂಗ ನಾವಿಕನಿಲ್ಲದ ದೋಣಿಯಂತಾಗಿದೆ. ಇಲ್ಲದ ದೋಣಿ ಹೇಗೆ ಅಲೆಯ ರಭಸಕ್ಕೆ ಯದ್ವಾತದ್ವಾ ಚಿಸುತ್ತದೆಯೋ ಅದೇರೀತಿ ಗಾಂಧಿನಗರದ ಜನ ನಾಯಕನ ಕೊರತೆಯಿಂದಾಗಿ ದಿನಕ್ಕೊಂದು ದ ಅಲೆಯಲ್ಲಿ ಸಿಲುಕಿಕೊಂಡು ದಿಕ್ಕುದೆಸೆಯಿಲ್ಲದೆ ಚಿಸುತ್ತಿದ್ದಾರೆ.

ಿದ ಆರು ತಿಂಗಳುಗಳಲ್ಲಿ ಗಾಂಧಿನಗರದ ಜನರ ಯನ್ನು ಪರಾಮರ್ಶಿಸಲು ಹೊರಟರೆ ಅಲ್ಲಿ ಸಿಗುವುದು ಗುಂಪುಗಾರಿಕೆ, ವಿವಾದ, ಗೊಂದಲ... ಇತ್ಯಾದಿ ಗಳೇ. ಅದರ ಕಡೆಗೆ ಕಣ್ಣು ಹಾಯಿಸೋಣ ಬನ್ನಿ. ಸಂತ್‌ಕುಮಾರ್ ಪಾಟೀಲ್ ಚಲನಚಿತ್ರ ವಾಣಿಜ್ಯ ಳಿಯ ಅಧ್ಯಕ್ಷರಾದ ನಂತರ ಮೊದಲು ಮಾಡಿದ ಹಿಂದಿ ಚಿತ್ರ 'ಕೈಟ್ಸ್'ಅನ್ನು ಪ್ರದರ್ಶಿಸುತ್ತಿದ್ದ



ಟರ್‌ಗಳ ಮೇಲೆ ದಾಳಿ ನಡೆಸಿದ್ದು! ನಿಜ, ಪರಭಾಷೆ ಳನ್ನು ಪ್ರದರ್ಶಿಸುವ ಥಿಯೇಟರ್ ಮಾಲೀಕರ ೋಹಕ್ಕೆ ಕಡಿವಾಣ ಹಾಕಲೇಬೇಕು. ಆದರೆ ತಮ್ಮದೇ ಳಿಯ ಅಧೀನಕ್ಕೆ ಬರುವ ಥಿಯೇಟರ್‌ಗಳ ಮೇಲೆ ರ್ ಪದಾಧಿಕಾರಿಗಳೇ ದಾಳಿ ಮಾಡಿದ್ದು ಅಷ್ಟೊಂದು ತರುವಂತಹದ್ದಾಗಿರಲಿಲ್ಲ.


ೈಟ್ಸ್' ಚಿತ್ರದ ವಿಷಯದಲ್ಲಿ ಜಯಗಳಿಸಿದ ಕುಮಾರ್ ಪಾಟೀಲ್ ಮತ್ತು ತಂಡ 'ರಾವಣನ್' ಬಿಡುಗಡೆಯಾದಾಗಲೂ ಅಂತಹದ್ದೇ ಪರಾಕ್ರಮ ಸಲು ಸಜ್ಜಾಗಿತ್ತು. ಆದರೆ ಅದರ ಹಂಚಿಕೆದಾರರಾದ ನ್ಸ್ ಸಂಸ್ಥೆಯವರು ಕೋರ್ಟ್‌ನಿಂದ ಆದೇಶ ಪಡೆದು ರ್ ಪದಾಧಿಕಾರಿಗಳ ಉತ್ಸಾಹಕ್ಕೆ ತಣ್ಣೀರೆರಚಿದರು. ದಾದ ಮುಖಭಂಗದಿಂದ ಸಿಟ್ಟಿಗೆದ್ದ ಚೇಂಬರ್‌ನವರು ರ ರಿಲಯನ್ಸ್ ಸಂಸ್ಥೆಯವರದ್ದೇ ಆದ ಬಿಗ್ ಎಫ್‌ಎಂ ೋದ ವಿರುದ್ಧ ಸಮರ ಸಾರಿ ಅಲ್ಲಿ ಜಯಗಳಿಸಿದರು.

ಗ್ ಎಫ್‌ಎಂ ರೆಡಿಯೋದ ಜಾಕಿಗಳ ಬಾಯಿಗೆ ತ್ತೋ ಕಡಿವಾಣ ಹಾಕಬೇಕಾಗಿತ್ತು. ಕನ್ನಡ ಚಿತ್ರರಂಗದ ಪರೆಂದರೆ ಕಸಕ್ಕಿಂತ ಕಡಿಮೆ ಎನ್ನುವ ರೀತಿಯಲ್ಲಿ ಾಡುತ್ತಿದ್ದ ಆ ದುರಹಂಕಾರಿಗಳನ್ನು ಚಿತ್ರರಂಗದ ದರು ಮತ್ತು ಅವರ ಅಭಿಮಾನಿಗಳು ಇಷ್ಟು ಸಹಿಸಿಕೊಂಡಿದ್ದೇ ಅವರ ಪುಣ್ಯ. ಅದೇನೇ ಈ ಬಿಗ್ ಎಫ್‌ಎಂ ರೇಡಿಯೋ ಜಾಕಿಗಳ ಅತ್ಯಂತ ಜಾಣ್ಮೆಯಿಂದ ಸಮರ ಸಾರಿದ್ದು ನಿರ್ದೇಶಕರ ಅಧ್ಯಕ್ಷ ಎಂ.ಎಸ್.ರಮೇಶ್ ಮತ್ತವರ ತಂಡ. ದ್ರಸಿಂಗ್ ಬಾಬು ಅವರನ್ನು ಅಧ್ಯಕ್ಷ ಪದವಿಯಿಂದ ನಂತರ ಅಧಿಕಾರ ವಹಿಸಿಕೊಂಡಿರುವ ನಿರ್ದೇಶಕರ ಯುವ ಪಡೆ ಒಂದು ರೀತಿಯಲ್ಲಿ ಚೇಂಬರ್‌ಗಿಂತಲೂ ಕ್ರಿಯಾಶೀಲವಾಗಿ ಕೆಲಸ ನಡೆಸುತ್ತಿದೆ ಎನ್ನಬಹುದು. ಲಯನ್ಸ್‌ನವರು ಕನ್ನಡ ಚಿತ್ರರಂಗವನ್ನು ರೇಡಿಯೋ ಹೀಯಾಳಿಸುವ ಮೂಲಕ ಕನ್ನಡ ಚಿತ್ರಗಳನ್ನು ನೋಡಲು ಪ್ರೇಕ್ಷಕ ಬಾರದಂತೆ ಮಾಡುತ್ತಿದ್ದಾರೆ. ಆಗ ಅವರಿಗೆ ತಮ್ಮ ಬಿಗ್ ಥಿಯೇಟರ್‌ಗಳಲ್ಲಿ ಹಿಂದಿ ಚಿತ್ರಗಳನ್ನು ಪ್ರದರ್ಶಿಸಲು ಸಹಾಯಕವಾಗುತ್ತದೆ" ಎಂಬ ವಾದ ಒಂದು ರೀತಿಯಲ್ಲಿ ಸರಿ. ಯಾಕೆಂದರೆ ಕನ್ನಡದ ಕಲಾವಿದರನ್ನು ಹೀಯಾಳಿಸಿದಂತೆ ಅವರುಗಳು ಎಂದೂ, ಯಾವತ್ತೂ ಹಿಂದಿ ಚಿತ್ರರಂಗದ ಕಲಾವಿದರನ್ನು ಹೀಯಾಳಿಸಿದ ಉದಾಹರಣೆಗಳೇ ಇಲ್ಲ!

ಈ ರಿಲಯನ್ಸ್ ಸಂಸ್ಥೆ ಕನ್ನಡಿಗರಿಗಾಗಿ ಈತನಕ ಮಾಡಿದ್ದು ಒಂದೇ ಒಂದು ಚಿತ್ರ. ಅದು ಎಂ.ಎಸ್.ಸತ್ಯು ನಿರ್ದೇಶನದ 'ಇಜ್ಜೋಡು'. ಅದನ್ನು ತಮ್ಮ ಥಿಯೇಟರ್‌ನಿಂದ ಒಂದೇ ವಾರಕ್ಕೆ ಎತ್ತಂಗಡಿ ಮಾಡುವ ಮುಖಾಂತರ ರಿಲಯನ್ಸ್‌ನವರು ತಮ್ಮ 'ಕನ್ನಡ ಪ್ರೇಮ'ವನ್ನು ಪ್ರದರ್ಶಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಒಟ್ಟಾರೆಯಾಗಿ ಕನ್ನಡ ಚಿತ್ರರಂಗ ಮತ್ತು ಬಹುಕೋಟಿ ಬಂಡವಾಳದ ರಿಲಯನ್ಸ್ ಸಂಸ್ಥೆಯ ನಡುವೆ ಒಂದು ಹೋರಾಟ ನಡೆಯುತ್ತಿದೆ. ಖಂಡಿತವಾಗಿಯೂ ಪ್ರಾದೇಶಿಕ ಚಿತ್ರಗಳ ಅಸ್ತಿತ್ವಕ್ಕೆ ಇಂತಹ ದೊಡ್ಡ ಸಂಸ್ಥೆಗಳು ಅಡ್ಡಿಯಾಗುವುದರಿಂದ ಅದರ ವಿರುದ್ಧ ಹೋರಾಟ ಮಾಡಲೇಬೇಕಾಗಿದೆ.

ಆದರೆ ಇಂತಹ ಹೋರಾಟ ಮಾಡುವಾಗ ಸಾಮಾನ್ಯ ಜನರಲ್ಲಿ ಅದರ ಬಗ್ಗೆ ಅರಿವು ಮೂಡಿಸುವುದು ಚೇಂಬರ್ ನವರ ಕರ್ತವ್ಯ. ಇಲ್ಲದಿದ್ದರೆ ಚೇಂಬರ್‌ನವರೆಂದರೆ ಥಿಯೇಟರ್‌ಗಳ ಮೇಲೆ ದಾಳಿ ಮಾಡುವವರು, ಪರಭಾಷೆಯ ವಿರುದ್ಧ ಕತ್ತಿ ಮಸೆಯುವವರು ಎಂಬಿತ್ಯಾದಿಯಾಗಿ ಬ್ರ್ಯಾಂಡ್ ಆಗುವ ಸಾಧ್ಯತೆಯಿದೆ.



ರಿಲಯನ್ಸ್ ವಿರುದ್ಧದ ಹೋರಾಟ ಈ ರೀತಿಯಾದರೆ ದ್ವಾರಕೀಶ್ ಮತ್ತು ಭಾರತಿ ವಿಷ್ಣುವರ್ಧನ್ ನಡುವಿನ ಒಂದು ಸಣ್ಣ ಮನಸ್ತಾಪವನ್ನು ಚೇಂಬರ್ ಬಗೆಹರಿಸಿದ ರೀತಿ ಸಮರ್ಪಕವಾಗಿರಲಿಲ್ಲ. ಅವರಿಬ್ಬರ ಮಾತುಗಳು, ಪರಸ್ಪರ ದೋಷಾರೋಪಣೆಯಿಂದಾಗಿ ಉದ್ಯಮದ ವರ್ಚಸ್ಸಿಗೆ ಸಾಕಷ್ಟು ಹಾನಿಯುಂಟಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಇಂತಹ ಸಮಸ್ಯೆಗಳನ್ನು ಅದು ಮೊಳಕೆಯೊಡೆಯುವ ಮೊದಲೇ ಯಾಕೆ ಸರಿ ಮಾಡಬಾರದಿತ್ತು.

ದ್ವಾರಕಿ ಮತ್ತು ಭಾರತಿ ವಿಷ್ಣುವರ್ಧನ್ ನಡುವಿನ ವಿವಾದ ಪರಿಹಾರವಾಗುವ ಮೊದಲೇ ಈಗ ಗೋಲ್ಡನ್ ಸ್ಟಾರ್ ಗಣೇಶ್ ಮತ್ತು 'ಮುಸ್ಸಂಜೆ' ಮಹೇಶ್ ನಡುವಿನ ಮನಸ್ತಾಪ ಜಗಜ್ಜಾಹೀರಾಗಿ ವಾಕರಿಕೆ ಬರುವ ಹಂತ ತಲುಪಿದೆ. ಈ ಸಮಸ್ಯೆ ಭುಗಿಲೆದ್ದು ಒಂದು ವಾರವಾದರೂ ಚೇಂಬರ್‌ನವರು ಇದಕ್ಕೆ ಪರಿಹಾರವನ್ನೇ ಕಂಡುಕೊಂಡಿಲ್ಲ. ಇದೇನು ಜಮ್ಮು-ಕಾಶ್ಮೀರ ಸಮಸ್ಯೆಯೇ? ಈ ಚಿಕ್ಕ ಮನಸ್ತಾಪವನ್ನು ಇಷ್ಟೊಂದು ಸುದೀರ್ಘವಾಗಿ ಆಲೋಚಿಸಬೇಕೆ? ಒಂದು ಚಿಟಿಕೆ ಹೊಡೆಯುವಷ್ಟರಲ್ಲಿ ಇಂತಹ ಸಮಸ್ಯೆಗೆ ಪರಿಹಾರ ಕಂಡು ಹುಡುಕುವ ಜಾಣ್ಮೆ ಅಧ್ಯಕ್ಷರಿಗಿರಬೇಕು.

ಈ ಮಧ್ಯೆ ದಾವಣಗೆರೆಯಲ್ಲಿ ನಡೆದ ನೃತ್ಯ ಕಲಾವಿದರ ಸಂಘದ ಕ್ರಿಕೆಟ್ ಪಂದ್ಯಾವಳಿ ಬಗ್ಗೆ ಉದ್ಯಮದವರು ವಾರಗಟ್ಟಲೇ ಚರ್ಚಿಸಿದರು. "ಅಂಬರೀಶಣ್ಣ ಈ ಪಂದ್ಯಾವಳಿಯಲ್ಲಿ ಆಡುವುದು ಬೇಡಾಂದಿದ್ದಾರೆ. ಹೀಗಾಗಿ ಟೂರ್ನಮೆಂಟ್ ಫ್ಲಾಪ್ ಆಗುತ್ತದೆ" ಎಂದು ಅಂಬಿ ಅಭಿಮಾನಿಗಳು ಹವಾ ಎಬ್ಬಿಸಿದ್ದರು. ಅದಕ್ಕೆ ಪ್ರತ್ಯುತ್ತರವಾಗಿ ಸುದೀಪ್ ಬಂಡೆದ್ದು ನಿಂತು "ಟೂರ್ನಮೆಂಟ್‌ನಲ್ಲಿ ನಾವೆಲ್ಲ ಆಡುತ್ತೇವೆ" ಎಂದು ಘೋಷಿಸಿದರು. ಸುಮಾರು ಹದಿನೈದು ದಿನಗಳ ಕಾಲ ಗಾಂಧಿನಗರದ ಜನ ಗಣಿ ಹಗರಣದ ಗಲಾಟೆಯನ್ನೂ ಮರೆತು, ಚಿತ್ರಗಳನ್ನು ಮರೆತು ಕ್ರಿಕೆಟ್ ಪರ-ವಿರೋಧ ಹಗ್ಗ ಜಗ್ಗಾಟ ನಡೆಸಿ ಕಾಲಹರಣ ಮಾಡಿದರು. ಕೊನೆಗೂ ಕ್ರಿಕೆಟ್ ಆಡುವವರು ಆಡಿ ಬಂದರು. ಅಲ್ಲಿಗೀಗ ಕ್ರಿಕೆಟ್ ಕಾಂಟ್ರಾವರ್ಸಿಗೆ ಒಂದು ಸಣ್ಣ ಬ್ರೇಕ್ ಸಿಕ್ಕಿದೆ.

ಇದೆಲ್ಲದರ ಮಧ್ಯೆ ಬಸಂತ್‌ಕುಮಾರ್ ಪಾಟೀಲ್‌ರ ವಕ್ರಕಣ್ಣು ಮಾಧ್ಯಮದ ಮೇಲೆ ಬಿದ್ದಿದೆ. ಈಗಾಗಲೇ ಟಿವಿ9ಗೆ "ನೀವು ಉದ್ಯಮದ ವಿರೋಧಿ ವರದಿಗಳನ್ನು ಪ್ರಸಾರ ಮಾಡುವಂತಿಲ್ಲ" ಎಂದು ತಣ್ಣಗೆ ಧಮಕಿ ಹೊಡೆದಿದ್ದಾರೆ. "ನಮ್ಮ ವರದಿ ಬಗ್ಗೆ ಮಾತನಾಡಲು ನೀವು ಯಾರು?" ಎಂದು ಟಿವಿ 9ನವರೂ ಪಾಟೀಲರನ್ನು ಪ್ರಶ್ನಿಸಿದ್ದಾರೆ. ಬಹುಶಃ ಮುಂಬರುವ ದಿನಗಳಲ್ಲಿ ಮಾಧ್ಯಮ ಮತ್ತು ಉದ್ಯಮದ ನಡುವೆ ಒಂದು ಸಣ್ಣ ಸಮರ ನಡೆದರೂ ಆಶ್ಚರ್ಯವೇನೂ ಇಲ್ಲ.

ದಾವಣಗೆರೆಯಲ್ಲಿ ಲೂಸ್ ಮಾದ ಯಾನೆ ಯೋಗೇಶ್ ಕುಡಿದು ಕುಣಿದದ್ದು ಕೂಡಾ ಒಂದು ವಿವಾದವಾಗಿದೆ. ಮತ್ತೊಂದೆಡೆ ಸಿನಿಮಾ ಅಕಾಡೆಮಿಯ ಅಧ್ಯಕ್ಷ ನಾಗಾಭರಣ ಅವರು "ಡಬ್ಬಿಂಗ್ ಚಿತ್ರಗಳಿಗೆ ಅವಕಾಶ ಕೊಡಿ" ಎಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದು ಕೂಡಾ ದೊಡ್ಡ ವಿವಾದವಾಗಿದೆ. ಕೊನೆಗೆ ತನ್ನ ನಿಲುವನ್ನು ಸಮರ್ಥಿಸಿಕೊಳ್ಳಲಾಗದ್ದರಿದಲೋ, ಸಿನಿಮಾ ಅಕಾಡೆಮಿ ಅಧ್ಯಕ್ಷ ಸ್ಥಾನದ ಕುರ್ಚಿಯ ವ್ಯಾಮೋಹದಿಂದಲೋ ಭರಣ ಕ್ಷಮೆಯಾಚನೆ ಮಾಡಿ ಆ ಶಿಫಾರಸ್ಸನ್ನು ಬಿಟ್ಟು ಕೈ ತೊಳೆದುಕೊಂಡಿದ್ದಾರೆ. ಇಂತಹ ಸೂಕ್ಷ್ಮ ವಿಷಯಗಳನ್ನು ಬಹಿರಂಗವಾಗಿ ಪ್ರಸ್ತಾಪಿಸುವ ಮೊದಲು ಎರಡೆರಡು ಬಾರಿ ಚಿಂತಿಸಲು ಇವರಿಗೇನು ದಾಢಿ ಎಂಬುದೇ ಅರ್ಥವಾಗುತ್ತಿಲ್ಲ.

ಈ ಮಧ್ಯೆ ಹೊಸತಾಗಿ ಅಧಿಕಾರ ಸ್ವೀಕಾರ ಮಾಡಿಕೊಂಡಿರುವ ಯುವ ನಿರ್ದೇಶಕರ ಪಡೆ, ಸಂಘದ ಗತಕಾಲದ ಪದಾಧಿಕಾರಿಗಳು ನಡೆಸಿರುವ ಅವ್ಯವಹಾರವನ್ನು ಸದ್ಯದಲ್ಲೇ ಬಯಲಿಗೆಳೆಯುವ ಮಾತುಗಳು ಕೇಳಿಬರುತ್ತಿವೆ. ನಿರ್ದೇಶಕರ ಸಂಘದ ಹಿಂದಿನ ಪದಾಧಿಕಾರಿಗಳು ಲಕ್ಷಾಂತರ ರೂಪಾಯಿಗಳನ್ನು ಗುಳುಂ ಮಾಡಿರುವುದನ್ನು ಪತ್ತೆಹಚ್ಚಿದ್ದಾರೆ. ಇದು ಹೊರಬಿದ್ದ ಬಳಿಕ ಹಳೇ ಮತ್ತು ಹೊಸ ನಿರ್ದೇಶಕರುಗಳ ನಡುವೆ ಒಂದು ಜಟಾಪಟಿ ನಡೆಯುವುದು ಗ್ಯಾರಂಟಿ.

ಹೀಗೆ ಒಂದೆಡೆ ರಿಲಯನ್ಸ್ ಮಾಲೀಕತ್ವದ ಥಿಯೇಟರ್, ರೇಡಿಯೋಗಳ ವಿರುದ್ಧ ಹೋರಾಟ, ಪರಭಾಷಾ ಚಿತ್ರಗಳ ವಿರುದ್ಧದ ಸಮರ ಅನಿವಾರ್ಯವಾದರೆ; ಈ ಕ್ರಿಕೆಟ್ ಗಲಾಟೆ, ಕುಳ್ಳನ ತರಲೆ, ನಟ ಗಣೇಶನ ಚಿತ್ರದ ವಿವಾದ, ಭರಣರ ಡಬ್ಬಿಂಗ್ ಪೌರುಷತ್ವ... ಇವೆಲ್ಲವನ್ನೂ ತಪ್ಪಿಸಬಹುದಿತ್ತು. ಈಗ ವಾರಕ್ಕೊಂದು ಗಲಾಟೆ ಮತ್ತು ವಿವಾದಗಳಿಂದ ಕನ್ನಡ ಚಿತ್ರರಂಗವೆಂದರೆ ವಿವಾದಗಳ ನೆಲೆಬೀಡು ಎನ್ನುವಂತಾಗಿ ಬಿಟ್ಟಿದೆ. ಇದನ್ನು ಆದಷ್ಟು ಬೇಗ ಸರಿಪಡಿಸುವ ಜವಾಬ್ದಾರಿ ಸಂಬಂಧಪಟ್ಟವರ ಮೇಲಿದೆ. ಸದ್ಯದಲ್ಲೇ ರಜನೀಕಾಂತ್-ಐಶ್ವರ್ಯ ರೈ ನಟಿಸಿರುವ ರೋಬೋ ಚಿತ್ರ ತೆರೆಕಾಣಲು ಸಜ್ಜಾಗಿದೆ. ಅಂದರೆ ಮತ್ತೆ ಇನ್ನೊಂದು ಗಲಾಟೆ-ಗೊಂದಲವನ್ನು ಮುಂದಿನ ದಿನಗಳಲ್ಲಿ ನಾವೆಲ್ಲರೂ ನೋಡಿ 'ಆನಂದಿಸ'ಬಹುದಾಗಿದೆ! ಕಳೆದ ವರ್ಷವಷ್ಟೆ ಅಮೃತ ಮಹೋತ್ಸವ, ಹಾಡು ಡ್ಯಾನ್ಸ್‌ಗಳಿಂದ ಸುದ್ದಿಮಾಡಿದ ಗಾಂಧಿನಗರದವರು ಈ ವರ್ಷ ಯಾಕೆ ಹೀಗಾದರೋ?


• ಶೆಣೈ

shenoylankesh@gmail.com

ಇದು ಪ್ರಪಂಚದ ಎಂಟನೇ ಅದ್ಭುತ!

ಕನ್ನಡ ಚಿತ್ರವೊಂದು ಪ್ರಪಂಚದ ಏಳು ಅದ್ಭುತಗಳಿರುವ ದೇಶಗಳಲ್ಲಿ ಚಿತ್ರೀಕರಣಗೊಂಡಿದೆಯೆಂದರೆ ಅದು ಎಂಟನೇ ಅದ್ಭುತವಲ್ಲದೇ ಮತ್ತೇನು?

ಅಂತಹ ಒಂದು ಅಮೋಘವಾದ ಸಾಹಸಕ್ಕೆ ಕೈಹಾಕಿ ಯಶಸ್ಸು ಕಂಡವರು ನಿರ್ದೇಶಕ ರಘುರಾಮ್. ಈ ಚಿತ್ರ ಶಿವರಾಜ್‌ಕುಮಾರ್ ನಟಿಸಿರುವ 'ಚೆಲುವೆಯೆ ನಿನ್ನ ನೋಡಲು'. ಇದು ಈ ವಾರ ತೆರೆ ಕಾಣಲಿದೆ. ಇದು 'ಎಕ್ಸ್‌ಕ್ಯೂಸ್ ಮೀ' ಖ್ಯಾತಿಯ ನಿರ್ಮಾಪಕ ಎನ್.ಎಂ.ಸುರೇಶ್ ನಿರ್ಮಿಸಿರುವ ಅತ್ಯಂತ ಅದ್ದೂರಿಯ ಚಿತ್ರ.




ಸಾಧಾರಣವಾಗಿ ಕನ್ನಡ ಚಿತ್ರರಂಗವೆಂದರೆ ಬಡ ಚಿತ್ರರಂಗವೆಂದೇ ಗುರುತಿಸಲ್ಪಟ್ಟಿದೆ. ಈ ಹಿನ್ನೆಲೆಯಲ್ಲಿ ಇಡೀ ಭಾರತೀಯ ಚಿತ್ರರಂಗ ಕನ್ನಡದ ಕಡೆ ನೋಡುವಂತೆ ಮಾಡಿದ ರಘು-ಶಿವಣ್ಣ-ಸುರೇಶ್ ಈ ತ್ರಿಮೂರ್ತಿಗಳಿಗೆ ಕಂಗ್ರಾಟ್ಸ್ ಹೇಳಲೇಬೇಕು.

ಶಿವರಾಜ್‌ಕುಮಾರ್ ಅಭಿನಯದ ಈ ಚಿತ್ರ ಅವರ ಅಭಿಮಾನಿಗಳನ್ನು ಪುಳಕಗೊಳಿಸಬಹುದು. ಆದರೆ ಕೋಟ್ಯಾಂತರ ರೂ. ಬಂಡವಾಳ ಹೂಡಿದ ನಿರ್ಮಾಪಕ ಸುರೇಶ್ ಅವರಿಗೆ ಈ ಚಿತ್ರ ಲಾಭ ತಂದುಕೊಡುವುದೇ ಎಂದು ಹೇಳುವುದು ಕಷ್ಟ. ಹತ್ತುಹದಿನೈದು ದಿನಗಳಲ್ಲಿ ಒಂದೇ ಲೊಕೇಷನ್‌ನಲ್ಲಿ ಚಿತ್ರವನ್ನು ಸುತ್ತಿ ಬಿಡುವ ಬುದ್ಧಿವಂತರ ನಡುವೆ ಸುರೇಶ್‌ರಂತಹ ಆಸಾಮಿ ಎರಡು ವರ್ಷಗಳ ಕಾಲ ದೇಶ-ವಿದೇಶಗಳನ್ನು ಸುತ್ತಿ ಕನ್ನಡ ಚಿತ್ರವೊಂದನ್ನು ನಿರ್ಮಿಸಿದ್ದು ದುಸ್ಸಾಹಸದ ತರಹ ಕಾಣಿಸಬಹುದು. ಆದರೂ ಹದಿನೈದು ದಿನಗಳಲ್ಲಿ ಚಿತ್ರ ಸುತ್ತುವ ಜನರಿಗಿಂತ ಸುರೇಶ್‌ರಂತಹ ವ್ಯಕ್ತಿಯ ಸಾಹಸಕ್ಕೆ ನಾವು ಬೆಂಬಲ ನೀಡಬೇಕಾಗಿದೆ. ಇಂತಹ ಚಿತ್ರ ಬಾಕ್ಸಾಫೀಸ್‌ನಲ್ಲಿ ಸೋತರೆ ಕನ್ನಡ ಚಿತ್ರರಂಗ ಮತ್ತೆ ಕಂಠೀರವ ಮತ್ತು ಕೆ.ಆರ್.ಎಸ್.ನಲ್ಲೇ ಠಿಕಾಣಿ ಹೂಡಬಹುದು. ಆ ಕಾರಣಕ್ಕಾಗಿಯಾದರೂ ನಿರ್ಮಾಪಕರ ಈ ಸಾಹಸಕ್ಕೆ ಬೆಂಬಲ ರೂಪದಲ್ಲಿ ಒಮ್ಮೆಯಾದರೂ ನಾವು-ನೀವು ಈ ಚಿತ್ರವನ್ನು ನೋಡೋಣ....

ಬ್ಲಾಕ್ ಭರಣ

ಮೊನ್ನೆಮೊನ್ನೆಯಷ್ಟೇ ಡಬ್ಬಿಂಗ್‌ಗೆ ಅನುಮತಿ ನೀಡಿ ಎಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದ ಸಿನಿಮಾ ಅಕಾಡೆಮಿ ಅಧ್ಯಕ್ಷ ಟಿ.ಎಸ್.ನಾಗಾಭರಣ ಈಗ ತಿಪ್ಪರಲಾಗ ಹಾಕಿದ್ದಾರೆ. "ಅದು ಖಾಸಗಿ ಕಂಪೆನಿಯವರು ಮಾಡಿದ ಸರ್ವೆ. ಅದನ್ನು ನಾನು ಅಕಾಡೆಮಿ ಸದಸ್ಯರ ಗಮನಕ್ಕೆ ತರಲಿಲ್ಲ. ಈ ಶಿಫಾರಸ್ಸಿಗೆ ತೀವ್ರವಾದ ವಿರೋಧಗಳು ವ್ಯಕ್ತವಾಗಿರುವುದರಿಂದ ನಾನು ನೊಂದವರ ಕ್ಷಮೆಯಾಚಿಸುತ್ತೇನೆ ಮತ್ತು ಈ ಡಬ್ಬಿಂಗ್ ಶಿಫಾರಸ್ಸು ಮನವಿಯನ್ನು ಹಿಂತೆಗೆದುಕೊಳ್ಳುತ್ತೇನೆ" ಎಂದು ನಾಗಾಭರಣ ಪತ್ರಿಕಾ ಕಚೇರಿಗಳಿಗೆ ಇ-ಮೇಲ್ ಮಾಡಿದ್ದಾರೆ.



ಇಂತಹ ಒಂದು ಸಣ್ಣ ಶಿಫಾರಸ್ಸಿಗೆ ಹೆದರಿ ತನ್ನ ಸ್ವಂತಿಕೆಯನ್ನು ಕಳೆದುಕೊಂಡು ಅಧಿಕಾರದ ಕುರ್ಚಿಗೆ ಅಂಟಿಕೊಳ್ಳುವ ಭರಣರ ವರ್ತನೆ ಬಗ್ಗೆ ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ರಾಜಕಾರಣಿಯಂತೆ ಒಂದು ದಿನ ಆರ್ಭಟಿಸಿದ್ದು, ಮರುದಿನ ಕ್ಷಮೆ ಕೇಳಿದ್ದು ಖಂಡಿತವಾಗಿಯೂ ಭರಣರ ವೃತ್ತಿ ಜೀವನದಲ್ಲಿ ಒಂದು ಕಪ್ಪು ಚುಕ್ಕೆಯೆಂದೇ ಹೇಳಬೇಕು.



ಗಾಂಧಿನಗರವನ್ನು ಬೆಚ್ಚಿಬೀಳಿಸಿದ ಕೇಶವ!

ಬಿ.ಆರ್.ಕೇಶವ ಎಂಬ ನಿರ್ದೇಶಕನ ಬಗ್ಗೆ ಗಾಂಧಿನಗರದಲ್ಲಿ ನೂರಾರು ಕಥೆಗಳಿವೆ. ಆತ ಹತ್ತನ್ನೆರಡು ದಿನಗಳಿಗೆಲ್ಲಾ ಚಿತ್ರವನ್ನು ಸುತ್ತಿಬಿಡುತ್ತಾನೆಂಬುದು ಆತನ ಹಿತೈಷಿಗಳ ಅಭಿನಂದನೀಯ ಮಾತಾದರೆ, ಅದನ್ನೇ ಕೆಲವರು ಆರೋಪದ ರೀತಿಯಲ್ಲಿ ಹೇಳುವುದೂ ಉಂಟು. ಭಾರೀ ದಢೂತಿ ದೇಹದ ಕೇಶವ ಸಾಧಾರಣವಾಗಿ ಸಣ್ಣ ಬಜೆಟ್‌ನ ಚಿತ್ರಗಳನ್ನೇ ಮಾಡಿ ಗಾಂಧಿನಗರದಲ್ಲಿ ತನ್ನ ಅಸ್ತಿತ್ವವನ್ನು ತೋರಿಸಿದವರು.

'ಗ್ರೀಟಿಂಗ್ಸ್' ಎಂಬ ಚಿತ್ರದ ಶೇಕಡ 60ರಷ್ಟು ಭಾಗವನ್ನು ಕೇಶವ ಆದರೆ ಇದೀಗ ಇಡೀ ಗಾಂಧಿನಗರವೇ ಬೆಚ್ಚಿ ಬೀಳುವಂತೆ ತಮಿಳು ಮತ್ತು ತೆಲುಗು ಭಾಷೆಗಳಲ್ಲೂ ಏಕಕಾಲದಲ್ಲಿ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಈಗಾಗಲೇ ಮುಗಿಸಿದ್ದಾರೆ. ಈ ಚಿತ್ರವನ್ನು ಕನ್ನಡ ಮಾತ್ರವಲ್ಲ ನಿರ್ಮಿಸಿರುವ ಕೇಶವ್ ಇದೀಗ ಚಿತ್ರಿಸಿರುವುದು ಕೇಶವನ ವಿಶೇಷ. ಅಷ್ಟೇ ಅಲ್ಲ, ಅಮೆರಿಕಾದ ಬಗ್ಗೆ ಒಂದು ವಿಶೇಷವಾದ ಚಿತ್ರವನ್ನು ನಾಯಕ-ನಾಯಕಿಯರಿಲ್ಲದಿದ್ದರೂ ಎಡಿಟಿಂಗ್ ಟೇಬಲ್‌ನಲ್ಲಿ ಅದಕ್ಕೆ ಹೊಸ ರೂಪ ನೀಡಲು ಶ್ರಮಿಸುತ್ತಿದ್ದಾರೆ. ಈ ಚಿತ್ರದಲ್ಲಿ ಅಂತಹ ದೊಡ್ಡದೊಡ್ಡ ಚಿತ್ರ ನಿರೂಪಣಾ ಶೈಲಿಯಿಂದಲೇ ಗೆಲ್ಲುತ್ತದೆ ಎಂಬ ಆತ್ಮವಿಶ್ವಾಸ ಅವರದು.

ಅದೇನೇ ಇರಲಿ, ಬರೀ ಕಂಠೀರವ ಮತ್ತು ಲಾಲ್‌ಬಾಗ್‌ನಲ್ಲೇ ಹಾಡುಗಳನ್ನು ಸುತ್ತುತ್ತಾ ಸಣ್ಣ ಚಿತ್ರಗಳನ್ನು ಮಾಡುತ್ತಿದ್ದ ಕೇಶವ್ ಈಗ ಸ್ವಿಟ್ಜರ್‌ಲ್ಯಾಂಡ್ ಮತ್ತು ಅಮೆರಿಕಾಕ್ಕೆ ಹೋಗಿಬಂದಿರುವುದು ವಿಶೇಷ. ಅಷ್ಟೇ ಅಲ್ಲ; ಈ ಕೇಶವ್ ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಒಂದು ಪುಟ್ಟ ಸ್ಟುಡಿಯೋದ ಮಾಲೀಕ ಕೂಡಾ ಹೌದು.

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 18-08-2010 RNI No. KARKAN2005/140



ಕಿಟ್ಟಿ ಪಾಲಿಗೆ ಮತ್ತೆ ಮುಂಗಾರು

ಶ್ರೀನಗರ ಕಿಟ್ಟಿ ಪ್ರತಿಭಾವಂತ ಎಂಬುದೇನೋ ನಿಜ. ಆದರೆ ಈವರೆಗೆ ಈತನಿಗೆ ಅದೃಷ್ಟವೆಂಬುದು ಮೇಲಿಂದ ಮೇಲೆ ಕೈಕೊಟ್ಟಿದೆ. ಈಗ 'ಮತ್ತೆ ಮುಂಗಾರು' ಕಿಟ್ಟಿ ಪಾಲಿಗೆ ಹೊಸದೊಂದು ಮುಂಗಾರನ್ನು ಸುರಿಸಬಹುದು...

ಅದು 1971ನೇ ಇಸವಿ.

ಭಾರತ-ಪಾಕಿಸ್ತಾನದ ನಡುವೆ ಘೋರಾತಿಘೋರ ಯುದ್ಧ ನಡೆಯುತ್ತಿದ್ದ ಸಂದರ್ಭ. ಆಗ ಸಮುದ್ರಕ್ಕೆ ಇಳಿದಿದ್ದ ಹಡಗೊಂದು ಭೀಕರ ಚಂಡಮಾರುತಕ್ಕೆ ಸಿಕ್ಕು ಪಾಕ್ ಅಂಗಳಕ್ಕೆ ಜಾರಿಬಿಡುತ್ತದೆ.

ಆ ಹಡಗಿನಲ್ಲಿ ಸುಮಾರು 15 ಜನ ಮೀನುಗಾರರು ಮತ್ತು ಇತರೆ ಕಾರ್ಮಿಕರಿರುತ್ತಾರೆ. ಹಡಗು ದಿಕ್ಕು ತಪ್ಪಿ ಪಾಕ್ ಪಾಳಯದಲ್ಲಿ ಗೋಚರಿಸುತ್ತಿದ್ದಂತೇ, ಪಾಕ್ ಸೈನಿಕರು ಆ ಹಡಗಿನ ಮೇಲೆ ದಾಳಿ ಮಾಡುತ್ತಾರೆ. ಹಡಗಿನಲ್ಲಿದ್ದ ಅಷ್ಟೂ ಜನರನ್ನು ಎಳೆದೊಯ್ದು ಸೆರೆಯಲ್ಲಿಟ್ಟುಬಿಡುತ್ತಾರೆ. ಹೀಗೆ ಚಂಡಮಾರುತಕ್ಕೆ ಸಿಲುಕಿದ ಹಡಗಿನಿಂದ ಜೈಲುಪಾಲಾದ ಭಾರತೀಯ ಮೀನುಗಾರರು ವರ್ಷಗಟ್ಟಲೆ ಗಾಳಿ, ಬೆಳಕಿಲ್ಲದ ಕ್ರೂರ ಸೆರೆಯಲ್ಲಿ ಕಳೆಯಬೇಕಾಗುತ್ತದೆ. ಪಾಕ್ ಜೈಲಿನಲ್ಲಿ ಬಂಧಿಯಾದ ಈ ಭಾರತೀಯ ಜೀವಗಳು ಅಲ್ಲಿ ಕಳೆದದ್ದು ಬರೋಬ್ಬರಿ 21 ವರ್ಷಗಳನ್ನು.



21 ವರ್ಷಗಳ ಸೆರೆವಾಸದ ನಂತರ 1993ರಲ್ಲಿ ವಾಜಪೇಯಿ ಭಾರತದ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಈ ಬಂಧಿತ ಹಡಗು ಕಾರ್ಮಿಕರು ಮತ್ತು ಮೀನುಗಾರರು ಬಿಡುಗಡೆಗೊಂಡು ತಾಯ್ನೆಲಕ್ಕೆ ಕಾಲಿಟ್ಟರು. ಆ ಇಪ್ಪತ್ತೊಂದು ವರ್ಷಗಳ ಸುದೀರ್ಘ ಅವಧಿಯಲ್ಲಿ ಇಂಡಿಯಾದಲ್ಲಿ ಒಂಭತ್ತು ಮಹೋನ್ನತ ಪ್ರಧಾನಿಗಳು ಆಳ್ವಿಕೆ ನಡೆಸಿದ್ದರು. ಆದರೆ ಅವರಲ್ಲಿ ಯಾರೊಬ್ಬರೂ ಪಾಕ್‌ನಲ್ಲಿ ಬಂಧಿತರಾಗಿದ್ದ ಮೀನುಗಾರರತ್ತ ಕಣ್ಣೆತ್ತಿಯೂ ನೋಡಿರಲಿಲ್ಲ.

ಹೀಗೆ 1993ರಲ್ಲಿ ಬಿಡುಗಡೆಗೊಂಡ ಕಡಲ ಮಕ್ಕಳಲ್ಲಿ ನಮ್ಮ ಕನ್ನಡ ನೆಲದ ಉಸಿರೂ ಒಂದಿತ್ತು. ಆ ಜೀವದ ಹೆಸರು ನಾರಾಯಣ ಮಂಡಗದ್ದೆ.


ನಾರಾಯಣ ಮಂಡಗದ್ದೆ

ಮಂಡಗದ್ದೆ ಸಮೀಪದ ಮುವಳ್ಳಿ ಎಂಬ ಸಣ್ಣ ಗ್ರಾಮದ ಈ ಹುಡುಗ ಆಗಷ್ಟೇ ಎಂಟನೇ ಕ್ಲಾಸು ಓದಿಮುಗಿಸಿದ್ದ. ಮನೆಯಲ್ಲಿ ಕ್ರೂರ ಬಡತನ ಕೇಕೆ ಹಾಕುತ್ತಿತ್ತು. ಈ ಸಂದರ್ಭದಲ್ಲಿ ಓದು, ಬರಹಕ್ಕೆ ವಿದಾಯ ಹೇಳಿದ ಈ ಹುಡುಗ ಸೀದಾ ಮುಂಬೈ ಮಹಾನಗರದತ್ತ ಹೆಜ್ಜೆ ಹಾಕಿದ್ದ. ಅಲ್ಲಿ ಹೊಟೇಲುಗಳಲ್ಲಿ ಮುಸುರೆ ತಿಕ್ಕಿ ಮನೆಗೆ ಆಧಾರವಾಗಲು ಹೊರಟ. ಅದರಿಂದ ಸಿಗುತ್ತಿದ್ದ ಪುಡಿಗಾಸು ಈತನ ಹೊಟ್ಟೆಪಾಡಿಗೂ ಎಟುಕುತ್ತಿರಲಿಲ್ಲ. ಹೇಗಾದರೂ ಮಾಡಿ ಕಾರು ಚಾಲಕನಾಗಬೇಕು, ಅದೇ ತನ್ನ ಪರಮಗುರಿ ಎಂದುಕೊಂಡ ನಾರಾಯಣ ಕಾರು ಚಾಲಕನಾಗಿಯೂ ಒಂದಷ್ಟು ದಿನ ಕೆಲಸ ಮಾಡಿದ್ದ. ಆದರೆ ಆ ಕೆಲಸವೂ ನಾರಾಯಣನ ಕೈಗೆ ಹತ್ತಲಿಲ್ಲ. ಆನಂತರ ಮುಂಬೈನಲ್ಲಿ ಒಂದಷ್ಟು ಜನ ಹಡಗು ಕಾರ್ಮಿಕರೊಂದಿಗೆ ರೂಮ್ ಮಾಡಿಕೊಂಡಿದ್ದ. ಆಗ ಆತನ ಜೊತೆಗಾರರು ನಾರಾಯಣನನ್ನು ಕರೆದೊಯ್ದು ಹಡಗು ಮೆಕ್ಯಾನಿಕ್ ಕೆಲಸಕ್ಕೆ ಸೇರಿಸಿದ್ದರು.

ಶ್ರದ್ಧೆಯಿಂದ ಮೆಕ್ಯಾನಿಕ್ ಕೆಲಸವನ್ನು ಕಲಿತ ನಾರಾಯಣ ಹೇಗೋ ಜೀವನ ನಡೆಸುತ್ತಿದ್ದ. ಈ ಸಂದರ್ಭದಲ್ಲೇ ಹಡಗು ಚಂಡಮಾರುತಕ್ಕೆ ಸಿಕ್ಕಿ ದಾರಿತಪ್ಪಿತು. ಆ ಮೂಲಕ ನಾರಾಯಣನ ಜೀವನವೂ ದಿಕ್ಕುಗೆಟ್ಟಿತ್ತು. 27ನೇ ವಯಸ್ಸಿನಲ್ಲಿ ಬಂಧಿತನಾದ ನಾರಾಯಣ ಮತ್ತೆ ಸೆರಪಳಿಯಿಂದ ಬಿಡುಗಡೆ ಪಡೆದು ಭಾರತಕ್ಕೆ ಮರಳಿದಾಗ ಆತನಿಗೆ 48 ವರ್ಷ ವಯಸ್ಸಾಗಿತ್ತು.

ಸೆರೆವಾಸದಲ್ಲಿದ್ದ ಆ ಇಪ್ಪತ್ತೊಂದು ವರ್ಷಗಳಲ್ಲಿ ಈ ಮೀನುಗಾರರು ತಮ್ಮ ಮುಖ ಹೇಗಿದೆ ಎಂಬುದನ್ನೂ ಮರೆತುಬಿಟ್ಟಿದ್ದರಂತೆ. ಬೆಳಕಿನ ಸಣ್ಣ ಗೆರೆಯೂ ಇಲ್ಲದ, ಕಟ್ಟ ಕತ್ತಲೆಯಲ್ಲೇ ಈ ಜನ ಅಷ್ಟೂ ವರ್ಷ ಜೀವಿಸಿದ್ದರು. ತಿಂಗಳಿಗೊಮ್ಮೆ ಬಟ್ಟೆ ಬದಲಿಸುತ್ತಿದ್ದರಂತೆ, ದಿನಕ್ಕೆರಡು ಚಪಾತಿ ಬಿಟ್ಟರೆ ಬೇರೇನೂ ಆಹಾರವಿಲ್ಲ. ಜೀವನದಲ್ಲಿ ಯಾವತ್ತೂ ಮಾಂಸಾಹಾರವನ್ನು ಮುಟ್ಟದ ಸಸ್ಯಾಹಾರಿ ದೈವಭಕ್ತನೊಬ್ಬ ಹಸಿವು ತಾಳಲಾರದೇ, ಜೈಲು ಕೋಣೆಯಲ್ಲಿ ಓಡಾಡುವ ಜಿರಲೆ, ಇಲಿಗಳನ್ನು ಹಿಡಿದು ತಿನ್ನಲು ಆರಂಭಿಸಿದ್ದನಂತೆ. ನೀರಿನ ದಾಹ ತಾಳಲಾರದೆ ಅವರವರದ್ದೇ ಮೂತ್ರ ಕುಡಿದು ಬದುಕಬೇಕಾದ ನಿಕೃಷ್ಟ ಪರಿಸ್ಥಿತಿ ಆ ಬಂಧಿಗಳದ್ದಾಗಿತ್ತಂತೆ.

ಪಾಕಿಸ್ತಾನಿ ಆಡಳಿತದ ಪೈಶಾಚಿಕ ಹಿಡಿತದಿಂದ ಬಿಡಿಸಿಕೊಂಡು ಬಂದ ಸಂದರ್ಭದಲ್ಲಿ ಈ ಕಡಲು ಕಾರ್ಮಿಕರ ಕಣ್ಣಲ್ಲಿ ಆಶಯಗಳೇ ಸತ್ತುಹೋಗಿ ಕಳಾಹೀನವಾಗಿದ್ದವು. ಅವರೆಲ್ಲ ಒಂದರ್ಥದಲ್ಲಿ ಜೀವಂತ ಶವಗಳಾಗಿದ್ದರು.

ಇಷ್ಟೆಲ್ಲಾ ವಿವರಗಳನ್ನು ಈಗ ಹೇಳಲೂ ಒಂದು ಕಾರಣವಿದೆ.

ಅದೇನೆಂದರೆ, ಈ ವಾರ ಬಿಡುಗಡೆಯಾಗುತ್ತಿರುವ 'ಮತ್ತೆ ಮುಂಗಾರು' ಚಿತ್ರ ಇದೇ ನೈಜ ಸಂಗತಿಗಳನ್ನು ಒಳಗೊಂಡಿದ್ದಾಗಿದೆ. ನಾರಾಯಣ ಮಂಡಗದ್ದೆ ಅನುಭವಿಸಿದ ನರಕ ಯಾತನೆಗಳು ಈ ಚಿತ್ರದಲ್ಲಿ ಮತ್ತೆ ಜೀವ ಪಡೆದಿವೆ. ಕಳೆದು ಹೋದ ಬಾಲ್ಯ, ಬದುಕನ್ನು ಹುಡುಕಲು ಮುಂಬೈಗೆ ಹೊರಡುವ ನಾರಾಯಣನ ಪಾತ್ರದಲ್ಲಿ ನಾಯಕನಟ ಶ್ರೀನಗರ ಕಿಟ್ಟಿ ಅಭಿನಯಿಸಿದ್ದಾರೆ.

21 ವರ್ಷದ ಕಾರಾಗೃಹ ವಾಸದಿಂದ ಜನ್ಮಭೂಮಿಗೆ ಮರಳುವಷ್ಟರಲ್ಲಿ ನಾರಾಯಣನ ತಾಯಿ ಆತನ ತಿಥಿ ಮಾಡಿಮುಗಿಸಲು ನಿರ್ಧರಿಸಿದ್ದರಂತೆ. ಆದರೆ ಯಾವುದೋ ಜ್ಯೋತಿಷಿ 'ನಿನ್ನ ಮಗ ಬಂದೇ ಬರ್‍ತಾನೆ' ಎಂದು ಭವಿಷ್ಯ ನುಡಿದಿದ್ದನಂತೆ. ಹೀಗಾಗಿ ಆ ತಾಯಿ ಮಗನ ಬರುವಿಕೆಗೇ ಕಾಯುತ್ತಾ ಜೀವಹಿಡಿದು ಕೂತಿದ್ದರಂತೆ. ಸದ್ಯ 55 ವರ್ಷದ ನಾರಾಯಣ ಮಂಡಗದ್ದೆ ವಿಧವೆಯೊಬ್ಬಳಿಗೆ ಬಾಳು ನೀಡಿ ಶಿವಮೊಗ್ಗದ 'ದುರ್ಗಾಮೃತ' ಲಾಡ್ಜ್‌ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ.

ಹೀಗೆ ಬಿಡುಗಡೆಯಾಗಿ ಭಾರತಕ್ಕೆ ವಾಪಸ್ ಬಂದ ನಾರಾಯಣ ತನ್ನ ತಾಯಿ ಮತ್ತು ಸಂಬಂಧಿಗಳನ್ನು ಮತ್ತೆ ಹುಡುಕಿಕೊಂಡಿದ್ದು, ತನ್ನ ಹಳೇ ಪ್ರೀತಿಯನ್ನು ಶೋಧಿಸಿದ್ದೇ 'ಮತ್ತೆ ಮುಂಗಾರು' ಚಿತ್ರದ ಜೀವಾಳ.

ಕೃಷ್ಣಪ್ಪನ ದುಡ್ಡು-ದ್ವಾರ್ಕಿ ಎಫರ್ಟು

ಹಿಂದೆ 'ಬೈಟು' ಎಂಬ ಪ್ರಯೋಗಾತ್ಮಕ ಚಿತ್ರವನ್ನು ನಿರ್ದೇಶಿಸಿದ್ದ ದ್ವಾರ್ಕಿ ರಾಘು ವರ್ಷಗಟ್ಟಲೆ ಕೂತು ಮೀನುಗಾರರ ಸಮಸ್ಯೆ, ಪಾಕ್‌ನಲ್ಲಿ ಬಂಧಿತರಾದ ಭಾರತೀಯರ ಬಗ್ಗೆ ಒಂದಷ್ಟು ವಿವರಗಳನ್ನು ಕಲೆಹಾಕಿ, ಚಿತ್ರಕತೆ ಸಿದ್ಧಮಾಡಿ, ಈಗ ಅದನ್ನು ತೆರೆಯ ಮೇಲೆ ಕಟ್ಟಿಕೊಟ್ಟಿದ್ದಾರೆ.

'ಮುಂಗಾರು ಮಳೆ', 'ಮೊಗ್ಗಿನ ಮನಸು' ನಂತರ ಈ.ಕೃಷ್ಣಪ್ಪ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಈ ಚಿತ್ರದ ಕಥೆಯನ್ನು ಮೂರ್‍ನಾಲ್ಕು ವರ್ಷಗಳ ಹಿಂದೆಯೇ ದ್ವಾರ್ಕಿ ರಾಘು ಸಿದ್ಧಮಾಡಿಕೊಂಡಿದ್ದರೂ, ಇದನ್ನು ನಿರ್ಮಿಸಲು ಯಾರೂ ಮನಸು ಮಾಡುವುದಿಲ್ಲ ಎಂಬ ಕಾರಣಕ್ಕೆ, ದ್ವಾರ್ಕಿ ಅದನ್ನು ಯಾರಿಗೂ ಹೇಳೇ ಇರಲಿಲ್ಲವಂತೆ. ಆದರೂ ಒಮ್ಮೆ ಇದನ್ನು 'ಸುಮ್ಮನೇ ಹೇಳಿನೋಡೋಣ' ಎಂದು ದ್ವಾರ್ಕಿ ರಾಘು ಕೃಷ್ಣಪ್ಪನವರಿಗೆ ಕಥೆ ಹೇಳಿದ ತಕ್ಷಣ ಅವರು ಮರುಮಾತಾಡದೇ 'ಇದೇ ಕತೆ ಓಕೆ. ಸಿನಿಮಾ ಆರಂಭಿಸಿ' ಎಂದು ಗ್ರೀನ್ ಸಿಗ್ನಲ್ ಕೊಟ್ಟಬಿಟ್ಟರಂತೆ.

ಸಿನಿಮಾ ನಿಜಕ್ಕೂ ಯಾವ ಬಾಲಿವುಡ್ ಸಿನಿಮಾವನ್ನೂ ಮೀರಿಸುವಂತೆ ರೂಪುಗೊಂಡಿದೆ. ಸಮುದ್ರದ ಮಧ್ಯದಲ್ಲಿ ಹಡಗು ಸಿಲುಕಿಕೊಳ್ಳುವ ದೃಶ್ಯವಂತೂ ನೋಡುಗರನ್ನು ರೋಮಾಂಚನಗೊಳಿಸುತ್ತದೆ. ಈ ದೃಶ್ಯಗಳನ್ನು ಇಷ್ಟು ನೈಜವಾಗಿ ಸೃಷ್ಟಿಸುವುದಕ್ಕೆ ಶ್ರಮಿಸಿರುವ ಸಾಹಸ ನಿರ್ದೇಶಕ ಡಿಫರೆಂಟು ಡ್ಯಾನಿ ನಿಜಕ್ಕೂ ತಾವು ಡಿಫರೆಂಟ್ ಎನಿಸಿಕೊಂಡಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ದೇಶದ ಮೀನುಗಾರರು ಇವತ್ತಿಗೂ ಅನುಭವಿಸುತ್ತಿರುವ ಸಮಸ್ಯೆ ಸಂಕಟಗಳ ಸುತ್ತ ಈ ಸಿನಿಮಾ ಮೂಡಿಬಂದಿದೆ. ಕೆಲಸಕ್ಕೆ ಬಾರದ ಹೊಡಿ, ಬಡಿ, ಕಡಿಗಳ ಕಮರ್ಷಿಯಲ್ ಚಿತ್ರಗಳ ಮಧ್ಯೆ 'ಮತ್ತೆ ಮುಂಗಾರು' ಕಳೆದುಹೋಗಬಾರದಷ್ಟೇ.

ಕಿಟ್ಟಿ ಪಾಲಿಗೂ ಮುಂಗಾರು



ಶ್ರೀನಗರ ಕಿಟ್ಟಿ ಪ್ರತಿಭಾವಂತ ಎಂಬುದೇನೋ ನಿಜ. ಆದರೆ ಈವರೆಗೆ ಈತನಿಗೆ ಅದೃಷ್ಟವೆಂಬುದು ಮೇಲಿಂದ ಮೇಲೆ ಕೈಕೊಟ್ಟಿದೆ. ಸೂರಿ ಕನಸಿಟ್ಟು ನಿರ್ದೇಶಿಸಿದ 'ಇಂತಿ ನಿನ್ನ ಪ್ರೀತಿಯ' ಚಿತ್ರ ಕ್ಲಾಸ್ ಮತ್ತು ಮಾಸ್ ಎರಡನ್ನೂ ಒಲಿಸಿಕೊಳ್ಳುವಲ್ಲಿ ಸೋತಿತ್ತು. ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಒಲವೆ ಜೀವನ ಲೆಕ್ಕಾಚಾರ' ಲೆಕ್ಕತಪ್ಪಿ ಪ್ರೇಕ್ಷಕರ ಅಸಡ್ಡೆಗೆ ಗುರಿಯಾಯಿತು. ಇನ್ನು ದಿನೇಶ್ ಬಾಬು ನಿರ್ದೇಶಿಸಿದ್ದ 'ಜನುಮದ ಗೆಳತಿ'ಯಲ್ಲಿ ನಟಿಸಿದ್ದಕ್ಕೆ ಕಿಟ್ಟಿ ಈಗಲೂ ತಲೆತಲೆ ಚಚ್ಚಿಕೊಳ್ಳುತ್ತಿದ್ದಾರೆ. ಇದ್ದುದರಲ್ಲಿ ಜೇಕಬ್ ವರ್ಗೀಸ್ ನಿರ್ದೇಶನದ 'ಸವಾರಿ'ಯೊಂದೇ ಕಿಟ್ಟಿಯ ಬಣ್ಣದ ಬದುಕಿಗೆ ಕಳೆ ತಂದುಕೊಟ್ಟಿದ್ದು. ಈಗ 'ಮತ್ತೆ ಮುಂಗಾರು' ಕಿಟ್ಟಿ ಪಾಲಿಗೆ ಹೊಸದೊಂದು ಮುಂಗಾರನ್ನು ಸುರಿಸಬಹುದು. ಮಾತ್ರವಲ್ಲ ಯುವ ನಟರಾದ 'ಪಯಣ' ರವಿಶಂಕರ್, ಅಶ್ವಥ್ ನೀನಾಸಂ, ಮುನಿ... ಹೀಗೆ ಈ ಚಿತ್ರದಲ್ಲಿ ನಟಿಸಿರುವ ಎಲ್ಲರ ಪಾಲಿಗೂ ಇದು ಹೊಸ ಉತ್ಸಾಹ ಮೂಡಿಸಬಹುದು.

ಕನ್ನಡ ಚಿತ್ರರಂಗದಲ್ಲಿ 'ಮತ್ತೆ ಮುಂಗಾರು' ಬೀಳಬೇಕಿದೆ, ಹದಗೆಟ್ಟಿರುವ ಬಣ್ಣದ ನೆಲ ಒಂದಿಷ್ಟು ಹದಗೊಳ್ಳಬೇಕಿದೆ...

● ಅರುಣ್ ಕುಮಾರ್.ಜಿ
arunodayagc@gmail.com

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44